# ಐಕ್ಯರಂಗ



ಸಂಪುಟ 21 ಸಂಚಿಕೆ 50
ಡಿಸೆಂಬರ್ 7-13, 1998
ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ


# ಬಿಜೆಪಿಗೆ ಅಧಿಕಾರದಲ್ಲಿ ಮುಂದುವರಿಯಲು ಯಾವುದೇ ನೈತಿಕ ಹಕ್ಕಿಲ್ಲ

**- ಸುರ್ಜಿತ್**

ರಾಜಸ್ತಾನ, ಮಧ್ಯಪ್ರದೇಶ ಮತ್ತು ದಿಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಸಮಗ್ರ ಸೋಲು ಕೇಂದ್ರದ ಎಂಟು ತಿಂಗಳ ವಾಜಪೇಯಿ ಸರಕಾರ ಅನುಸರಿಸಿಕೊಂಡು ಬಂದ ಧೋರಣೆಗಳನ್ನು ಜನತೆ ಸಾರಾಸಗಟು ತಿರಸ್ಕರಿಸಿದ್ದಾರೆಂಬ ಸೂಚನೆ ನೀಡಿದೆ. ಇದರ ನಂತರ ಬಿಜೆಪಿಗೆ ಆಳ್ವಿಕೆ ಮುಂದುವರೆಸಲು ಯಾವುದೇ ನೈತಿಕ ಹಕ್ಕಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಒತ್ತಿ ಹೇಳಿದ್ದಾರೆ. ಅವರು ಚುನಾವಣಾ ಫಲಿತಾಂಶಗಳು ಮತ್ತು ಅದರ ಪರಿಣಾಮಗಳ ಕುರಿತು ಚರ್ಚಿಸಲು ನಡೆದ ಪಕ್ಷದ ಪೊಲಿಟ್‌ಬ್ಯೂರೋದ ಸಭೆಯ ನಂತರ ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸುತ್ತಾ ಮಾತನಾಡುತ್ತಿದ್ದರು.

ಬಿಜೆಪಿ ನೇತೃತ್ವದ ಸರಕಾರಕ್ಕೆ ಪರ್ಯಾಯದ ಬಗ್ಗೆ ಕೇಳಿದ ಹತ್ತಾರು ಪ್ರಶ್ನೆಗಳನ್ನು ಉತ್ತರಿಸುತ್ತಾ ಸರಕಾರ ಕುಸಿಯಿತೆಂದಾಗ ಒಂದು ಪರ್ಯಾಯ ಮೂಡಿಬರುತ್ತದೆ ಎಂದು ಸುರ್ಜಿತ್ ಹೇಳಿದರು. ಸಿಪಿಐ(ಎಂ) ಗಾಗಲೀ, ಇತರ ವಿರೋಧಿ ಪಕ್ಷಗಳಿಗಾಗಲೀ ವಾಜಪೇಯಿ ಸರಕಾರವನ್ನು ಉರುಳಿಸುವಲ್ಲಿ ಆಸಕ್ತಿಯಿಲ್ಲ, ಆದರೆ ಅದು ಕುಸಿದುಬಿದ್ದಾಗ ಒಂದು ಪರ್ಯಾಯವನ್ನು ಒದಗಿಸಲಾಗುವುದು ಎಂದು ಅವರು ಮತ್ತೆ-ಮತ್ತೆ ಸ್ಪಷ್ಟಪಡಿಸಿದರು.

"ಕಪಟೋಪಾಯಗಳಿಂದ ಸರಕಾರವನ್ನು ಬದಲಿಸುವ ಪ್ರಶ್ನೆಯೇ ಇಲ್ಲ. ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಅಂಟಿಕೊಳ್ಳಲು ಬಳಸಿದಂತೆ ಪಕ್ಷಾಂತರ ಪ್ರಚೋದಿಸುವುದಾಗಲೀ ಇತರ ವಿಧಾನಗಳನ್ನಾಗಲೀ ನಾವು ಬಳಸುವುದಿಲ್ಲ. ಬಿಜೆಪಿ ಜತೆಗಿರುವುದು ಒಂದು ಆಸ್ತಿಯೋ ಅಥವಾ ಹೊರೆಯೋ ಎಂದು ಕಾಣುವುದು ಅದರ ಮಿತ್ರ ಪಕ್ಷಗಳಿಗೇ ಬಿಟ್ಟದ್ದು" ಎಂದು ಸುರ್ಜಿತ್ ಹೇಳಿದರು.

ಈ ಬಗ್ಗೆ ವಿವರಣೆ ನೀಡುತ್ತಾ ಅವರು ವಾಜಪೇಯಿ ಸರ್ಕಾರದ ದುರಾಡಳಿತ ಅವರ ಮಿತ್ರ ಪಕ್ಷಗಳ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದರು. ಈ ಹಿಂದೆಯೂ ಅವರು ತಮ್ಮ ಅಸಂತೃಪ್ತಿ ತೋರ್ಪಡಿಸಿಕೊಂಡಿದ್ದಾರೆ. ನವೆಂಬರ್ ಚುನಾವಣೆಗಳಲ್ಲಿ ಬಿಜೆಪಿಯ ಶೋಚನೀಯ ಸೋಲಿನ ನಂತರ ಇದು ಇನ್ನೂ ಹೆಚ್ಚುವ ಸಾಧ್ಯತೆಗಳಿವೆ.

ಈ ಪಕ್ಷಗಳ ಮುಂದಿರುವುದು ಬಿಜೆಪಿ ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ತರುತ್ತಿರುವ ರೀತಿಯನ್ನು ನೋಡಿ ಅದರಿಂದ ದೂರವಾಗುವ ಪ್ರಶ್ನೆಯಷ್ಟೆ ಅಲ್ಲ, ಅವರ ಸ್ವಂತ ಹಿತಾಸಕ್ತಿಯೂ ಇದರಲ್ಲಿ ಅಡಕವಾಗಿದೆ. "ತಮ್ಮ ಸಂಕುಚಿತ ಹಿತಾಸಕ್ತಿಗಳ ದೃಷ್ಟಿಯಿಂದಲೂ ತಮ್ಮ ನೆಲೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೋ ಎಂದು ಅವರು ಯೋಚಿಸಬೇಕಾಗುತ್ತದೆ" ಎಂದ ಸುರ್ಜಿತ್ ಬಿಜೆಪಿಯೊಂದಿಗೆ ಸುದೀರ್ಘ ಮೈತ್ರಿಯಿಂದ ಅವರ ಜನ ಬೆಂಬಲ ತ್ವರಿತ ವಾಗಿ ಕ್ಷೀಣಗೊಳ್ಳಬಹುದು ಎಂದು ಸೂಚಿಸಿ ದರು. ಬಿಜು ಜನತಾದಳದ ಸಮಸ್ಯೆಗಳನ್ನು ಉಲ್ಲೇಖಿಸುತ್ತಾ ಅದು ಅದರ ಜನ ಬೆಂಬಲ ಕ್ಷೀಣಕೊಳ್ಳುತ್ತಿರುವುದರ ಸಂಕೇತ, ಬೇರೆ ಪಕ್ಷಗಳಿಗೂ ಇಂತಹುದೇ ಸಮಸ್ಯೆಗಳು ಬರಬಹುದು ಎಂದು ಅವರು ಹೇಳಿದರು.

ಒಂದು ಪರ್ಯಾಯ ಸರಕಾರ ರಚಿಸಲು ಕಾಂಗ್ರೆಸ್(ಐ) ಹಿಂದೇಟು ಹಾಕುತ್ತಿರುವ ಬಗ್ಗೆ ನಿಮ್ಮ ಟಿಪ್ಪಣಿಯೇನು ಎಂದು ಕೇಳಿದಾಗ ಕಾಂಗ್ರೆಸ್ ಕಪಟೋಪಾಯಗಳ ಮೂಲಕ ಸರಕಾರ ರಚಿಸ ಬಯಸುತ್ತಿರಲಿಕ್ಕಿಲ್ಲ, ಆದರೆ ಸರಕಾರ ಕುಸಿದರೆ ಜವಾಬ್ದಾರಿ ವಹಿಸಿಕೊಳ್ಳುತ್ತದೆ ಎಂದು ತಾನು ಭಾವಿಸುವುದಾಗಿ ಸುರ್ಜಿತ್ ಪುನರುಚ್ಚರಿಸಿದರು.

### ಬಲಿಷ್ಟ ಮೂರನೇ ಪರ್ಯಾಯ

ಈ ವಿಧಾನಸಭಾ ಚುನಾವಣೆಗಳು ಮೂರನೇ ರಂಗ ಕುಸಿದಿದೆ, ಅದಕ್ಕಿನ್ನು ಭವಿಷ್ಯವಿಲ್ಲ, ಎರಡು-ಪಕ್ಷ ವ್ಯವಸ್ಥೆ ಮೂಡಿಬಂದಿದೆ - ಒಂದೆಡೆ ಪುನರುಜ್ಜೀವನಗೊಳ್ಳುತ್ತಿರುವ ಕಾಂಗ್ರೆಸ್ ಮತ್ತು ಇನ್ನೊಂದೆಡೆ ಬಲಿಷ್ಟ ಬಿಜೆಪಿ - ಎಂಬ ಮಾತುಗಳನ್ನೆಲ್ಲಾ ಸುರ್ಜಿತ್ ತಳ್ಳಿಹಾಕಿದರು. ಕಳೆದ ಲೋಕಸಭಾ ಚುನಾವಣೆಗಳಲ್ಲಿ ಮೂರನೇ ಶಕ್ತಿಯ ಅಂಗಪಕ್ಷಗಳಿಗೆ ಹಿನ್ನಡೆಯಾದರೂ ಮೂರನೇ ಪರ್ಯಾಯದ ಪರಿಕಲ್ಪನೆ ಮತ್ತು ಸಾಧ್ಯತೆ ಇನ್ನೂ ಜೀವಂತವಾಗಿದೆ, ಅದು ದೇಶದಲ್ಲಿ ಒಂದು ದೊಡ್ಡ ಶಕ್ತಿಯಾಗುವುದು ಖಂಡಿತ ಎಂದು ಸುರ್ಜಿತ್ ಒತ್ತಿ ಹೇಳಿದರು.

ತಕ್ಷಣದ ಪರಿಸ್ಥಿತಿ ಏನೇ ಇರಲಿ, ಈ ಚುನಾವಣೆಗಳ ಮೊದಲು ಮೂರನೇ ಶಕ್ತಿ ಸದ್ಯಕ್ಕಂತೂ ಇರಲಿಲ್ಲ. ಏಕೆಂದರೆ ಅದರ ಪ್ರಮುಖ ಅಂಗಪಕ್ಷ ಜನತಾದಳದ ಸಂಖ್ಯೆ ಲೋಕಸಭೆಯ ಚುನಾವಣೆಗಳ ನಂತರ ಆರಕ್ಕೆ ಇಳಿದಿತ್ತು. ಈ ಆರು ಸದಸ್ಯರಲ್ಲೂ ಎಲ್ಲಾ ವಿಷಯಗಳ ಬಗ್ಗೆ ಒಮ್ಮತವಿರಲಿಲ್ಲ. ಇದರಿಂದ ಮೂರನೇ ಪರ್ಯಾಯವೇ ಇಲ್ಲವಾಗಿದೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಮಧ್ಯಪ್ರದೇಶ, ರಾಜಸ್ತಾನ, ದಿಲ್ಲಿಯಲ್ಲಿ ಕಾಂಗ್ರೆಸ್ ಸದಾ ಒಂದು ಬಲಿಷ್ಟ ಶಕ್ತಿಯಾಗಿತ್ತು. ಇದರಿಂದಾಗಿ ಬಿಜೆಪಿ- ವಿರೋಧಿ ಅಲೆಯ ಪ್ರಯೋಜನ ಸಹಜವಾಗಿಯೇ ಅದಕ್ಕೆ ದೊರೆಯಿತು. ಆದರೆ ಕಾಂಗ್ರೆಸ್‌ಗೆ ಎಲ್ಲೆಡೆ ಒಂದೇ ತರದ ಯಶಸ್ಸು ಸಿಗಲಿಲ್ಲ. ಬಿಹಾರದ ಉಪಚುನಾವಣೆಗಳಲ್ಲಿ ಆರ್.ಜೆ.ಡಿ., ಮತ್ತು ಸಿಪಿಐ(ಎಂ) ಗೆದ್ದವು, ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಎಲ್ಲಾ 3 ಸ್ಥಾನಗಳಲ್ಲಿ ಗೆದ್ದಿತು.

ಪುಟ 2 ನೋಡಿ

## ಬಾಬಾ ಬುಡನ್‌ಗಿರಿ: ಸೊಂಪಾದ ಹಸುರಿಗೆ ಕಿಚ್ಚು ಹಚ್ಚುವ ಸನ್ನಾಹಕ್ಕೆ ಸೋಲು

ಜಿ.ಎನ್.ನಾಗರಾಜ್

ಬಲುದೂರ ಕಾನನದ ನಡುವೆ, ಪಶ್ಚಿಮ ಘಟ್ಟಗಳ ಮಂಜು ಮುಸುಕಿದ ಬೆಟ್ಟವೊಂದರ ತುದಿಯಲ್ಲಿ ಪ್ರಶಾಂತ ವಾತಾವರಣ. ಆಗಾಗ್ಗೆ ಅಲ್ಲಿಗೆ ಬರುವ ಭಕ್ತರು, ಪ್ರವಾಸಿಗರು ಅಲ್ಲಿಯ ಪ್ರಕೃತಿಯ ಸೊಬಗನ್ನು ಕಣ್ತಣಿಯ ನೋಡಿ ಆನಂದಿಸಿ, ಅಲ್ಲಿಯ ಹಯಾತ್ ಪೀರ್‌ರವರ ದರ್ಗಾಕ್ಕೆ, ದತ್ತಾತ್ರೇಯ ಪೀಠಕ್ಕೆ ತಮ್ಮ ಭಕ್ತಿಯನ್ನು ಸಲ್ಲಿಸಿ ಬರುತ್ತಿದ್ದರು. ಅಲ್ಲಿಯ ಉರುಸ್‌ನ ಸಂದರ್ಭದಲ್ಲಿ ಹಿಂದೂ-ಮುಸ್ಲಿಂ ಧರ್ಮಗಳಿಗೆ ಸೇರಿದ ಹತ್ತಾರು ಸಾವಿರ ಜನ ಸಂಪೂರ್ಣ ಸಾಮರಸ್ಯದಿಂದ ತಮ್ಮ ಪೂಜಾದಿಗಳನ್ನು ನೆರವೇರಿಸುತ್ತಿದ್ದರು.

ಆದರೆ ಈ ಬಾರಿ ಈ ಎಲ್ಲಾ ಭಕ್ತಾದಿಗಳಲ್ಲಿ ಆತಂಕ, ಯಾವಾಗ ಏನಾಗುವುದೋ ಎಂಬ ಭಯ. ಭಕ್ತಾದಿಗಳ ನಡುವೆ ಎದ್ದು ಕಾಣುವ ಪೋಲೀಸ್ ಪಡೆ. "ಮಹಾ ಶೌರ್ಯ" ದ ಮಾತುಗಳಿಂದ, ಇಲ್ಲದ ವಿವಾದಗಳನ್ನು ಹುಟ್ಟು ಹಾಕುವ ತಮ್ಮ ಚಾಳಿಯಿಂದ, ಸುಳ್ಳುಗಳ ಸರಮಾಲೆಯಿಂದ ಆತಂಕವನ್ನು ಹುಟ್ಟುಹಾಕಿದ ವಿಶ್ವಹಿಂದು ಪರಿಷತ್, ಭಜರಂಗದಳದವನ್ನು ಶಾಂತಿಪ್ರಿಯ ಜನತೆ ಮೆಚ್ಚಲು ಸಾಧ್ಯವೇ? ಇಡೀ ದೇಶದಲ್ಲಿ ಈ ಶಕ್ತಿಗಳು ಹುಟ್ಟುಹಾಕಿದ ಕೋಮುವಾದದ ದಳ್ಳುರಿಯಲ್ಲಿ ನೊಂದು ಬೆಂದ ಜನತೆ, ಅದರ ಪರಿಣಾಮಗಳನ್ನು ಅನುಭವಿಸಿದ ಜನತೆ ಭಜರಂಗದಳದ ರಥಯಾತ್ರೆಗಳನ್ನು ಉದ್ದಕ್ಕೂ ತಿರಸ್ಕರಿಸಿದ್ದಾರೆ. ಕೋಮು ಉದ್ವೇಗಕ್ಕೊಳಗಾಗದ ಈ ಶಾಂತಿಪರ ಪ್ರತಿಕ್ರಿಯೆಯಿಂದ ಬೇಸ್ತುಬಿದ್ದ ಬಿಜೆಪಿ ಮುಂದಿನ ವರ್ಷದವರೆಗೆ ಗಡುವು ನೀಡುವ ತಂತ್ರಕ್ಕೆ ಮೊರೆಹೋಗಬೇಕಾಯಿತು. ಮುಂದಿನ ವರ್ಷದ ವಿಧಾನಸಭಾ ಚುನಾವಣೆಗಳಲ್ಲಿ ತಮಗೆ ರಾಜಸ್ತಾನ, ಮಧ್ಯಪ್ರದೇಶ, ದೆಹಲಿಗಳ ಜನ ನೀಡಿದ ಮರ್ಯಾದೆಯೇ ಸಿಗುವುದು ಖಾತ್ರಿಯಾದ ಬಿಜೆಪಿ ಈದ್ಗಾದಂತಹ ವಿವಾದಗಳಿಂದ, ಭಟ್ಕಳದ ಕೋಮು ದಳ್ಳುರಿಯಿಂದ ಮಾತ್ರವೇ ತಮಗೆ ಫಲ ಎಂದು ಭಾವಿಸಿ ಅಂತಹುದೇ ಒಂದು ತಂತ್ರವನ್ನು ಹೂಡಿದ್ದಾರೆ. ಜನ ಸ್ವಲ್ಪ ಎಚ್ಚರ ತಪ್ಪಿದರೆ ಮುಂದಿನ ದಿನಗಳಲ್ಲಿ ಮತ್ತೆ ಯಾವ ಯಾವ ರೂಪದಲ್ಲಿಯಾದರೂ ಕೋಮುಶಕ್ತಿಗಳು ತಲೆಯತ್ತಲು ನಿರಂತರ ಪ್ರಯತ್ನ ನಡೆಸುತ್ತಾರೆ.

ಇಂತಹ ಪ್ರಯತ್ನದಲ್ಲಿ ಅವರು ಬಾಬಾಬುಡನ್‌ಗಿರಿಯನ್ನೇ ಆರಿಸಿದ್ದು ಏಕೆ? ಎಂಬ ಪ್ರಶ್ನೆ ಏಳುತ್ತದೆ. ರಾಜ್ಯಾದ್ಯಂತ ಹಲವೆಡೆಗಳಲ್ಲಿ ಮಧ್ಯಯುಗದ ಸೂಫಿ ಸಂತರು ಜನರ ಪ್ರೀತಿಯನ್ನು ಸಂಪಾದಿಸಿದ್ದಾರೆ. ಅವರ ಸಮಾಧಿ ಸ್ಥಳಗಳಲ್ಲಿ ಲಕ್ಷಗಟ್ಟಲೆ ಜನಸಮುದಾಯ ಮುಸ್ಲಿಮರಿಗಿಂತಲೂ ಹಿಂದೂಗಳೇ ಬಹುಸಂಖ್ಯೆಯ ಭಕ್ತರು. ಈ ಸಂಬಂಧ ಗ್ರಾಮಾಂತರಗಳಲ್ಲಿ ಹಿಂದೂ-ಮುಸ್ಲಿಂ ಜನತೆಯ ನಡುವಣ ಸಾಮರಸ್ಯವನ್ನು ಜೀವಂತವಾಗಿಟ್ಟಿದೆ. ಇದನ್ನು ನಾಶ ಮಾಡಿದಲ್ಲದೆ ಬಿಜೆಪಿಯ ಬೇಳೆ ಬೇಯುವುದಿಲ್ಲ. ಅದಕ್ಕಾಗಿಯೇ ಸೂಫಿ ಸಂತರ ಪ್ರಸಿದ್ಧ ಸ್ಥಳವಾದ ಬಾಬಾ ಬುಡನ್ ಗಿರಿಯನ್ನು ಆರಿಸಿಕೊಂಡಿದ್ದಾರೆ.

ಜೊತೆಗೆ ಸಂಘ ಪರಿವಾರ ವಿವೋಚನೆಗೊಳಿಸಲು ಬಯಸುತ್ತಿರುವ 3000 ಪೂಜಾ ಸ್ಥಳಗಳಲ್ಲಿ ಬಾಬಾಬುಡನ್ ಗಿರಿಯಂತಹ ಇನ್ನೂ ಎಷ್ಟೋ ಸೂಫಿ ಸಂತರ ಸ್ಥಾನಗಳಿವೆಯೋ? ಅಲ್ಲೊಂದು ಅಯೋಧ್ಯಾ, ಇಲ್ಲೊಂದು ದರ್ಗಾ, ಮತ್ತೊಂದು ಮಥುರಾ, ಮಗದೊಂದು ಸೂಫಿಸ್ಥಾನ ಈ ಸರಣಿ ಮುಂದುವರಿಯಲು ಬಿಡಬೇಕೆ? ಈ ಕುತಂತ್ರಗಳ ಸುಳ್ಳುಗಳ ಸರಮಾಲೆಗೆ ಮಂಗಳಾರತಿ ಎತ್ತಬೇಕೆ? ಜಾತ್ಯಾತೀತ ಶಕ್ತಿಗಳು ಶಾಂತಿಪ್ರಿಯ ಜನತೆ ತೀರ್ಮಾನಿಸಬೇಕು. ನಿರಂತರ ಎಚ್ಚರದಿಂದ ಇದನ್ನು ಸಾಧಿಸಬೇಕು.


**'ಇ.ಎಂ.ಎಸ್ ಭವನ'ಕ್ಕೆ ಇ.ಕೆ.ನಾಯನಾರ್‌ರಿಂದ ಅಡಿಗಲ್ಲು**

## 'ದಶಕಗಳ ಕನಸು ನನಸಾಗುವ ಕೆಲಸ ಆರಂಭ'

ನವೆಂಬರ್ 29, 1998 . ಬೆಂಗಳೂರಿನ, ಇಡೀ ಕರ್ನಾಟಕದ ಪ್ರಗತಿಪರ, ಎಡ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರಿಗೆ ಇನ್ನೊಂದು ಅಭೂತಪೂರ್ವ ಸಂತಸದ ದಿನ.ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರೂ, ಕೇರಳದ ಮುಖ್ಯ ಮಂತ್ರಿಗಳೂ ಆಗಿರುವ ಇ.ಕೆ.ನಾಯನಾರ್ ಬೆಂಗಳೂರಿನಲ್ಲಿ ಎ.ಕೆ.ಗೋಪಾಲನ್ ಸಾಮಾಜಿಕ ಶೈಕ್ಷಣಿಕ ಸಂಶೋಧನಾ ದತ್ತಿಯ ಯೋಜಿತ ಇ.ಎಂ.ಎಸ್. ಭವನಕ್ಕೆ ಅಡಿಗಲ್ಲು ಹಾಕಿದರು.

ಪುಟ 5 ನೋಡಿ

'ಇ.ಎಂ.ಎಸ್. ಭವನ' ದ ಮಾದರಿ






**ಡಿಸೆಂಬರ್ 11, 1998**

**ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮತ್ತು ಕಾವೀಕರಣದ ವಿರುದ್ಧ**

**ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಮತ್ತು ಪ್ರತಿಭಟನೆ**

ಇತ್ತೀಚಿನ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆಯ ಮಹತ್ವದ ಬಗ್ಗೆ ಸುರ್ಜಿತ್ ಲೇಖನ(ಪುಟ4) ಹಾಗೂ ರೈತ್ಯಕೃಷಿಕೂಲಿಕಾರರ ಸಂಘಟನೆಗಳ ಕರೆ(ಪುಟ2)

# ಭಾರತದ ಪರಂಪರೆಗೆ ಮಸಿ ಬಳಿದ ಭಾರತೀಯ ಪ್ರಜಾಪ್ರಭುತ್ವ ತಲೆತಗ್ಗಿಸುವಂತೆ ಮಾಡಿದ ಆ ಕರಾಳ ದಿನ

ಡಿಸೆಂಬರ್ 6, 1992. ಆ ಕರಾಳ ಭಾನುವಾರದ ನಾಚಿಕೆಗೇಡಿ ಘಟನೆ ನಡೆದು ಆರು ವರ್ಷಗಳು ಸಂದಿವೆ. ಭಾರತದ ಪರಂಪರೆಗೆ ಮಸಿ ಬಳಿದ, ಭಾರತೀಯ ಪ್ರಜಾಪ್ರಭುತ್ವವೇ ತಲೆತಗ್ಗಿಸುವಂತೆ ಮಾಡಿದ ಆ ಘಟನೆಯಲ್ಲಿ ಪಾಲುದಾರರಾಗಿದ್ದವರು, ಅದಕ್ಕೆ ಕುಮ್ಮಕ್ಕು ಕೊಟ್ಟವರು ಈಗ ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ. ಸಾವಿರಾರು ಮುಗ್ಧರನ್ನು ಬಲಿತಗೊಂಡು, ಶ್ರೀರಾಮನ ಹೆಸರಲ್ಲಿ ರಕ್ತದ ಹೊಳೆ ಹರಿಸಿದ್ದು ಕೇವಲ ಅಧಿಕಾರದಾಹದಿಂದ ಎಂದು ಈಗ ಶತಮೂರ್ಖರಿಗೂ ಸ್ಪಷ್ಟವಾಗಿದೆ. ಇಂತಹ ಮಂದಿ ಎಂತಹ ಆಳ್ವಿಕೆ ನೀಡಬಲ್ಲರು ಎಂಬ ಬಗ್ಗೆಯೂ ಈಗ ಯಾರಲ್ಲೂ ಸಂದೇಹವುಳಿದಿಲ್ಲ. ಆ ಕರಾಳ ದಿನ, ಅದರ ಹಿಂದಿನ ದಿನ, ನಂತರದ ದಿನಗಳೂ ಈ ಮಂದಿ ನಡೆದುಕೊಂಡ ರೀತಿಯನ್ನು ಹಿಂದಿರುಗಿ ನೋಡಿದಾಗ ಅವರ ಈಗಿನ ವರ್ತನೆ ಭಿನ್ನವಾಗಿರಲು ಸಾಧ್ಯವೆ ಎಂಬ ಪ್ರಶ್ನೆ ಯಾವ ಪ್ರಜ್ಞಾವಂತನಲ್ಲೂ ಏಳದಿರದು. ಆದರೆ ತನ್ನ ಭದ್ರಕೋಟೆಗಳಲ್ಲಿಯೇ ಜನರಿಂದ ಸಾರಾಸಗಟು ತಿರಸ್ಕರಿಸಲ್ಪಟ್ಟ ಈ ಮಂದಿಯ ಬಗ್ಗೆ ಅವರ ಮಿತ್ರ ಪಕ್ಷಗಳವರಲ್ಲಿ ಇನ್ನೂ ಭ್ರಮೆ ಹರಿದಿಲ್ಲ ಎಂಬುದನ್ನು ನಾವು ಗಮನಿಸಬೇಕು. ಕೇಂದ್ರದಲ್ಲಿರುವುದು ಈಗ ಕೇವಲ ಅಧಿಕಾರದಾಹಿಗಳ ಮೈತ್ರಿಕೂಟ-ಅಧಿಕಾರ ಮಾತ್ರವೇ ಅವರೆಲ್ಲರಲ್ಲಿರುವ ಮೈತ್ರಿಯ ಏಕೈಕ ಅಂಶವಿರಬಹುದೇ - ಅಯೋಧ್ಯೆಯಲ್ಲಿ ಆ ಕರಾಳ ದಿನದ ಬೆಳವಣಿಗೆಗಳನ್ನು ನೆನಪಿಸಿಕೊಂಡಾಗ ಸಹಜವಾಗಿಯೇ ಏಳುವ ಪ್ರಶ್ನೆ.

**ಡಿಸೆಂಬರ್ 5, 1992** ಬೆಳಿಗ್ಗೆ 11 ಗಂಟೆ ಸಂತರು, ಮಹಂತರುಗಳಿದ್ದ 'ಮಾರ್ಗದರ್ಶಕ ಮಂಡಲಿ'ಯ ಸಭೆ - ಯೋಜನೆಯಂತೆ 'ಕರಸೇವೆ' ನಡೆಸಲು ನಿರ್ಧಾರ.

ಮಧ್ಯಾಹ್ನ 12.40 - ಲೌಡ್ ಸ್ಪೀಕರ್‌ಗಳಿಂದ ಪ್ರಕಟಣೆ - 'ಕಳೆದ ಎರಡು ತಿಂಗಳಲ್ಲಿ ಪಡೆದ ತರಬೇತಿಯ ರಿಹರ್ಸಲ್‌ಗೆ ಪ್ರತಿಯೊಂದು ತುಕಡಿಯಿಂದ ಇಬ್ಬಿಬ್ಬರು ಸ್ವಯಂಸೇವಕರು ಬರತಕ್ಕದ್ದು. ಯಾರು ಬರತಕ್ಕದ್ದು, ಅವರೇನು ಮಾಡತಕ್ಕದ್ದು ಎಂದು ಅವರವರಿಗೆ ತಿಳಿದಿದೆ"



ಅಪರಾಹ್ನ 2.40 ರಿಂದ ಸಂಜೆ 5.30 ರವರೆಗೆ ವಿವಾದಗ್ರಸ್ತ ಸ್ಥಳದಿಂದ ಸ್ವಲ್ಪವೇ ದೂರದ ರಾಮಕಥಾ ಕುಂಜ ಎಂಬ ಗುಡ್ಡಪ್ರದೇಶದಲ್ಲಿ 500 ಸ್ವಯಂ ಸೇವಕರಿಂದ ರಿಹರ್ಸಲ್

ಸಂಜೆ 7.00 ಗಂಟೆ ಅದೇ ರಾತ್ರಿ ಬರುವಂತೆ ಎಲ್.ಕೆ.ಅಡ್ವಾಣಿಯವರಿಗೆ ನಿರ್ದೇಶನ. ಅವರು ಮರುದಿನ ಮಧ್ಯಾಹ್ನ 1 ಗಂಟೆಗೆ ಬರುವುದೆಂದು ಹಿಂದೆ ನಿರ್ಧಾರವಾಗಿತ್ತು.

ರಾತ್ರಿ 11 ಗಂಟೆ ಫೈಜಾಬಾದಿನಿಂದ ಅಯೋಧ್ಯೆಗೆ ಅಡ್ವಾಣಿ ಆಗಮನ - ತಕ್ಷಣ ವಿಹೆಚ್‌ಪಿಯ ಸಿಂಘಾಲ್ ಮತ್ತು ಸಂಘ ಪರಿವಾರದ ಇತರ ಮುಖಂಡರೊಡನೆ ಮಂತ್ರಾಲೋಚನೆ.

**ಡಿಸೆಂಬರ್ 6, 1992**

ಬೆಳಿಗ್ಗೆ 8 ಗಂಟೆ ಅಡ್ವಾಣಿ, ಶಿವಸೇನೆಯ ಸಂಸದೀಯ ಮುಖಂಡ ಮೋರೇಶ್ವರ್ ಸಾವೆ, ಭಜರಂಗ ದಳದ ಮುಖಂಡ ವಿನಯ್ ಕಟಿಯಾರ್ ಮಂತ್ರಾಲೋಚನೆ - ಕಟಿಯಾರ್ ನಿವಾಸದಲ್ಲಿ.

ಬೆಳಿಗ್ಗೆ 8.15 ಬಾಬ್ರಿ ಮಸೀದಿ ಸುತ್ತದ 2.774 ಎಕ್ರೆ ವಿವಾದಿತ ಕ್ಷೇತ್ರಕ್ಕೆ ಹಾಕಿದ್ದ ಬೇಲಿಯನ್ನು ಒಂದೊಂದು ಮೀಟರ್ ಒಳಗೆಸರಿಸಿ ಸುತ್ತಲಿನ ಜಾಗವನ್ನು ವಿಶಾಲಗೊಳಿಸುವ ಕೆಲಸ - ಆರ್.ಎಸ್.ಎಸ್. ನವರಿಂದ.



ಬೆಳಿಗ್ಗೆ 10.05 ಕರಸೇವಕರಿಂದ ಮಸೀದಿಯ ಆವರಣದ ಗೋಡೆ ಬೀಳಿಸುವ ಕೆಲಸ

ಬೆಳಿಗ್ಗೆ 10.15 ಅಡ್ವಾಣಿ, ಮುರಳಿ ಮನೋಹರ ಜೋಶಿ ಆಗಮನದದಿಂದ ಕರಸೇವಕರಲ್ಲಿ ಇನ್ನಷ್ಟು ಹುಮ್ಮಸ್ಸು.

ಬೆಳಿಗ್ಗೆ 10.30 ರಿಂದ 11.30 ಇನ್ನಷ್ಟು ಕರಸೇವಕರು ವಿವಾದಿತ ಕ್ಷೇತ್ರದಲ್ಲಿ ನುಗ್ಗಿದರು.

ಬೆಳಿಗ್ಗೆ 11.35 ವಿವಾದಿತ ಸ್ಥಳದೊಳಗೆ ಸಂತ-ಮಹಂತರ ಪೂಜೆ ಆರಂಭ

ಬೆಳಿಗ್ಗೆ 11.35-11.50 ಇನ್ನಷ್ಟು ಕರಸೇವಕರ ನುಸುಳಿಕೆ. ಮಸೀದಿಯನ್ನು ರಕ್ಷಿಸುತ್ತಿದ್ದ ಕೇಂದ್ರ ರಿಸರ್ವ್ ಪೋಲೀಸ್ ಮೇಲೆ ಕಲ್ಲುಗಳ ಸುರಿಮಳೆ

ಬೆಳಿಗ್ಗೆ 11.50 ಮಸೀದಿಯ ಬಲಗುಮ್ಮಟದ ಮೇಲೆ ಕರಸೇವಕರು

ಬೆಳಿಗ್ಗೆ 11.51 ಗುಮ್ಮಟದ ಮೇಲೆ ಕಲ್ಲು ತೂರುತ್ತಿದ್ದ ಕರಸೇವಕರ ಸಂಖ್ಯೆ ಹೆಚ್ಚಿದಂತೆ ಸಿ.ಆರ್.ಪಿ.ಎಫ್. ಹಿಂದೆ.

ಬೆಳಿಗ್ಗೆ 11.55 ವಿವಾದಿತ ಕ್ಷೇತ್ರದಲ್ಲಿ ಮಸೀದಿಯ ಮೇಲೆಲ್ಲಾ ಎಲ್ಲಿ ನೋಡಿದರೂ ಕೇವಲ ಕರಸೇವಕರು. ರಕ್ಷಣೆಗೆಂದು ನೇಮಿಸಿದವರ ಪತ್ತೆಯೇ ಇಲ್ಲ.

ಅಪರಾಹ್ನ 1.30 ಆರ್.ಎ.ಎಫ್.(ತ್ವರಿತ ಕಾರ್ಯಾಚರಣೆ ಪಡೆ)ನ ನಾಲ್ಕು ಬಟಾಲಿಯನ್‌ಗಳಿಗೆ ಕಲ್ಲು ತೂರಾಟ, ಉರಿಯುವ ಟಯರ್‌ಗಳ ಮೂಲಕ ತಡೆ

ಅಪರಾಹ್ನ 2.30 "ಪರಿಸ್ಥಿತಿ ಹತೋಟಿಯಲ್ಲಿದೆ. ಆರ್.ಎ.ಎಫ್. ಬೇಕಿಲ್ಲ ಹಿಂದಿರುಗಿ" ಎಂದು ಫೈಜಾಬಾದ್ ಜಿಲ್ಲಾ ಮ್ಯಾಜಿಸ್ಟೇಟ್ ತಂತಿ. ಆರ್.ಎ.ಎಫ್. ಬಟಾಲಿಯನ್ ಫೈಜಾಬಾದಿಗೆ ಮರಳಿತು.

ಅಪರಾಹ್ನ 2.55 ಮಸೀದಿಯ ಎಡಗುಮ್ಮಟ ಧ್ವಂಸ

ಅಪರಾಹ್ನ 3.05 ಬಲ ಗುಮ್ಮಟವೂ ಧ್ವಂಸ

ಅಪರಾಹ್ನ 3.15 ಕೇಂದ್ರ ಪಡೆಗಳು ಒಳಬರದಂತೆ ಅಯೋಧ್ಯೆಯ ಸುತ್ತ ಎಲ್ಲಾ ರಸ್ತೆಗಳನ್ನು ಅಡ್ಡಗಟ್ಟಲು ಲೌಡ್‌ಸ್ಪೀಕರ್‌ನಿಂದ ಅಡ್ವಾಣಿ ಕರೆ (ಈಗ ಈತನೇ ಕೇಂದ್ರ ಗೃಹ ಮಂತ್ರಿ!)



ಸಂಜೆ 4.50 ಮಧ್ಯದ ಗುಮ್ಮಟವೂ ಧ್ವಂಸ

ಸಂಜೆ 6.10 ಬಾಬ್ರಿ ಮಸೀದಿ ಸಂಪೂರ್ಣ ನೆಲಸಮ.

ಸಂಜೆ6.35 ಧ್ವಂಸ ಕಾರ್ಯದ ವೇಳೆ ಎತ್ತಿದ್ದ 'ರಾಮ್‌ಲಾಲಾ' ಮೂರ್ತಿಯನ್ನು ಮತ್ತೆ ಅದರ ಸ್ಥಾನದಲ್ಲಿ ಇಡಲಾಯಿತು.

ಸಂಜೆ 7.12 ಸ್ಥಳವನ್ನು ನೀರಿನಿಂದ ತೊಳೆಯುತ್ತಿದ್ದಂತೆ ಸುತ್ತಲಿನ ಮುಸಲ್ಮಾನರ ಮನೆಗಳು, ಅಂಗಡಿಗಳು ಇತ್ಯಾದಿಗಳ ಮೇಲೆ ಧಾಳಿಗಳ ಆರಂಭ.

ಬಾಬ್ರಿ ಮಸೀದಿ ಧ್ವಂಸದಿಂದ ಆನಂದ ತುಂದಿಲರಾದ ಇವರಿಬ್ಬರೂ ಈಗ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯಲ್ಲಿ ಮಂತ್ರಿಗಳು!

# ಚುನಾವಣೆಯಲ್ಲಿ ಜನತೆಯ ವಿಜಯ: ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರದಲ್ಲಿ ಪ್ರತಿಫಲನಗೊಳ್ಳಲಿ

## - ಅಖಿಲ ಭಾರತ ಕೃಷಿಕೂಲಿಕಾರರ ಸಂಘ

ಈಗ ಹೆಸರು ಕಳಕೊಂಡಿರುವ ಕೇಂದ್ರದ ಸರ್ಕಾರದ ಜನ-ವಿರೋಧಿ ನೀತಿಗಳ ವಿರುದ್ಧ ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಬೇಕು ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಕೃಷಿಕೂಲಿಕಾರರಿಗೆ ಹಾಗೂ ರೈತರಿಗೆ ಕರೆ ನೀಡಿದೆ. ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಕರೆ ನೀಡಿರುವ ಈ ಸಾರ್ವತ್ರಿಕ ಮುಷ್ಕರ ನಮ್ಮ ಆಹಾರ ಭದ್ರತೆಯ ಕಾರ್ಯಕ್ರಮವನ್ನು ಕೈ ಬಿಟ್ಟಿರುವುದರ ವಿರುದ್ಧ, ಕೃಷಿ ಕೂಲಿಕಾರರಿಗೆ ಕೆಲಸದ ದಿನಗಳಲ್ಲಿ ತೀವ್ರ ಇಳಿತದ ವಿರುದ್ಧ, ಹೆಚ್ಚುತ್ತಿರುವ ಬಡತನ, ದೇಶದ ಆಸ್ತಿಗಳನ್ನು ಖಾಸಗಿ ಕೈಗಳಿಗೆ ಅವು ಹೆಚ್ಚು ಉತ್ಪಾದನೆಗೆ ನೆರವಾಗಬಹುದೆಂಬ ಯಾವುದೇ ಪುರಾವೆಯಿಲ್ಲದೆ ಕೊಡುತ್ತಿರುವುದರ ವಿರುದ್ಧ ನಡೆಯುತ್ತಿರುವ ದೇಶವ್ಯಾಪಿ ಕಾರ್ಯಾಚರಣೆ. ದೇಶದ ಬಹುಪಾಲು ಜನ ನಮ್ಮ ಆರ್ಥಿಕದ ಪ್ರಧಾನ ವಲಯಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ವಹಿಸಿಕೊಡುವುದನ್ನು ವಿರೋಧಿಸುತ್ತಿದ್ದಾರೆ. ಇತ್ತೀಚೆಗೆ ಮೊನ್ಸಾಂಟೋದ ಪ್ರಾಯೋಗಿಕ ಫಾರ್ಮ್‌ಗಳಲ್ಲಿ ಬೀಜಗಳ ಧ್ವಂಸ ಇದನ್ನು ಮತ್ತೆ ತೋರಿಸಿಕೊಟ್ಟಿದೆ ಎಂದಿರುವ ಸಂಘ ಆಹಾರ ಒಂದು ಅವಶ್ಯಕತೆ, ಅದು ಜೈವಿಕ, ಸಸ್ಯ ಉತ್ಪನ್ನಗಳ ಪೇಟೆಂಟ್‌ಗಳೆಂಬ ಕಾನೂನಿನ ಮಿಥ್ಯೆಗಳನ್ನು ಸೃಷ್ಟಿಸಲು ನಿರ್ಧರಿಸಿರುವ ಲಾಭಕೋರರ ಕೈಗಳಲ್ಲಿ ಒಂದು ಅಸ್ತ್ರವಾಗಲು ಬಿಡಬಾರದು ಎಂದಿದೆ. ಈ ಸಾರ್ವತ್ರಿಕ ಮುಷ್ಕರ ಇತ್ತೀಚಿನ ಚುನಾವಣೆಗಳ ನಂತರ ಭಾರತದ ಸಾರ್ವಭೌಮತೆಯನ್ನು ರಕ್ಷಿಸುವತ್ತ ಮೊದಲ ಪ್ರಮುಖ ಹೆಜ್ಜೆ. ಇದು ಯಶಸ್ವಿಯಾಗಲೇಬೇಕು. ಉತ್ತರಪ್ರದೇಶ, ರಾಜಸ್ತಾನ, ಬಿಹಾರ, ಮಧ್ಯಪ್ರದೇಶ, ಹರ್ಯಾಣ, ದಿಲ್ಲಿ, ಮಹಾರಾಷ್ಟ್ರಗಳ ಜನ ಇದಕ್ಕೆ ನೇತೃತ್ವ ನೀಡಬೇಕು. ಏಕೆಂದರೆ ಡಬ್ಲ್ಯು.ಟಿ.ಓ., ವಿಶ್ವಬ್ಯಾಂಕ್, ಐಎಂಎಫ್‌ನ ಧೋರಣೆಗಳಿಗೆ ತಕ್ಕ ಪ್ರತ್ಯುತ್ತರ ನೀಡದಿದ್ದರೆ ಬೆಲೆಯೇರಿಕೆ ತಡೆಯುವ, ಜನಗಳಿಗೆ ಉತ್ತಮ ಜೀವನಮಟ್ಟ ಒದಗಿಸುವ ಪ್ರಯತ್ನಗಳೆಲ್ಲಾ ವಿಫಲವಾಗುವುದು ಖಂಡಿತ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಕಂಡುಬಂದ ಜನತೆಯ ವಿಜಯ ಈ ಸಾರ್ವತ್ರಿಕ ಮುಷ್ಕರದಲ್ಲೂ ಪ್ರತಿಫಲನಗೊಳ್ಳಬೇಕು ಎಂದು ಅಖಿಲ ಭಾರತ ಕೃಷಿಕೂಲಿಕಾರರ ಸಂಘ ಹೇಳಿದೆ.

# ಅಖಿಲ ಭಾರತ ಕಿಸಾನ್ ಸಭಾದ ಕರೆ

ಕೇಂದ್ರ ಸರ್ಕಾರದ ಜನ-ವಿರೋಧಿ ಆರ್ಥಿಕ ಧೋರಣೆಗಳ ವಿರುದ್ಧ ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರವನ್ನು ಪರಿಣಾಮಕಾರಿ ರೀತಿಯಲ್ಲಿ ಯಶಸ್ವಿಗೊಳಿಸಬೇಕು ಎಂದು ಎಲ್ಲಾ ಜನರಿಗೆ, ಮುಖ್ಯವಾಗಿ ರೈತರಿಗೆ ಮತ್ತು ಕೃಷಿಕಾರ್ಮಿಕರಿಗೆ ಅಖಿಲ ಭಾರತ ಕಿಸಾನ್ ಸಭಾ ಕರೆ ನೀಡಿದೆ.

ಎಐಕೆಎಸ್ ಕಾರ್ಯಕರ್ತರು ಇತರರ ಅಂದರೆ ಕಾರ್ಮಿಕರ, ಕೃಷಿಕೂಲಿಕಾರರ, ಮಹಿಳೆಯರ, ವಿದ್ಯಾರ್ಥಿ-ಯುವಜನರ ಸಹೋದರ ಸಂಘಟನೆಗಳ ಕಾರ್ಯಕರ್ತರೊಂದಿಗೆ ಈ ಸಾರ್ವತ್ರಿಕ ಮುಷ್ಕರವನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸುವ ಸಿದ್ಧತೆಯಲ್ಲಿ ತೊಡಗಿದ್ದಾರೆ. ಕಾರ್ಮಿಕರ, ನೌಕರರ ಮತ್ತು ವಿದ್ಯಾರ್ಥಿಗಳ ಮುಷ್ಕರದೊಂದಿಗೆ ರಸ್ತಾರೋಖೋ - ರೈಲು ರೋಖೋ ಸಂಘಟಿಸಲಾಗುವುದು ಎಂದು ಎಐಕೆಎಸ್ ಹೇಳಿದೆ. ಈ ರೀತಿ ನಾವು ಜಂಟಿಯಾಗಿ ಕೇಂದ್ರ ಸರಕಾರದ ಜನ-ವಿರೋಧಿ ನೀತಿಗಳಿಗೆ ಬಲವಾದ ಪ್ರತಿಭಟನೆಯನ್ನು ದಾಖಲುಗೊಳಿಸಲು ಯೋಜಿಸುತ್ತಿದ್ದೇವೆ ಎಂದು ಅದು ಹೇಳಿದೆ. "ನಾವು ಕೋಮುವಾದ, ಜಾತೀವಾದ, ಪ್ರತ್ಯೇಕತಾವಾದದ ವಿಚ್ಛಿದ್ರಕಾರಿ ಧೋರಣೆಗಳ ವಿರುದ್ಧ, ಶ್ರಮಜೀವಿಗಳ ಹಾಗೂ ದೇಶದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಕೂಡಾ ಹೋರಾಟ ನಡೆಸಿದ್ದೇವೆ" ಎಂದು ಎಐಕೆಎಸ್ ಹೇಳಿದೆ.

ಆದ್ದರಿಂದ ಸಾರ್ವಜನಿಕರು ತಮ್ಮ ಪ್ರಯಾಣಗಳನ್ನು ಮುಂದೂಡಿ ಆ ದಿನದ ರಸ್ತೆ-ರೈಲು ತಡೆಗಳಿಂದ ಆಗುವ ತೊಂದರೆಗಳನ್ನು ತಪ್ಪಿಸಿಕೊಂಡು ಈ ಸಾರ್ವತ್ರಿಕ ಮುಷ್ಕರದ ಯಶಸ್ಸಿಗೆ ಸಕ್ರಿಯವಾಗಿ ಸಹಕರಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಮನವಿ ಮಾಡಿದೆ.

(ಐಎನ್‌ಎನ್)

# ..............ನೈತಿಕ ಹಕ್ಕಿಲ್ಲ

ಪುಟ 1 ರಿಂದ

ಬಿಹಾರದಲ್ಲಿ ಸಿಪಿಐ(ಎಂ) ಪೂರ್ಣಿಯಾದಲ್ಲಿ ಗೆದ್ದಿರುವುದಲ್ಲದೆ ಇನ್ನೊಂದು ಸ್ಥಾನದಲ್ಲಿ ಎರಡನೇ ಸ್ಥಾನ ಪಡೆದಿದೆ. ಕಾಂಗ್ರೆಸ್(ಐ) ಮೂರನೇ ಸ್ಥಾನಕ್ಕೆ ಇಳಿದಿದೆ.

**ಎರಡು ಪಕ್ಷ ವ್ಯವಸ್ಥೆ ಬರುವುದಿಲ್ಲ**

ಇನ್ನು ದೀರ್ಘಾವಧಿಯ ವಿಷಯ ಹೇಳುವುದಾದರೆ ಭಾರತದಲ್ಲಿ ಇನ್ನೂ ಬಹಳ ವರ್ಷಗಳವರೆಗೆ ಎರಡು ಪಕ್ಷ ವ್ಯವಸ್ಥೆ ಬರಲು ಸಾಧ್ಯವಿಲ್ಲ ಎಂದು ಸುರ್ಜಿತ್ ಒತ್ತಿ ಹೇಳಿದರು. ದೊಡ್ಡ ಬಂಡವಾಳಸ್ಥರು ಎರಡು ಪಕ್ಷ ವ್ಯವಸ್ಥೆ ತರಲು ಆತುರರಾಗಿದ್ದಾರೆ. ಏಕೆಂದರೆ ಆಗ ಅವರಿಗೆ ಒಮ್ಮೆ ಕಾಂಗ್ರೆಸ್‌ಗೆ, ಇನ್ನೊಮ್ಮೆ ಬಿಜೆಪಿಗೆ ಬೆಂಬಲ ಬದಲಿಸುತ್ತಿರಲು ಅವಕಾಶವಾಗುತ್ತದೆ. "ಆದರೆ ಹೀಗಾಗಲು ನಾವು ಬಿಡುವುದಿಲ್ಲ" ಎಂದ ಸುರ್ಜಿತ್ ಪ್ರಾದೇಶಿಕ ಆಕಾಂಕ್ಷೆಗಳನ್ನು ಮತ್ತು ದಲಿತ-ಶೋಷಿತರ ಆಕಾಂಕ್ಷೆಗಳನ್ನು ಪ್ರತಿನಿಧಿಸುವ ಪಕ್ಷಗಳು ಆಳುವ ವರ್ಗಗಳ ಪಕ್ಷಗಳ ವಿರುದ್ಧ ಹೋರಾಡುತ್ತವೆ, ಅಮೆರಿಕಾ, ಇಂಗ್ಲೆಂಡ್, ಕೆನಡಾಗಳಂತ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಎರಡು ಪಕ್ಷ ವ್ಯವಸ್ಥೆ ಬೇರು ಬಿಟ್ಟರೂ ಭಾರತದ ಕ್ಲಿಷ್ಟ ಸನ್ನಿವೇಶದಲ್ಲಿ ಅದು ಸಾಧ್ಯವಿಲ್ಲ, ಆದ್ದರಿಂದ ಮೂರನೇ ಪರ್ಯಾಯ ಮೂಡಿ ಬರುವುದು ಖಂಡಿತ, ಸಿಪಿಐ(ಎಂ) ಸದಾ ಈ ಪರ್ಯಾಯವನ್ನು ಬೆಂಬಲಿಸುತ್ತದೆ, ಅದಕ್ಕಾಗಿ ಶ್ರಮಿಸುತ್ತದೆ ಎಂದು ಸುರ್ಜಿತ್ ಹೇಳಿದರು.

ಕಾಂಗ್ರೆಸ್ ಎರಡು - ಪಕ್ಷ ವ್ಯವಸ್ಥೆಯ ಪಕ್ಕಾ ಭಕ್ತನಾದರೂ, ಮೂರನೇ ರಂಗದ ಶಕ್ತಿಗಳನ್ನು ಅದು 'ಮುಗಿಸಿಬಿಡ'ಬೇಕೆಂದು ಬಯಸಿದರೂ ಸಿಪಿಐ(ಎಂ) ಏಕೆ ಕಾಂಗ್ರೆಸ್‌ಗೆ ಸರಕಾರ ರಚಿಸಲು ಬೆಂಬಲ ನೀಡಲು ಸಿದ್ಧವಾಗಿದೆ ಎಂದು ಹೇಳಿದಾಗ ತಕ್ಷಣವೇ ಅವರು "ನಮ್ಮನ್ನು ಮುಗಿಸಲು ಬಹಳ ಸಲ ಪ್ರಯತ್ನಿಸಿದರು, ಆದರೆ ಸಫಲರಾಗಲಿಲ್ಲ. ಹೇಗೆ ಹೋರಾಡಿ, ಬದುಕುಳಿಯುವುದು ಎಂಬುದು ನಮಗೆ ಗೊತ್ತು" ಎಂದು ಸುರ್ಜಿತ್ ಪ್ರತ್ಯುತ್ತರ ನೀಡಿದರು. ಬಿಜೆಪಿ ಸರಕಾರ ಕುಸಿದು ಬಿದ್ದಾಗ ಕಾಂಗ್ರೆಸ್ಸಿಗೆ ಬೆಂಬಲ ನೀಡುವ ಮಾತನ್ನು ಪ್ರಸಕ್ತ ಸನ್ನಿವೇಶದ ಸಂದರ್ಭದಲ್ಲಿ ನೋಡಬೇಕು ಎಂದು ವಿವರಿಸಿದ ಸುರ್ಜಿತ್ "ಈಗಿನ ವಾಸ್ತವತೆಯೇನೆಂದರೆ ನಾವು ಬಿಜೆಪಿ ಆಳ್ವಿಕೆ ಮುಂದುವರೆದು ರಾಷ್ಟ್ರೀಯ ಐಕ್ಯತೆಯನ್ನು ಧ್ವಂಸಮಾಡಲು ಬಿಡ ಬಯಸುತ್ತೇವೆಯೋ ಅಥವಾ ಅದು ಇನ್ನಷ್ಟು ಅನಾಹುತ ಮಾಡದಂತೆ ತಡೆಯ ಬೇಕೇ ಎಂಬುದೀಗ ಪ್ರಶ್ನೆಯಲ್ಲವೇ?" ಎಂದು ಕೇಳಿದರು. ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣತಂತ್ರದಲ್ಲಿ ಅನಾಹುತ ನಡೆಸದಂತೆ ತಡೆಯಲು, ಹಿಂದುತ್ವ ಅಜೆಂಡಾದ ಧಾಳಿ ತಪ್ಪಿಸಲು ಇನ್ನೊಂದು ಪರ್ಯಾಯವನ್ನು ಪರಿಶೀಲಿಸಲು ಸಿಪಿಐ(ಎಂ) ಸಿದ್ಧವಿದೆ ಎಂದು ಅವರು ವಿವರಿಸಿದರು. ಪ್ರಶ್ನೆಯೊಂದನ್ನು ಉತ್ತರಿಸುತ್ತಾ ಸುರ್ಜಿತ್ ಕಾಂಗ್ರೆಸ್ ಸ್ವತಃ ಒಂದು ಕೋಮುವಾದಿ ಪಕ್ಷವಲ್ಲ, ಅದು ಈ ಹಿಂದೆ ಕೋಮುವಾದದೊಡನೆ ರಾಜಿ ಮಾಡಿಕೊಂಡಿತ್ತಷ್ಟೆ ಎಂದರು. ಅದೂ ಅನುಭವಗಳಿಂದ ಪಾಠ ಕಲಿತಿದೆ, ಅಲ್ಪಸಂಖ್ಯಾತರಲ್ಲಿನ ಗಮನಾರ್ಹ ವಿಭಾಗವೊಂದು ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸಿಗೆ ಮತ ನೀಡಿತು ಎಂದು ಹೇಳಿದರು.

**ಹಿಂದುತ್ವ ಅಜೆಂಡಾಕ್ಕೂ ತಿರಸ್ಕಾರ**
**ಆರ್ಥಿಕ ಅಜೆಂಡಾಕ್ಕೂ ತಿರಸ್ಕಾರ**

ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ನಿರ್ಣಾಯಕ ಸೋಲು ಜನತೆ ಅದರ ಆರ್ಥಿಕ ಅಜೆಂಡಾವನ್ನು, ಸಂಕುಚಿತ ನೀತಿಗಳನ್ನು ಎರಡನ್ನೂ ತಿರಸ್ಕರಿಸಿದ್ದಾರೆ ಎಂಬುದನ್ನು ಎತ್ತಿ ತೋರಿಸಿದೆ ಎಂದು ಒತ್ತಿ ಹೇಳಿದರು ಸುರ್ಜಿತ್. ಬಿಜೆಪಿಯ ವಿನಾಶಕಾರೀ ಆರ್ಥಿಕ ನೀತಿಗಳು ಹಾಗೂ ವ್ಯಾಪಾರೀ ಪರ ನಿಲುವಿನ ಎದ್ದು ಕಾಣುವ ಅಂಶ ವೆಂದರೆ ಅಭೂತಪೂರ್ವ ಬೆಲೆಯೇರಿಕೆ. ಇದು ಬಿಜೆಪಿ ಸೋಲಿಗೆ ಕಾರಣ ವಾಯಿತು. ಹಿಂದುತ್ವ ಸಿದ್ಧಾಂತವನ್ನು ಹೇರುವ ಕ್ರಮವಾಗಿ ದೇಶಾದ್ಯಂತ ಕ್ರಿಶ್ಚಿಯನ್ ಕೋಮಿನ ಮೇಲೆ ದುಷ್ಟ ಧಾಳಿಗಳು, ಶಿಕ್ಷಣ ವ್ಯವಸ್ಥೆಯನ್ನು ಕೋಮುಗ್ರಸ್ತಗೊಳಿಸುವ ವಿಫಲ ಪ್ರಯತ್ನವನ್ನು ಕೂಡಾ ಜನತೆ ತಿರಸ್ಕರಿಸಿದ್ದಾರೆ. ಪರಮಾಣು ಸ್ಫೋಟಗಳನ್ನು ಕುರಿತಂತೆ ರಾಷ್ಟ್ರಾಂಧತೆಯನ್ನು ಬಡಿದೆಬ್ಬಿಸುವ ಬಿಜೆಪಿ ಪ್ರಯತ್ನವೂ ತಿರುಗುಬಾಣ ವಾಯಿತು. ಆದರಿಂದ ಪಕ್ಷಕ್ಕೆ ಯಾವುದೇ ಮತ ದೊರೆಯಲಿಲ್ಲ.

ಪೊಲಿಟ್‌ಬ್ಯೂರೋದ ನಿರ್ಣಯಗಳನ್ನು ತಿಳಿಸುತ್ತಾ ಸುರ್ಜಿತ್ ಲಾಭದಲ್ಲಿರುವ ಸಾರ್ವಜನಿಕ ವಲಯ ಘಟಕಗಳ ಶೇರು ಮಾರಾಟವನ್ನು ಮುಂದುವರೆಸುವುದನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ, ವಿಮಾ ವಲಯದ ಖಾಸಗೀಕರಣವನ್ನು ನಿಲ್ಲಿಸಲು ಒಂದು ಸಾರ್ವಜನಿಕ ಚಳುವಳಿ ಆರಂಭಿಸುತ್ತದೆ ಎಂದು ಹೇಳಿದರು.

ಡಿಸೆಂಬರ್ 6ನ್ನು 'ಕೋಮು ಸೌಹಾರ್ದ ದಿನ' ವಾಗಿ ಆಚರಿಸಬೇಕೆಂಬ ಎಡಪಕ್ಷಗಳ ಕರೆಯ ಬಗ್ಗೆ ಹೇಳುತ್ತಾ ಅದು ಆರುವರ್ಷಗಳ ಹಿಂದೆ ಬಾಬ್ರಿಮಸೀದಿ ಧ್ವಂಸ ಮಾಡಿ ರಾಷ್ಟ್ರೀಯ ಐಕ್ಯತೆಯನ್ನು ನಾಶ ಮಾಡಲು ಮೊದಲ ಪ್ರಹಾರ ಮಾಡಿದ ದಿನ ಎಂದು ಸುರ್ಜಿತ್ ಹೇಳಿದರು. ಈ ಕಾವಿಕೂಟ ತನ್ನ ಅಜೆಂಡಾವನ್ನು ಬಿಟ್ಟಿಲ್ಲ. ಅದೀಗ ವಾರಣಾಸಿ, ಮಥುರಾಗಳ ಮಸೀದಿಗಳ ಮೇಲೆ ಗುರಿಯಿಟ್ಟಿರುವುದಷ್ಟೇ ಅಲ್ಲ ಕರ್ನಾಟಕವನ್ನೂ ತಲುಪಿದೆ, ಸೂಫೀ ಕ್ಷೇತ್ರವೊಂದನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ, ಮುಂಬರುವ ದಿನಗಳಲ್ಲಿ ಈ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸಬೇಕಾಗಿದೆ ಎಂದು ಸುರ್ಜಿತ್ ಹೇಳಿದರು.

## ರೈಲುದುರಂತ: ಸಿಪಿಐ(ಎಂ) ದುಃಖ

ಪಂಜಾಬಿನ ಖನ್ನಾ ರೈಲು ನಿಲ್ದಾಣದ ಬಳಿ ರೈಲು ಅಪಘಾತದಲ್ಲಿ ಹಲವಾರು ಮಂದಿಯ ಸಾವು ಸಂಭವಿಸಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತೀವ್ರ ದುಃಖ ವ್ಯಕ್ತಪಡಿಸಿದೆ. ಫ್ರಂಟಿಯರ್ ಮೇಲ್ ಮತ್ತು ಸೀಯಾಲ್ದಾ ಎಕ್ಸ್‌ಪ್ರೆಸ್‌ನ ಈ ಅಪಘಾತದ ಕಾರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದಿರುವ ಸಿಪಿಐ(ಎಂ) ಹೆಚ್ಚುತ್ತಿರುವ ರೈಲು ಅಪಘಾತಗಳು ಸುರಕ್ಷತಾ ಮಟ್ಟದ ಬಗ್ಗೆ ಆತಂಕ ಮೂಡಿಸಿವೆ ಎಂದಿದೆ. ಇದಕ್ಕೆ ರೈಲು ಇಲಾಖೆ ಆದ್ಯತೆ ನೀಡಬೇಕು. ಅಪಘಾತಕ್ಕೊಳಗಾದವರಿಗೆ ತಕ್ಷಣದ ವೈದ್ಯಕೀಯ ನೆರವು ಒದಗಿಸಲು ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ನೆರವಾಗಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಅಪಘಾತದಲ್ಲಿ ಪ್ರಾಣ ಕಳೆದುಕೊಂಡವರ ಬಂಧುಗಳಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

# ಅಂಗನವಾಡಿ ನೌಕರರ ಸತತ ಹೋರಾಟಕ್ಕೆ ಸಂದ ಜಯ

ಗೌರವ ಧನದ ಹೆಸರಲ್ಲಿ ತೀರ ಕಡಿಮೆ ವೇತನ ಪಡೆದು, ದಿನೇ ದಿನೇ ತಮ್ಮ ಇಲಾಖಾಕೆಲಸಗಳ ಜೂತೆ ಇಲಾಖೇತರ ಕಾರ್ಯಗಳು ಹಿಮ್ಮೆಡಿ ಗೋಳ್ಳುತ್ತಿರುವುದನ್ನು ಮನ ಗಂಡ ರಾಜ್ಯ ಅಂಗನ ವಾಡಿ ನೌಕರರು ಕಳೆದ ಐದಾರು ವರ್ಷಗಳಿಂದ ಸಿಐಟಿಯು ನೇತೃತ್ವದ. ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಡಿಯಲ್ಲಿ ನಡೆಸುತ್ತಿರುವ ಸತತ ಹಾಗೂ ಸಂಘಟಿತ ಹೋರಾಟದ ಮೂಲಕ ನಿತೀಜ ರಾಜ್ಯ ಸರ್ಕಾರದ ಗಮನ ಸೆಳೆದು ತಮ್ಮ ಹಲವು ಬೇಡಿಕೆಗಳನ್ನು ಈಡೇರಿಸಿ ಕೊಂಡಿದ್ದಾರೆ.

ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ನೇತೃತ್ವದಲ್ಲಿ ನವೆಂಬರ್ 13 ರಿಂದ ಆರಂಭವಾದ ಅನಿರ್ಧಿಷ್ಟ ಉಪವಾಸ ಸತ್ಯಾಗ್ರಹದಲ್ಲಿ ಸಂಘದ ಕೇಂದ್ರ ಸಮಿತಿ ಸದಸ್ಯೆ ಗುಲ್ಬರ್ಗದ ಶಾಂತಾ ಘಂಟಿ ಕೋಲಾರದ ನಾರಾಯಣಮ್ಮ ಮತ್ತು ಜೆ.ಸಿ. ಭಾಗ್ಯ ರಾಯಚೂರಿನ ವನಜಾಕ್ಷಿ, ಕೊಪ್ಪಳದ ರತ್ನಮ್ಮ ಮಂಡ್ಯದ ಎಂ ಲೋಲಾಕ್ಷಿ ಪಾಲ್ಗೊಂಡು ಸತತ 5 ದಿನ ಉಪವಾಸ ಸತ್ಯಾಗ್ರಹ ನಡೆಸಿ ಸರ್ಕಾರದ ಗಮನವನ್ನು ತಮ್ಮ ಸಮಸ್ಯೆಗಳತ್ತ ಸೆಳೆದರು. ನವೆಂಬರ್ 17 ರಂದು ಕೆ.ಆರ್ ವೃತ್ತದಲ್ಲಿ ಧರಣಿ ನಡೆಸಿದ ಸಾವಿರಾರು ನೌಕರರು ಸಂಬಂಧ ಪಟ್ಟ ಎಲ್ಲಾ ಇಲಾಖೆಗಳ ಗಮನ ಸೆಳೆದು ಸ್ವತಃ ಮುಖ್ಯ ಮಂತ್ರಿಗಳೆ ಚರ್ಚೆ ದಿನಾಂಕ ಗೋತ್ತು ಪಡಿಸುವಂತೆ ಮಾಡುವಲ್ಲಿ ಯಶಸ್ವಿಯಾದರು.

**ದಕ್ಕಿದ ಹಸಿರು ಪಡಿತರ ಚೀಟಿ ಬೆಸಿಗೆ ರಜೆ:**

ನವೆಂಬರ್ 30 ರಂದು ಮುಖ್ಯ ಮಂತ್ರಿ ಜೆ.ಎಚ್ ಪಟೇಲ್ ಸಮ್ಮುಖದಲ್ಲಿ ನಡೆದ ಜಂಟಿ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವೆ ವಿಮಲಬಾಯಿ ದೇಶ್‌ಮುಖ್ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಬಸವಣ್ಣಪ್ಪ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಬಿ.ಕೆ. ಭಟ್ಟಾ ಚಾರ್ಯ ಹಾಗೂ ಸಿಐಟಿಯು ರಾಜ್ಯಧ್ಯಕ್ಷ ಎಸ್. ಸೂರ್ಯಾನಾರಾಯಣ ರಾವ್ ನೇತೃತ್ವದಲ್ಲಿ ಸಂಘಧ ಅಧ್ಯಕ್ಷರಾದ ಎನ್. ಪ್ರಭಾವತಿ. ಕಾರ್ಯದರ್ಶಿ ಎಸ್. ವರಲಕ್ಷ್ಮಿ ಖಜಾಂಚಿ ರಾಜೇಶ್ವರಿ ಸಹಕಾರ್ಯದರ್ಶಿ ಅಭಾಸಿಂಗ್, ರಾಜ್ಯ ಸಮಿತಿ ಸದಸ್ಯರಾದ ಎಂ. ಪ್ರಾವತಿ ಹಾಗೂ



ಗುಲ್ಬರ್ಗದ ಈರಮ್ಮ ಮತ್ತು ಇತರೆ ಸಂಘಟನೆಗಳ ಮುಖಂಡರು ಭಾಗವಹಿಸಿ ನಡೆಸಿದ ಧೀರ್ಘ ಮಾತುಕತೆಯ ನಂತರ ರಾಜ್ಯ ಸರ್ಕಾರ ತನ್ನ ವ್ಯಾಪ್ತಿಯ 15 ದಿನಗಳ ವಾರ್ಷಿಕ ಬೆಸಿಗೆ ರಜೆ, ಮೇಲ್ವಿಚಾರಕಿಯರ ಹುದ್ದೆಗೆ ಮಿಸಲಾತಿ ಅಂಗನವಾಡಿ ನೌಕರರಿಗೆ ಹಸಿರು ಪಡಿತರ ಚೀಟಿ, ವೇತನಕ್ಕೆ ನಿಗದಿತ ದಿನಾಂಕ ಹಾಗೂ ಇನ್ನು ಮುಂದೆ ಸೌದೆಗೆ ಬದಲಾಗಿ ನಿಯಮಿತವಾಗಿ ಸೀಮೆ ಎಣ್ಣೆ ಸರಬರಾಜು ಇವುಗಳನ್ನು ಒಪ್ಪಿರುವ ಸರ್ಕಾರ ವಾರ್ಷಿಕ 1000 ರೂ ಬೋನಸ್ ನೀಡುವಿಕೆ ಕುರಿತು ಸಂಭೀರವಾಗಿ ಪರಿಗಣಿಸುತ್ತೆವೆಂಬ ಭರವಸೆ ಸಭೆಯಲ್ಲಿ ಹೊಹೊಮ್ಮಿದೆ.

ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರವನ್ನು ಅಭಿನಂದಿಸಿರುವ ಸಂಘವು ಬೋನಸ್ ಬೇಡಿಕೆ ಶೀಘ್ರ ಈಡೇರಿಸುವಂತೆ ಆಗ್ರಹಿಸಿದೆ.

**ಖಾಯಂಮಾತಿ ಕನಿಷ್ಟ ವೇತನದತ್ತ ಪಯಣ:**

ರಾಜ್ಯ ಸರ್ಕಾರದ ಜೂತೆ ಸತತ ಹೋರಾಟ ನಡೆಸಿ ಮೇಲಿನ ಸೌಲಭ್ಯ ಪಡೆದಿರುವ ನೌಕರರು ಇಷ್ಟಕ್ಕೆ ತೃಪ್ತಿಭಾವನೆ ತಾಳದೆ ನಮ್ಮ ಭವಿಷ್ಯದ ಭದ್ರತೆಯ ಬೇಡಿಕೆಗಳಾದ ಖಾಯಮಾತಿ ಹಾಗೂ ಕನಿಷ್ಟ ವೇತನಕ್ಕಾಗಿ ಸಂಘರ್ಷವನ್ನೆ ನಡೆಸಬೇಕಾಗಿದೆಂದು ಸಂಘವು ನೌಕರರಿಗೆ ಕರೆ ನೀಡಿದೆ.

ಅಂಗನವಾಡಿ ಕೇಂದ್ರಗಳು ಬಡ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಅಂದಿನ ಕೇಂದ್ರ ಸರ್ಕಾರದ ಮುತುವರ್ಜಿ ಯಿಂದ ಜಾರಿಗೊಂಡಿತು. ಆದರೆ ಇಂದಿನ ಸರ್ಕಾರಗಳು ಸಾಮಾನ್ಯ ಜನರ ಕಲ್ಯಾಣವನ್ನು ಮರೆತು. ಈ ಬಾಲಾವಿಕಾಸ ಯೋಜನೆಯನ್ನೆ ಕಾಣದಾಗಿಸುವ ಹೆದ್ದಾರಿಯತ್ತ ನೆಡದಿದೆ. ಇಂದು ಅಂಗನವಾಡಿ ನೌಕರರು ಕೇವಲ ತಮ್ಮ ಕಾಯಮಾತಿ ಹಾಗೂ ಕನಿಷ್ಟ ವೇತನ ಪಡೆಯುವುದಾಗಿರದೆ ನಮ್ಮ ಸುತ್ತ ಮುತ್ತಲಿನ ಬಡ ಸಹೋದರಿಯರ ಹಾಗೂ ಬಡ ಮಕ್ಕಳ ಜೀವ ಉಳಿಸುವ ಗುರುತರ ಜವಬ್ದಾರಿಯು ಆಗಿದೆ.

ಕೆಲಸದ ಖಾಯಮಾತಿ ಅಂಗನವಾಡಿ ಕೇಂದ್ರಗಳ ಖಾಯಮಾತಿ ಹಾಗೂ ಕನಿಷ್ಠ ವೇತನ ಬೇಡಿಕೆಗಳ ಈಡೇರಿಕೆಗಾಗಿ ಜನ ಕಲ್ಯಾಣ ಮರೆತ ಕೇಂದ್ರ ಸರ್ಕಾರದ ಜೂತೆ ಅಖಿಲ ಭಾರತ ಮಟ್ಟದ ದೀರ್ಘ ಸಂಘರ್ಷ ನಡೆಸ ಬೇಕಾಗಿದೆ. ಸಿಐಟಿಯು ಸಂಘಟನೆ ರಾಷ್ಟದಲ್ಲಿ ಸಮರ್ಥ ಹಾಗೂ ಪ್ರಬಲ ಸಂಘಟನೆಯಾಗಿದೆ. ಸಿಐಟಿಯು ದೇಶಧ ಬಡ ಕಾರ್ಮಿಕರ ನೊಂದ ನೌಕರರ ಹಿತ ಕಾಪಾಡುವ ಜವಬ್ದಾರಿ ಸ್ಥಾನದಲ್ಲಿದ್ದು ಹಲವು ವರ್ಷಗಳಿಂದ ರಾಷ್ಟದ ಅಂಗನ ವಾಡಿ ನೌಕರರು ಸಿಐಟಿಯು ನೇತೃತ್ವದ ಸಂಘರ್ಷ ಸಮಿತಿಯಡಿ ಹೋರಾಟ ನಡೆಸಿ ಕೇಂದ್ರ ಸರ್ಕಾರದ ಗಮನ ಸೆಳೆದು ತಮ್ಮ ಹಲವು ಸಮಸ್ಯೆಗಳನ್ನು ಬಗೆ ಹರಿಸಿರುವುದನ್ನು ಸ್ಮರಿಸ ಬಹುದಾಗಿದೆ.

ರಾಜ್ಯ ಅಂಗನವಾಡಿ ನೌಕರರು ಕೇವಲ ಸದಸ್ಯತ್ವ ಚಳುವಳಿ ಹಾಗೂ ವಾರ್ಷಿಕ ಹೋರಾಟದ ಸಂಘಟನೆಗಳಿಂದ ಹೊರ ಬಂದು ಸಿಐಟಿಯು ನೇತೃತ್ವದ ಸಂಘರ್ಷ ಸಮಿತಿ ಯಡಿಯಲ್ಲಿ ಪ್ರಬಲ ಹೋರಾಟ ನಡೆಸಿ ಕೇಂದ್ರ ಸರ್ಕಾರವನ್ನು ಮಣಿಸಿ ಕೆಂದ್ರಗಳನ್ನು ಖಾಸಗಿ ಕರಿಸುವುದನ್ನು ನಿಲ್ಲಿಸಿ ಕೆಲಸ ಖಾಯಂ ಹಾಗೂ ಕನಿಷ್ಟ ವೇತನ ಪಡೆದು ಅಂಗನವಾಡಿ ನೌಕರರು ಒಂದು ಗೌರವಂಯುತ ಬದುಕು ನಡೆಸ ಬೇಕಾಗಿದೆ.

**ಡಿಸೆಂಬರ್ 11 ರ ಮುಷ್ಕರಕ್ಕೆ ಬೆಂಬಲ:**

ಸಾಮೂಹಿಕ ಸಂಘಟನೆಗಳು ಡಿ. 11 ರಂದು ಖಾಸಗೀಕರಣ ಹಾಗೂ ಕೋಮುವಾದದ ವಿರುದ್ಧ ನಡೆಸುತ್ತಿರುವ ಮುಷ್ಕರದಲ್ಲಿ ಅಂಗನವಾಡಿ ನೌಕರರು ಪಾಲ್ಗೊಂಡು ಮುಷ್ಕರ ಯಶಸ್ವಿ ಮಾಡುವಂತೆ ರಾಜ್ಯ ಅಂಗನವಾಡಿ ನೌಕರರ ಸಂಘ ಕರೆ ನೀಡಿದೆ.

## ಕರ್ನಾಟಕದಲ್ಲಿ ಕಳೆದವಾರ

**ನವೆಂಬರ್ 27**

- ಮೈಸೂರು ಅರಮನೆ ವಿದೇಯಕಕ್ಕೆ ಕೇಂದ್ರದಿಂದ ಮುಕ್ತಿ
- 27 ರೈತರಿಗೆ 1997-98 ನೇ ಸಾಲಿನ ಕೃಷಿ ಪ್ರಶಸ್ತಿ
- ವೃತ್ತಿ ಶಿಕ್ಷಣ ಶೇ. 15 ಪೇಮೆಂಟ್ ಸೀಟು ರಾಜ್ಯದ ಹೊರಗಿನವರಿಗೆ-ಹೈಕೋರ್ಟ್ ತೀರ್ಪು

**ನವೆಂಬರ್ 28**

- ಹಳಿಯಾಳ ಹತ್ತಿ ಬೆಲೆ ತೀವ್ರ ಕುಸಿತ-ರೈತರ ಪ್ರತಿಭಟನೆಗೆ ಮಣಿದು ಟೆಂಡರ್ ರದ್ದು
- ಕೋಜೆಂಟ್ರಿಕ್ಸ್ ವಿದ್ಯುತ್ ಯೋಜನೆಗೆ ಪೂರಕ ಖಾತರಿ ನೀಡುವಂತೆ ಕೇಂದ್ರಕ್ಕೆ ರಾಜ್ಯದ ಆಗ್ರಹ
- ಐದು ಸಚಿವರು ಸೇರಿ 81 ಶಾಸಕರು ಆಸ್ತಿಪಾಸ್ತಿ ಘೋಷಣೆ ಮಾಡಿಲ್ಲ.

**ನವೆಂಬರ್ 29**

- ರವೀಂದ್ರ ಕಲಾಕ್ಷೇತ್ರ ಆವರಣದಲ್ಲಿ ಕನ್ನಡ ಭವನ ಉದ್ಘಾಟನೆ
- ಇ.ಎಂ.ಎಸ್. ಭವನಕ್ಕೆ ಇ.ಕೆ. ನಯನಾರ್‌ರಿಂದ ಅಡಿಗಲ್ಲು.

**ನವೆಂಬರ್-30**

- ಬೆಂಗಳೂರಿನ ನೂತನ ಮೇಯರ್ -ಉಪ ಮೇಯರ್ ಆಗಿ ಕೆ.ಎಚ್.ಎಸ್. ಸಿಂಹ, ಶಹತಾಜ್ ಖಾನುಂ ಆಯ್ಕೆ ,
- ಮೈಸೂರು ಅರಮನೆ ರಾಜ್ಯ ಸರ್ಕಾರದ ಸ್ವಾಧೀನ ಕಾಯ್ದೆ ಜಾರಿಗೆ
- ಬಾಬಾಬುಡನ್ ಗಿರಿ ರಥಯಾತ್ರೆ-ಹುಬ್ಬಳ್ಳಿಯಲ್ಲಿ ಕಲ್ಲು ತೂರಾಟ 12 ಬಸ್ಸಿಗೆ ಹಾನಿ

**ಡಿಸೆಂಬರ್ 1**

- ಬಿಗಿಭದ್ರತೆಯಲ್ಲಿ ದತ್ತ ಜಯಂತಿ ಆರಂಭ
- ಮಾನ್ಸಾಂಟೊ ಹತ್ತಿ ಬೀಜ ಮಾರಾಟಕ್ಕೆ ಅನುಮತಿ ಕೇಂದ್ರ ಹಾಗೂ ರಾಜ್ಯ ಕೃಷಿ ಸಚಿವರ ವಿರುದ್ಧ ರಾಜ್ಯ ರೈತ ಸಂಘದಿಂದ ಕ್ರಿಮಿನಲ್ ಖಟ್ಲೆ
- ಪಕ್ಷದ ಹಿರಿಯರಿಂದ ಅವಮಾನ - ಬಿಜೆಪಿಯ ವಿಜಯ ಸಂಕೇಶ್ವರ ಲೋಕ ಸಭೆಗೆ ರಾಜಿನಾಮೆ
- ಗುಲ್ಬರ್ಗ-ಭೀಕರ ರಸ್ತೆ ಅಪಘಾತ 14 ಸಾವು

**ಡಿಸೆಂಬರ್-2**

- ದತ್ತ ಜಯಂತಿಗೆ ನೀರಸ ಪ್ರತಿಕ್ರಿಯೆ ಪೋಲಿಸ್ ಕಾವಲಿನಲ್ಲಿ ಶೋಭಾಯಾತ್ರೆ
- ದಳ ಸಾಧನಾ ಸಮಾವೇಶ ಮುಂದಕ್ಕೆ
- ಬಾಬಾಬುಡನ ಗಿರಿ ಕಟ್ಟೆಚ್ಚರ -ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶ
- ಅರಮನೆ ಸ್ವಾಧೀನ ವಿರುದ್ಧ ಒಡೆಯರ್ ರಿಟ್

**ಡಿಸೆಂಬರ್-3**

- ಬಾಬಾಬುಡನ್ ಗಿರಿಯಲ್ಲಿ ಶಾಂತಿಯುತ ದತ್ತ ಜಯಂತಿ ಆಚರಣೆ
- ಬೆಂಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಆಸ್ತಿಮೌಲ್ಯ ಪುನರ್ ವಿಮರ್ಶೆ
- ಪಿಯುಸಿ ಹೊಸ ನಿಯಮ ಕೈ ಬಿಡಲು ಸರ್ಕಾರದ ನಿರ್ಧಾರ
- ಕಲ್ಲೂರು ಪೂಜಾಸ್ಥಳ ವಿವಾದ - ಗೃಹ ಸಚಿವರ ಸಂಧಾನ ವಿಫಲ.

# ಕಳಪೆ ಗೊಬ್ಬರ ಹಾಗೂ ಬೀಜ ಮಾರಾಟಗಾರರ ವಿರುದ್ಧ ಪ್ರಾಂತ ರೈತ ಸಂಘದ ದೂರು

**ದೇವದುರ್ಗ:** ತಾಲೂಕಿನಲ್ಲಿ ಅತಿವೃಷ್ಠಿಯಿಂದಾಗಿ ಭೀಕರ ಪರಸ್ಥಿತಿ. ಉಂಟಾಗಿದ್ದು, ರಾಜ್ಯ ಸರಕಾರದ ನಿಷ್ಕಾಳಜಿಯ ವಿರುದ್ಧ ಪ್ರಾಂತ ರೈತ ಸಂಘದ ಹೋರಾಟ ತೀವ್ರತೆಯನ್ನು ಪಡೆಯುತ್ತಿದೆ. ತಾಲೂಕಿನಲ್ಲಾದ ಗ್ರಾಮೀಣ ಪ್ರದೇಶದ ನಷ್ಟದ ಕುರಿತು ವಿವರಣೆ ಸಹಿತ ತಹಸೀಲ್ದಾರರಿಗೆ ಒಪ್ಪಿಸಿ ಪರಿಹಾರಕ್ಕೆ ಒತ್ತಾಯಿಸಲಾಗಿದೆ.

ಜೊತೆಗೆ ರಾಷ್ಟ್ರೀಯ ಬೀಜ ನಿಗಮದಿಂದ ಕಳಪೆ ಬಿಳಿ ಜೋಳದ ಮಾರಾಟ ಹಾಗೂ ಕಲಬೆರಕೆ ರಸಗೊಬ್ಬರದ ಕುರಿತು ದೂರುಗಳನ್ನು ಸಲ್ಲಿಸಲಾಯಿತಾದರೂ ಪ್ರಯೋಜನ ವಾಗದೆಯಿರುವಾಗ ಕಲಬೆರಕೆ ಗೊಬ್ಬರವಿರುವ ಗೋದಾಮನ್ನು ಗುರುತಿಸಿ ತಾಲೂಕಾ ಕೃಷಿ ಅಧಿಕಾರಿಯನ್ನು ಒತ್ತಾಯ ಪೂರ್ವಕವಾಗಿ ಕರೆತಂದು ಟೆಸ್ಟ್ ಮಾಡಲು ಕೇಳಲಾಯಿತು. ವ್ಯಾಪಾರಿಗಳೊಂದಿಗೆ ಶಾಮೀಲಾದ ಅಧಿಕಾರಿ ಸ್ಯಾಂಪಲ್ಲುಗಳನ್ನು ವಡ್ಡರಹಟ್ಟಿಗೆ ಕಳಿಸುವ ನಾಟಕಮಾಡಿ ಪಂಚನಾಮೆ ಮಾಡದೆ ಗೋದಾಮ್ ಸೀಜ್ ಮಾಡದೆ ಮೋಸ ಮಾಡಿದ್ದಾರೆ.

ಗೋದಾಮಿನ ಮಾಲೀಕರಾದ ಬಸವೇಶ್ವರ ಕೃಷಿ ಸೇವಾ ಕೇಂದ್ರದ ಮಾಲೀಕರು ಕಾ।। ಚಂದ್ರಶೇಖರ ಬಾಳಿಯವರಿಗೆ ಒಂದು ಲಕ್ಷ ಪರಿಹಾರ ಕೇಳಿ ಡಿಫಾಮೇಶನ್ ಕಲಮಿನ ಅಡಿಯಲ್ಲಿ ಲೀಗಲ್ ನೋಟಿಸ್ ಕಳಿಸಿದ್ದಾರೆ.

ಕಳ್ಳ ವ್ಯಾಪಾರಿಗಳ ಈ ಅಹಂಕಾರವನ್ನು ಪ್ರತಿಭಟಿಸಿ ಸಿಪಿಐ(ಎಂ) ದೇವದುರ್ಗ ತಾಲೂಕು ಸಮಿತಿಯಿಂದ ಪ್ರತಿಭಟನೆ ನಡೆಸಲಾಗಿದ್ದು ತಾಲೂಕಾ ಕೇಂದ್ರದಲ್ಲಿ ಅತಿವೃಷ್ಟಿ ಪರಿಹಾರದ ತರ್ತು ಜಾರಿಗೂ ಸೇರಿದಂತೆ ಬಹಿರಂಗ ಸಭೆಗಳನ್ನು ನಡೆಸಲಾಗಿದೆ.

ಪ್ರಾಂತ ರೈತ ಸಂಘದಿಂದ ಕಳ್ಳಾವ್ಯಾಪಾರಿ ಭ್ರಷ್ಟ ಅಧಿಕಾರಿಗಳ ಮೈತ್ರಿಯ ವಿರುದ್ಧ ಕರಪತ್ರ ಹಾಕಿಸಿ ಶಿಕ್ಷೆಗೆ ಒತ್ತಾಯಿಸಿ ಪ್ರಚಾರ ನಡೆಸಲಾಯಿತು.

# ರಾಯಚೂರಿನಲ್ಲಿ ಯಶಸ್ವಿ ಜೀಪ್ ಜಾಥ

ಜನರ ದೇಶದ ಸಮಸ್ಯೆಗಳಿಗೆ ಕಾರಣಗಳು ಹಾಗೂ ಪರಿಹಾರ ನೀಡಬಲ್ಲ ಪರ್ಯಾಯ ನೀತಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಪ್ರಚಾರಾಂಧೋಲನ ರಾಯಚೂರು ಜಿಲ್ಲೆಯಲ್ಲಿ ನಡೆಸಲಾಯಿತು.

ಬೆಲೆಏರಿಕೆ, ಕೋಮುವಾದ, ಖಾಸಗೀಕರಣಗಳ ವಿರುದ್ಧ ಅಕ್ಟೋಬರ್ 29 ರಂದು ಜನತೆಯ ಸಮಸ್ಯೆಗಳ ವಿರುದ್ಧ ಜನರಲ್ಲಿ ಅರಿವು ಮೂಡಿಸುವ ಛಲದೊಂದಿಗೆ ಹೊರಟ ಸಿಂಧನೂರು ಜಾಥ ನಗರದ ಸರಕಾರಿ ಆಸ್ಪತ್ರೆ ಎದುರಿನ ಉದ್ಯಾನದಲ್ಲಿ ಉದ್ಘಾಟನೆಗೊಂಡು ಲಿಂಗಸಗೂರು, ಸೂರಪುರ, ಜೇವರ್ಗಿ, ಚಿತ್ತಾಪುರ, ಯಾದಗಿರಿ, ದೇವದುರ್ಗ, ಮಾನ್ವಿ ತಾಲೂಕು ಹಾಗೂ 200ಕ್ಕೆ ಮೆಲ್ಪಟ್ಟು ಹಳ್ಳಿಗಳನ್ನು ಸಂಚರಿಸಿ 10 ಸಾವಿರಕ್ಕೆ ಮೇಲ್ಪಟ್ಟ ಜನರನ್ನು ತಲುಪಲು ಯಶಸ್ವಿಯಾಗಿತ್ತು. 60 ಹೆಚ್ಚು ಸಭೆಗಳನ್ನು ನಡೆಸಲಾಯಿತು.

ಈ ಜಾಥದಲ್ಲಿ ಸಿ.ಐ.ಟಿ.ಯು ಎಸ್.ಎಫ್.ಐ., ಎ.ಐ.ಟಿ.ಯು ಸಿ., ಡಿವೈಎಫ್ಐ, ಯುಟಿಯುಸಿ, ಎ.ಐ.ಡಿ. ಎಸ್.ಓ., ಕ.ಪ್ರಾ.ರೈ.ಸ., ಜನವಾದಿ ಮಹಿಳಾ ಸಂಘಟನೆ ಮುಂತಾದ ಸಂಘಟನೆ ಗಳು ಪಾಲ್ಗೊಂಡಿದ್ದವು. ಈ ಜಾಥದ ನೇತೃತ್ವವನ್ನು ಕ.ಪ್ರಾಂತ ಕೃಷಿಕೂಲಿಕಾರರ ಸಂಘದ ರಾಯಚೂರು ಜಿಲ್ಲಾ ಮುಖಂಡರಾದ ಬಿ.ಲಿಂಗಪ್ಪ ವಹಿಸಿದ್ದರು.

# ಕುಳಾಯಿ ಚರ್ಚಿನ ಮೇಲೆ ದಾಳಿ: ಸಿಪಿಐ(ಎಂ) ಖಂಡನೆ

ಮಂಗಳೂರು ತಾಲೂಕು ಸುರತ್ಕಲ್‌ನ ಕುಳಾಯಿಯಲ್ಲಿನ ಸೈಂಟ್ ಥೋಮಸ್ ಇವಾಂಜಿಕಲ್ ಚರ್ಚ್ ಆಫ್ ಇಂಡಿಯಾದ ಮೇಲೆ ದಾಳಿ ಮಾಡಿ ಪ್ರಾರ್ಥನೆ ಸಲ್ಲಿಸುತ್ತಿದ್ದ ಹೆಂಗಸರು ಮಕ್ಕಳೆನ್ನದೆ ಮಾರಕಾಸ್ತ್ರಗಳಿಂದ 25-30 ದುಷ್ಕರ್ಮಿಗಳ ಗುಂಪು ಹಲ್ಲೆ ನಡೆಸಿರುವುದನ್ನು ದ. ಕನ್ನಡ ಸಿಪಿಐ(ಎಂ) ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ.

ಪ್ರಾರ್ಥನಾ ಸಮಯದಲ್ಲಿ ಒಳನುಗ್ಗಿದ ದುಷ್ಕರ್ಮಿಗಳು ಹಲ್ಲೆ ನಡೆಸಿ ಆಸ್ತಿ ಪಾಸ್ತಿಗಳನ್ನು ನಾಶಪಡಿಸಿದ್ದಾರೆಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್ ಶ್ರೀಯಾನ್ ಹಾಗೂ ನಗರ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ ಹಲ್ಲೆಗೊಳಗಾದ 7 ಮಂದಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದಿದ್ದಾರೆ. ಇತ್ತೀಚೆಗೆ ದೇಶದ ಅಲ್ಪಸಂಖ್ಯಾತರ ಮೇಲೆ ಅದರಲ್ಲೂ ಕ್ರಿಶ್ಚಿಯನ್‌ರ ಮೇಲೆ ಹೆಚ್ಚುತ್ತಿರುವ ಹಲ್ಲೆ ಅತ್ಯಾಚಾರಗಳಂತೆ ಇದು ಪೂರ್ವಯೋಜಿತ ಎಂದಿರುವ ಕೆ.ಆರ್ ಶ್ರೀಯಾನ್ ಕೂಡಲೇ ಅಪರಾಧಿಗಳನ್ನು ಬಂಧಿಸಿ ಶಿಕ್ಷೆಗೆ ಗುರಿ ಪಡಿಸಬೆಕೆಂದು ಒತ್ತಾಯಿಸಿದ್ದಾರೆ.

# ಬೆಳ್ತಂಗಡಿ ತಾಲೂಕು ರೈತ ಸಂಘದ 3ನೇ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘ ಬೆಳ್ತಂಗಡಿ ತಾಲೂಕು ಸಮಿತಿಯ 3ನೇ ಸಮ್ಮೇಳನವು ಇತ್ತೀಚೆಗೆ ಬೆಳ್ತಂಗಡಿಯ ಎನ್.ಜಿ.ಒ. ಹಾಲ್‌ನಲ್ಲಿ ಯಶಸ್ವಿಯಾಗಿ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ರೈತ ಸಂಘದ ತಾಲೂಕು ಸಮಿತಿ ಅಧ್ಯಕ್ಷ ರುಕ್ಮಯ ಭಂಡಾರಿ ಅವರು ವಹಿಸಿ ದ್ದರು. ಸಮ್ಮೇಳನವನ್ನು ಜಿಲ್ಲಾ ಸಮಿತಿ ಅಧ್ಯಕ್ಷರಾದ ಜನಾರ್ಧನ ನಾಯಕ ಉದ್ಘಾಟಿಸಿ ಮಾತಾನಾಡಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಅಬ್ರಾಹಂ ಕರ್ಕಡ ಹಾಗೂ ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ವಿಷ್ಣುಮೂರ್ತಿ ಭಟ್ ಅವರುಗಳು ಉಪಸ್ಥಿತರಿದ್ದರು.

ಸಮ್ಮೇಳನವು ಅಕ್ರಮ-ಸಕ್ರಮ ತ್ವರಿತ ವಿಲೇವಾರಿ ಹಾಗೂ ಅರಣ್ಯ ಭೂಮಿ ಒತ್ತುವರಿದಾರರಿಗೆ ಸಕ್ರಮಗೊಳಿಸಲು, ಬಡ ನಿವೇಶನದಾರರಿಗೆ ಉಚಿತ ಹಕ್ಕು ಪತ್ರ ನೀಡಲು, ಹಾಳುಬಿದ್ದ ರಸ್ತೆಗಳ ತುರ್ತು ದುರಸ್ತಿಗೆ ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ನೂತನ ತಾಲೂಕು ಸಮಿತಿ ಅಧ್ಯಕ್ಷರಾಗಿ ರುಕ್ಮಯ ಭಂಡಾರಿ, ಉಪಾಧ್ಯಕ್ಷರುಗಳಾಗಿ ಬಿ.ಎಂ.ಭಟ್ ಸೆಲಿಮಾನ್ ಸಂಜೀವ ಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಹರಿದಾಸ ಎಸ್.ಎಂ., ಜೊತೆ ಕಾರ್ಯದರ್ಶಿಗಳಾಗಿ ಮಂಜುನಾಥ, ಸುಕನ್ಯ ಪಾಪಚ್ಚನ್ ಹಾಗೂ ಕೋಶಾಧಿಕಾರಿಯಾಗಿ ಶಿವಕುಮಾರ್ ಆಯ್ಕೆ ಆದರು. ಜಿಲ್ಲಾ ಸಮ್ಮೇಳನಕ್ಕೆ 5 ಮಹಿಳೆಯರೂ ಸೇರಿದಂತೆ 25 ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

# ಗ್ರಾಮಪಂಚಾಯತಿ ನೌಕರರ 3ನೇ ರಾಜ್ಯ ಸಮ್ಮೇಳನ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ 3ನೆಯ ಸಮ್ಮೇಳನ 4.1.99 ರಂದು ಬೆ. 11 ಗಂಟೆಗೆ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ನಡೆಯಲಿದೆ. ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಎಂ.ಪಿ.ಪ್ರಕಾಶ್ ಉದ್ಘಾಟನೆ ಮಾಡಲಿದ್ದು, ಸಿಐಟಿಯು ಅಧ್ಯಕ್ಷರಾದ ಎಸ್.ಸೂರ್ಯನಾರಾಯಣ ರಾವ್, ಶಾಸಕರಾದ ಶ್ರೀರಾಮರೆಡ್ಡಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಘದ ಪ್ರತಿನಿಧಿಗಳೊಂದಿಗಾದ ಒಪ್ಪಂದದ ಮುಖ್ಯ ಅಂಶಗಳನ್ನು ಮಾನ್ಯ ಮಂತ್ರಿಯವರು ಸಮ್ಮೇಳನದಲ್ಲಿ ಪ್ರಕಟಗೊಳಿಸಲಿದ್ದಾರೆ.

# ಕಡೆಗಣಿಸಲಾಗದ ತೀರ್ಪು

**ಸುರ್ಜಿತ್**

**ನವೆಂಬರ್ ಚುನಾವಣೆಗಳಲ್ಲಿ ನಾಲ್ಕು ರಾಜ್ಯಗಳ-ಅದರಲ್ಲೂ ಮುಖ್ಯವಾಗಿ ಮಧ್ಯಪ್ರದೇಶ, ರಾಜಸ್ತಾನ, ದಿಲ್ಲಿಗಳ ಜನರು ಸ್ಪಷ್ಟವಾದ ತೀರ್ಪು ನೀಡಿದ್ದಾರೆ. ತನ್ನ ಪರಾಭವವನ್ನು ಮುಚ್ಚಿಕೊಳ್ಳಲು ಬಿಜೆಪಿ ಮುಖಂಡರು ಏನೇ ಹೇಳಲಿ, ಈ ತೀರ್ಪಿನ ಮಹತ್ವವನ್ನು ಕಡೆಗಣಿಸಲು ಎಷ್ಟೇ ಪ್ರಯತ್ನ ಪಡಲಿ ಇದು ವಾಜಪೇಯಿ ಸರಕಾರದ ಬುಡವನ್ನೇ ಅಲುಗಾಡಿಸಿರುವುದಂತೂ ಸ್ಪಷ್ಟ. ಮುಂಬರುವ ದಿನಗಳಲ್ಲಿ ಇದರ ಪರಿಣಾಮಗಳು ಹೆಚ್ಚೆಚ್ಚು ಸ್ಪಷ್ಟವಾಗಲಿವೆ ಎನ್ನುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಜನತೆ ಬಯಸುವ ಒಂದು ನಿಜವಾದ ಪರ್ಯಾಯ ಬರಬೇಕಾದರೆ ಡಿಸೆಂಬರ್ ೧೧ರ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಬೇಕು ಎನ್ನುತ್ತಾರೆ.**

ಈಗಷ್ಟೇ ಮುಗಿದಿರುವ ನಾಲ್ಕು ರಾಜ್ಯಗಳಲ್ಲಿನ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಸೋಲಿನ ಬಗ್ಗೆ ಸಂಶಯವೇನೂ ಇರಲಿಲ್ಲ. ಪ್ರಶ್ನೆಯಿದ್ದದ್ದು ಸೋಲಿನ ಮಟ್ಟ ಎಷ್ಟಿರುತ್ತದೆ ಎಂಬುದು. ಜನತೆ ಈಗ ವ್ಯಕ್ತಪಡಿಸಿರುವ ತಿರಸ್ಕಾರಕ್ಕೆ ಆ ಪಕ್ಷ ಸಂಪೂರ್ಣ ಅರ್ಹವಾಗಿದೆ. ಬಿಜೆಪಿ ಮುಖಂಡತ್ವಕ್ಕೂ ಪ್ರಚಾರ ವೇಳೆಯಲ್ಲೇ ಇದರ ಅರಿವು ಉಂಟಾಗಿದ್ದರಿಂದಲೇ ಪ್ರಧಾನಮಂತ್ರಿಗಳು ಮತ್ತಿತರ ಮುಖಂಡರು ಇದು ತಮ್ಮ ಸರಕಾರದ ಬಗ್ಗೆ ಜನಾಭಿಪ್ರಾಯವಲ್ಲ ಎಂದು ಮತ್ತೆ-ಮತ್ತೆ ಹೇಳಲಾರಂಭಿಸಿದ್ದರು.

ತನ್ನ ಬಲಿಷ್ಠ ನೆಲೆಗಳಾದ ದಿಲ್ಲಿ, ರಾಜಸ್ತಾನ, ಮಧ್ಯಪ್ರದೇಶಗಳಲ್ಲಿ ಈ ಸಂಪೂರ್ಣ ಪರಾಭವದ ಮಹತ್ವವನ್ನು ಕಡೆಗಣಿಸಲು ಬಿಜೆಪಿ ಏನೇ ಕಸರತ್ತು ನಡೆಸಿದ್ದರೂ ಇದು ವಾಜಪೇಯಿ ಸರಕಾರದ ಬುಡವನ್ನೇ ಅಲುಗಾಡಿಸಿ ಬಿಟ್ಟಿದೆ ಎಂಬುದಂತೂ ವಾಸ್ತವ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಹಿಂದೆಂದೂ ಇಷ್ಟು ಸಣ್ಣ ಅವಧಿಯಲ್ಲಿ ಜನ ಒಂದು ಸರಕಾರವನ್ನು, ಅದರ ಧೋರಣೆಗಳನ್ನು ತಿರಸ್ಕರಿಸಿರಲಿಲ್ಲ. ಎಂಟು ತಿಂಗಳು ಸಣ್ಣ ಅವಧಿಯೇ. ಆದರೆ ಜನರಿಗೆ ಸಾಕಪ್ಪಾ ಸಾಕು ಎನಿಸಿತ್ತು. ಅದನ್ನು ಸುಸ್ಪಷ್ಟಗೊಳಿಸಿದ್ದಾರೆ. ಬಿಜೆಪಿ ಸರಕಾರ ಈಗ ವಿಶ್ವಾಸಾರ್ಹತೆಯನ್ನು ಕಳಕೊಂಡಿದೆ, ಕೇಂದ್ರದಲ್ಲಿ ಆಳುವ ನೈತಿಕ ಹಕ್ಕನ್ನೂ ಕಳಕೊಂಡಿದೆ.

**ಮುಖ ಮುಚ್ಚಿಕೊಳ್ಳಲು**

ಮಿತ್ರ ಪಕ್ಷಗಳು ತಮ್ಮ ವಿಧೇಯತೆಯನ್ನು ಪುನರುಚ್ಚರಿಸಿದ್ದರೂ ಬಿಜೆಪಿ ನೇತೃತ್ವದ ಕೂಟದೊಳಗಿನ ಕಿತ್ತಾಟ ಮುಂಬರುವ ದಿನಗಳಲ್ಲಿ ತೀವ್ರಗೊಳ್ಳುವುದು ಖಂಡಿತ. ಈ ಕಾರಣಕ್ಕಾಗಿಯೇ ನಾವು ಪ್ರಚಾರದ ವೇಳೆಯಲ್ಲಿ ಈ ಫಲಿತಾಂಶಗಳು ಒಂದು ದೇಶವ್ಯಾಪಿ ಪ್ರಭಾವ ಬೀರಲಿವೆ ಎಂದು ಮತ್ತೆ-ಮತ್ತೆ ಹೇಳಿದ್ದು. ಬಿಜೆಪಿಯ ಮಿತ್ರ ಪಕ್ಷಗಳಿಗೆ ಬಿಜೆಪಿ ತಮಗೆ ಹೊರೆಯಾಗುತ್ತಿದೆ ಎಂದು ಹೆಚ್ಚೆಚ್ಚು ಪ್ರಮಾಣದಲ್ಲಿ ಅನ್ನಿಸಲಿದೆ.

ಬಿಜೆಪಿ ತನ್ನ ಪರಾಭವವನ್ನು ಮುಚ್ಚಿಕೊಳ್ಳಲು ಏನೆಲ್ಲಾ ವಿವರಣೆ ನೀಡುತ್ತಿದೆ. ಆದರೆ ಇದು ಬಿಜೆಪಿ ನೇತೃತ್ವದ ಸರಕಾರದ ದುರಾಡಳಿತದ ವಿರುದ್ಧ ಬಿಜೆಪಿ ಮೈತ್ರಿ ಕೂಟದಲ್ಲಿ ಅಪನಂಬಿಕೆಯ ತೀರ್ಪು ಎಂಬುದರಲ್ಲಿ ಸಂದೇಹವಿಲ್ಲ. ಬಿಜೆಪಿ ಮುಖಂಡರೆಲ್ಲಾ ಈ ಸೋಲಿನ ಹೊಣೆಯನ್ನು ತಮ್ಮ ರಾಜ್ಯ ಸರಕಾರಗಳ ಮೇಲೆ ವರ್ಗಾಯಿಸಿದರೂ, ಬಿಜೆಪಿ ಅಧ್ಯಕ್ಷರಂತೂ ಈ ಸೋಲು ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯಿಂದ ಎಂದು ಒಪ್ಪಿಕೊಂಡಿದ್ದಾರೆ.

**ಜನಗಳ ತಿರಸ್ಕಾರ**

ಬಿಜೆಪಿ ವ್ಯಾಪಾರಿಗಳ, ಕಾಳಸಂತೆಕೋರರ ಹಾಗೂ ಕಳ್ಳ ದಾಸ್ತಾನುಗಾರರ ಪಕ್ಷ ಎಂಬ ಭಾವನೆ ಕೇಂದ್ರದಲ್ಲಿ ಅದರ ಸರಕಾರ ಬಂದ ನಂತರ ಉಂಟಾದ ಬೆಲೆಯೇರಿಕೆಯಿಂದಾಗಿ ಒಂದು ನಂಬಿಕೆಯಾಗಿ ಪರಿವರ್ತನೆಗೊಂಡಿತು. ಈರುಳ್ಳಿಯಿಲ್ಲದಿದ್ದರೆ ಸೇಬು ತಿನ್ನಿ ಎಂದು ರಾಜಸ್ತಾನದ ಮುಖ್ಯಮಂತ್ರಿ ಶೇಖಾವತ್ ವ್ಯಂಗ್ಯವಾಡಿದ್ದು ಗಾಯದ ಮೇಲೆ ಉಪ್ಪು ಸವರಿತು. ಶೇಖಾವತ್ ಮತ್ತು ಬಿಜೆಪಿ ಅದಕ್ಕೆ ಭಾರೀ ಬೆಲೆ ತೆತ್ತರು. ಪ್ರಕೃತಿಯನ್ನು ದೂರುವ ಪ್ರಯತ್ನ, ಪರಮಾಣು ಸ್ಫೋಟ ನಡೆಸಿ ಗಮನ ಬೇರೆಡೆಗೆ ಸೆಳೆಯಲು ಪ್ರಯತ್ನ ಇವುಗಳ ಹಿಂದಿರುವ ಆಟವನ್ನು ಜನ ಗಮನಿಸಿದರು, ಸರಿಯಾದ ಉತ್ತರ ನೀಡಿದರು. ಈ ಚುನಾವಣಾ ತೀರ್ಪಿನ ಮೂಲಕ ತನ್ನ ಆರ್ಥಿಕ ನೀತಿಗಳನ್ನು, ತನ್ನ ಪರಮಾಣು ನೀತಿಯನ್ನು ಜನ ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ ಎಂದು ಬಿಜೆಪಿ ಈಗಲಾದರೂ ಅರಿಯುತ್ತದೆಯೇ?

ತಾನು ಅಧಿಕಾರಕ್ಕೆ ಬಂದ ನಂತರ ಉದಾರೀಕರಣ ನೀತಿಗಳನ್ನು ರಭಸದಿಂದ ಜಾರಿಗೆ ತರಲಾರಂಭಿಸಿದ್ದನ್ನು ಜನ ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ ಎಂಬುದನ್ನು ಬಿಜೆಪಿ ನೇತೃತ್ವದ ಸರಕಾರ ಅರಿಯಬೇಕು. ಈ ಎಂಟು ತಿಂಗಳಲ್ಲಿ ಬಿಜೆಪಿ ನೇತೃತ್ವದ ಸರಕಾರ ಸಾಧ್ಯವಿದ್ದ ಎಲ್ಲಾ ವಲಯಗಳಲ್ಲೂ ಆರ್.ಎಸ್.ಎಸ್.-ಹಿಂದುತ್ವ ಅಜೆಂಡಾವನ್ನು ಕಳ್ಳತನದಿಂದ ತರಲು ವ್ಯವಸ್ಥಿತ ಪ್ರಯತ್ನ ನಡೆಸಿತು. ತನ್ನ ಕೋಮುವಾದಿ ರಾಜಕೀಯವನ್ನು ನಾಚಿಕೆಯಿಲ್ಲದೆ ಸಮರ್ಥಿಸಿಕೊಂಡಿತು. ಮುಸ್ಲಿಮರು ಮಾತ್ರವಲ್ಲ, ಇತರ ಅಲ್ಪಸಂಖ್ಯಾತರ ಮೇಲೂ ಗುರಿಯಿಡಲಾರಂಭಿಸಿತು.

**ಭ್ರಮನಿರಸನ**

ಇನ್ನೂ ಗಮನಾರ್ಹವಾದ ಅಂಶವೆಂದರೆ 'ಸ್ಥಿರ' ಸರಕಾರ ಒದಗಿಸುವ ಅದರ ಭರವಸೆ ಚೂರುಚೂರಾಯಿತು. ಈ ಸರಕಾರ ಭಾರತದ ರಾಜಕಾರಣದಲ್ಲಿ ಅತ್ಯಂತ ಅಸ್ಥಿರಕಾರೀ ಅಂಶ ಎಂದು ಸಾಬೀತಾಯಿತು.

ಹೊಣೆಯನ್ನು ತನ್ನ ರಾಜ್ಯ ಮುಖಂಡತ್ವದ ಮೇಲೆ ವರ್ಗಾಯಿಸುವ ಪ್ರಯತ್ನದಲ್ಲಿ ಬಿಜೆಪಿಯವರು ತನ್ನ ರಾಜ್ಯ ಸರಕಾರಗಳಿಂದ ಜನ ಭ್ರಮನಿರಸನ ಹೊಂದಿದ್ದಾರೆ ಎಂದು ಒಪ್ಪಿಕೊಂಡಂತಾಗಿದೆ. ರಾಜಸ್ತಾನದಲ್ಲಿ ಬಿಜೆಪಿ ಎಂಟು ವರ್ಷದ ಆಳ್ವಿಕೆ ನಡೆಸಿತು, ದಿಲ್ಲಿಯಲ್ಲಿ 5 ವರ್ಷ ಆಳ್ವಿಕೆ ನಡೆಸಿತು. ಆದ್ದರಿಂದ ಈ ರಾಜ್ಯಗಳ ಜನತೆಗೆ ಬಿಜೆಪಿ ಆಳ್ವಿಕೆಯ ಬಗ್ಗೆ ದೇಶದ ಇತರ ಜನಗಳಿಗಿಂತ ಹೆಚ್ಚಿನ ಅನುಭವವಿದೆ. ಆ ದೀರ್ಘ ಅನುಭವ ಹಾಗೂ ಕೇಂದ್ರದಲ್ಲಿನ ಸರಕಾರದ ಎಂಟು ತಿಂಗಳ ಅನುಭವವನ್ನು ಜೋಡಿಸಿ ತಮ್ಮ ತೀರ್ಪು ನೀಡಿದ್ದಾರೆ. ಬಿಜೆಪಿ ಇದನ್ನು ಅರ್ಥಮಾಡಿಕೊಳ್ಳುವುದು ಒಳ್ಳೆಯದು. ಜನತೆಯ ಈ ತೀರ್ಪಿನ ಮಹತ್ವವನ್ನು ಕಡೆಗಣಿಸಲು ಬಿಜೆಪಿ ಎಷ್ಟೇ ಪ್ರಯತ್ನ ನಡೆಸಿದರೂ ಇದರ ಪರಿಣಾಮಗಳು ಮುಂಬರುವ ದಿನಗಳಲ್ಲಿ ಹೆಚ್ಚೆಚ್ಚು ಅನುಭವಕ್ಕೆ ಬರಲಾರಂಭಿಸುತ್ತವೆ.

**ಕಾಂಗ್ರೆಸ್ಸಿಗೆ ಮತ ನಂಬಿಕೆಯಿಂದಾಗಿ ಅಲ್ಲ**

ಕಾಂಗ್ರೆಸ್ ಪಾಳೆಯದಲ್ಲಿ ಆನಂದದ ಅಲೆ ಹರಡಿದೆ. ಅದು ಸ್ವಾಭಾವಿಕ. ಏಕೆಂದರೆ ಆ ಪಕ್ಷಕ್ಕೆ ಬಹಳ ಅಗತ್ಯವಾಗಿದ್ದ ಹುರುಪು ಈಗ ದೊರೆತಿದೆ. ಆದರೆ ಇದು ಕಾಂಗ್ರೆಸ್ಸಿನಲ್ಲಿ ನಂಬಿಕೆಗಿಂತ ಹೆಚ್ಚಾಗಿ ಬಿಜೆಪಿಯನ್ನು ತಿರಸ್ಕರಿಸಿದ ತೀರ್ಪು ಎಂಬುದು ಸ್ಪಷ್ಟವಾಗಿರಬೇಕು. ಕೆಲವೇ ಸಮಯದ ಹಿಂದಷ್ಟೇ ಕಾಂಗ್ರೆಸ್ಸನ್ನು ಅದರ ಆರ್ಥಿಕ ನೀತಿಗಳಿಂದಾಗಿ, ಕೋಮುವಾದಿಗಳೊಂದಿಗೆ ರಾಜಿಗಾಗಿ ಜನ ತಿರಸ್ಕರಿಸಿದ್ದರು. ಈಗಲೂ ಆ ಪಕ್ಷ ಅವೇ ಆರ್ಥಿಕ ನೀತಿಗಳ ಬಗ್ಗೆ ಮಾತನಾಡುತ್ತಿದೆ. ಒಂದು ಸರಿಯಾದ ಪರ್ಯಾಯವಿಲ್ಲದ್ದರಿಂದಾಗಿ ಜನ ಮಧ್ಯಪ್ರದೇಶ, ರಾಜಸ್ತಾನ, ದಿಲ್ಲಿಗಳಲ್ಲಿ ಕಾಂಗ್ರೆಸ್ಸಿಗೆ ಮತ ನೀಡಿದರು. ಕಾಂಗ್ರೆಸ್ಸಿನಲ್ಲಿ ನಂಬಿಕೆ ಮತ್ತೆ ಬಂದುದರಿಂದ ಜನ ಮತ ನೀಡಿದ್ದರೆ ಮಿಜೋರಾಂನಲ್ಲಿ ಕಾಂಗ್ರೆಸ್ ಸೋಲುಣ್ಣಬೇಕಾಗಿ ಬರುತ್ತಿರಲಿಲ್ಲ.

ಜನಗಳ ತೀರ್ಪನ್ನು ನಿರ್ಲಕ್ಷಿಸಿ ಬಿಜೆಪಿ ಸರಕಾರ ಪ್ರಸಕ್ತ ಸಂಸತ್ ಅಧಿವೇಶನದಲ್ಲಿ ವಿಮಾ ಹತೋಟಿ ಮಸೂದೆ ತರುವ ನಿರ್ಧಾರ ಮಾಡಿದೆ. ಚುನಾವಣೆಯ ಫಲಿತಾಂಶಗಳು ಆರ್ಥಿಕ ನೀತಿಗಳ ಮೇಲೆ ಪ್ರಭಾವ ಬೀರುವುದಿಲ್ಲ ಎಂದು ಹಣಕಾಸು ಮಂತ್ರಿಗಳೂ ಹೇಳಿದ್ದಾರೆ. ವಿಮಾ ಹತೋಟಿ ಮಸೂದೆಯ ಬಗ್ಗೆ ಬಿಜೆಪಿಯೊಳಗೆ ಭಿನ್ನಾಭಿಪ್ರಾಯಗಳು ಮೂಡಿ ಬಂದಿವೆ. ಒಬ್ಬ ಸಚಿವೆ ಸಾರ್ವಜನಿಕವಾಗಿಯೇ ತನ್ನ ವಿರೋಧ ವ್ಯಕ್ತಪಡಿಸಿದ್ದಾರೆ. ಆರ್.ಎಸ್.ಎಸ್. ನ ಕಾರ್ಮಿಕ ವಿಭಾಗವಾದ ಬಿ.ಎಂ.ಎಸ್. ಕೂಡಾ ಬಿಜೆಪಿ ನೇತೃತ್ವದ ಸರಕಾರ ಹಲವು ಆರ್ಥಿಕ ಕ್ರಮಗಳನ್ನು ವಿರೋಧಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ವಲಯದ ನೌಕರರು ಡಿಸೆಂಬರ್ 10 ಹಾಗೂ 11 ರಂದು ನಡೆಸಲಿರುವ ಮುಷ್ಕರ ಹಾಗೂ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯಂತೆ ಡಿಸೆಂಬರ್ 11 ರಂದು ನಡೆಯುವ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ಮಹತ್ವವನ್ನು ಕಾಣಬೇಕು. ದೇಶಾದ್ಯಂತ ದುಡಿಯುವ ವರ್ಗ ಒಕ್ಕೊರಲಿನಿಂದ ಈ ಧೋರಣೆಗಳನ್ನು ಕೈಬಿಡುವಂತೆ ಸರಕಾರದ ಮೇಲೆ ಒತ್ತಡ ತರಬೇಕು. ಈ ಕಾರ್ಯಾಚರಣೆಯೊಂದಿಗೆ ಹೆಚ್ಚೆಚ್ಚು ಜನಗಳನ್ನು ಉದಾರೀಕರಣದ ಆರ್ಥಿಕ ನೀತಿಗಳ ವಿರುದ್ಧ, ರಾಷ್ಟ್ರೀಯ ಐಕ್ಯತೆಗೆ ಮತ್ತು ಸಮಗ್ರತೆಗೆ ಬೆದರಿಕೆಯ ವಿರುದ್ಧ ಅಣಿನೆರೆಸಬೇಕು. ಈ ಹೋರಾಟದಲ್ಲಿನ ಯಶಸ್ಸು ಒಂದು ನಿಜವಾದ ಪರ್ಯಾಯದ ರಚನೆಗೆ ಹಾದಿ ಮಾಡಿಕೊಡುತ್ತದೆ.

## ಫಲಿತಾಂಶಗಳು

| ದಿಲ್ಲಿ - ಒಟ್ಟು 70 | |
|---|---|
| ಬಿಜೆಪಿ | 15 |
| ಕಾಂಗ್ರೆಸ್ | 51 |
| ಜನತಾದಳ | 1 |
| ಇತರರು | 2 |


| ರಾಜಸ್ತಾನ - ಒಟ್ಟು 200 | |
|---|---|
| ಬಿಜೆಪಿ | 33 |
| ಕಾಂಗ್ರೆಸ್ | 150 |
| ಜನತಾದಳ | 3 |
| ಬಿಎಸ್‌ಪಿ | 2 |
| ಸಿಪಿಐ(ಎಂ) | 1 |
| ಇತರರು | 8 |

| ಮಧ್ಯಪ್ರದೇಶ - ಒಟ್ಟು 320 | |
|---|---|
| ಕಾಂಗ್ರೆಸ್ | 172 |
| ಬಿಜೆಪಿ | 119 |
| ಬಿಎಸ್‌ಪಿ | 11 |
| ಸಮಾಜವಾದಿ ಪಕ್ಷ | 4 |
| ಸಿಪಿಐ(ಎಂ) | 1 |
| ಇತರರ | 13 |

| ಮಿಜೋರಾಂ - ಒಟ್ಟು 40 | |
|---|---|
| ಕಾಂಗ್ರೆಸ್ | 6 |
| ಎಂ.ಎನ್.ಎಫ. | 21 |
| ಎಂ.ಪಿ.ಸಿ | 12 |
| ಇತರರು | 1 |

## ನವೆಂಬರ್ ತಿಂಗಳಲ್ಲಿ ಚುನಾವಣೆ ನಡೆದ ರಾಜ್ಯಗಳಲ್ಲಿ ಬಿಜೆಪಿಯ ಬಗೆ ಜನಗಳ ಭ್ರಮನಿರಸನದ ಪ್ರಮಾಣ ಎಷ್ಟು?

1993 ರ ವಿಧಾನಸಭಾ ಚುನಾವಣೆಗಳಲ್ಲಿ, ಫೆಬ್ರವರಿ 1998 ರ ಲೋಕಸಭಾ ಚುನಾವಣೆಗಳಲ್ಲಿ ಮುಂದಿದ್ದ ವಿಧಾನಸಭಾ ಸ್ಥಾನಗಳು ಹಾಗೂ ನವೆಂಬರ್ 1998 ರಲ್ಲಿ ಗೆದ್ದ ಸ್ಥಾನಗಳು ಹಾಗೂ ಗಳಿಸಿದ ಶೇಕಡವಾರು ಮತ(ಕೆಳಗಿನ ಚಿತ್ರ)ದ ವಿವರ






ಸರಸ್ವತಿ ವಂದನಾ ಸಾಕು
ಓಟರ್ ವಂದನಾ ಮಾಡೋಣ
ಕೃಪೆ: 'ದಿ ಹಿಂದು'ನಲ್ಲಿ ಕೇಶವ್

## ಬಿಜೆಪಿ ಪರಾಭವಕ್ಕೆ ಕಾರಣ

ಇಲ್ಲಿ ವಿವರಿಸಲು ಹೊರಟಿರುವುದು ಬಿಜೆಪಿಯ ಹೀನಾಯ ಸೋಲಿಗೆ ಕಾರಣವಾದ ಅಂಶಗಳು ಯಾವುದೆಂಬುದನ್ನು ಎಂದು ನೀವು ಊಹಿಸುವುದು ತಪ್ಪಿಲ್ಲ; ಆದರೆ ಅದು ಪ್ರತಿಪಕ್ಷಗಳ ವಿಶ್ಲೇಷಣೆಯಲ್ಲ; ಸ್ವತಃ ಬಿಜೆಪಿಯ ಮಿತ್ರಪಕ್ಷಗಳ ಅಭಿಪ್ರಾಯ ಎಂಬುದಿಲ್ಲಿ ಮುಖ್ಯ.

**ಹಿಂದುತ್ವ ಅಜೆಂಡಾದಿಂದ ಹೊಡೆತ:**

ಕೇಂದ್ರದ ವಾಜಪೇಯಿ ನೇತೃತ್ವದ ಸರಕಾರ ಬಹಿರಂಗವಾಗಿಯೇ ಅನುಸರಿಸಿದ ಹಿಂದುತ್ವ ಅಜೆಂಡಾದಿಂದ ಅಲ್ಪಸಂಖ್ಯಾತರು ದೂರವಾದರು. ಹೀಗಾಗಿ ಬಿಜೆಪಿ ಅಸೆಂಬ್ಲಿ ಚುನಾವಣೆಗಳಲ್ಲಿ ಸೋಲುಂಡಿತು...

ಹೀಗೆಂದು ನುಡಿದವರು ಶಿರೋಮಣಿ ಅಕಾಲಿದಳದ ನಾಯಕರು.

ನಮ್ಮ ಬೆಂಬಲದಿಂದ ಏನು ಬೇಕಾದರೂ ಮಾಡಬಹುದು ಎದು ಬಿಜೆಪಿ ಭಾವಿಸಿದೆ. ಪ್ರಮುಖ ಆರ್ಥಿಕ ಮತ್ತು ರಾಜಕೀಯ ನಿರ್ಧಾರ ತೆಗೆದುಕೊಳ್ಳುವಾಗ ಬಿಜೆಪಿ ತನ್ನ ಮಿತ್ರರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಅಧ್ಯಕ್ಷ ಹಾಗೂ ಅಕಾಲಿದಳದ ಹಿರಿಯ ನಾಯಕ ಗುರುಚರಣ್ ಸಿಂಗ್ ತೋಹ್ರಾ ಹೇಳಿದ್ದಾರೆ.

ಒಳ್ಳೆಯ ಆಡಳಿತ ನೀಡಲು ಬಿಜೆಪಿ ವಿಫಲವಾಗಿದೆ. ಅದಕ್ಕೆ ತಕ್ಕಂತೆ ಫಲಿತಾಂಶ ಬಂದಿದೆ ಎಂದೂ ಅವರು ವಿಶ್ಲೇಷಿಸಿದ್ದಾರೆ.

ಶಾಲೆಗಳಲ್ಲಿ ಸರಸ್ವತಿ ವಂದನೆ ಮತ್ತು ವಂದೇಮಾತರಂ ಕಡ್ಡಾಯಗೊಳಿಸಲು ಬಿಜೆಪಿ ಮುಂದಾಗಿದ್ದು ಅದಕ್ಕೆ ಮುಳುವಾಯಿತು ಎಂದಿದ್ದಾರೆ.

**ಬೆಲೆಯೇರಿಕೆಗೆ ತೆತ್ತ ಬೆಲೆ**

ಅಗತ್ಯ ವಸ್ತುಗಳ ಬೆಲೆಯೇರಿಕೆ ನಿಯಂತ್ರಿಸುವಲ್ಲಿ ತೋರಿದ ನಿಷ್ಕ್ರಿಯತೆಗೆ ಬಿಜೆಪಿ ಚುನಾವಣೆಗಳಲ್ಲಿ ಬೆಲೆ ತೆತ್ತಿದೆ ಎಂದು ತೆಲುಗುದೇಶಂ ಅಧ್ಯಕ್ಷ ಹಾಗೂ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ಜನತೆ ಈಗಾಗಲೇ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರಕಾರದ ವಿಶ್ವಾಸಾರ್ಹತೆಗೆ ಭಂಗ ಬಂದಿದೆ ಎಂದವರು ನುಡಿದಿದ್ದಾರೆ.

**ಪಾಠ ಕಲಿಯಬೇಕು**

ಬಿಜೆಪಿ ಅನುಭವಿಸಿದ ಹೀನಾಯ ಸೋಲಿನಿಂದ ಕಲಿಯಬೇಕಾದ ಪಾಠ ಅನೇಕ ಇವೆ ಎಂದು ಹೇಳಿದ್ದಾರೆ ಸಮತಾ ಪಕ್ಷ ಅಧ್ಯಕ್ಷ, ಪ್ರಧಾನಿಗಳ ನಂಬಿಕೆಯ 'ರಾಯಭಾರಿ' ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್. ಬಿಜೆಪಿ ಸೋಲಿಗೆ ಈರುಳ್ಳಿ ಮತ್ತು ಆಲೂಗಡ್ಡೆ ಹೊಣೆ ಎಂದವರು ಆಪಾದಿಸಿದ್ದಾರೆ!

**ಹಾಸ್ಯಾಸ್ಪದ ಅಪಪ್ರಲಾಪ**

ಇವೆಲ್ಲವೂ ರಾಜಕೀಯ ಅಂಶಗಳನ್ನೊಳಗೊಂಡ ವಿಶ್ಲೇಷಣೆಯಾದರೆ ಇನ್ನೊಂದು ರೀತಿಯ ಕಾರಣವನ್ನು ಮುಂದೊಡ್ಡಲಾಗಿದೆ. ಇದು ಯಾವುದೇ ಮಿತ್ರಪಕ್ಷಗಳ ಅಭಿಪ್ರಾಯವಲ್ಲ. ಬಿಜೆಪಿ ನಾಯಕಿ ಸುಷ್ಮಾಸ್ವರಾಜ್‌ರ ನುಡಿ

"ಮನೆಯ ದೀಪದಿಂದಲೇ ಮನೆಗೆ ಬೆಂಕಿ ಬಿತ್ತು" ಎಂದು ಸುಷ್ಮಾ ಪ್ರಲಾಪಿಸಿದ್ದಾರೆ. ಜನತೆ ಕೊಟ್ಟ ತೀರ್ಪನ್ನು ಸರಿಯಾಗಿ ವಿಶ್ಲೇಷಿಸದೆ ಮುಖ ಉಳಿಸಿಕೊಳ್ಳುವ ತಂತ್ರಗಾರಿಕೆ ಇದಾಗಿದೆ.

ವಾಜಪೇಯಿ ಸರಕಾರದ ಕಳೆದ ಎಂಟು ತಿಂಗಳ ಸಾಧನೆ ತೃಪ್ತಿಕರವಾಗಿಲ್ಲ ಎಂದು ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

-ವಿಶ್ವ

# 'ದಶಕಗಳ ಕನಸು ನನಸಾಗುವ ಕೆಲಸ ಆರಂಭ'

## 'ಇ.ಎಂ.ಎಸ್ ಭವನ'ಕ್ಕೆ ಇ.ಕೆ.ನಾಯನಾರ್‌ರಿಂದ ಅಡಿಗಲ್ಲು

ನವೆಂಬರ್ 29, 1998. ಬೆಂಗಳೂರಿನ, ಇಡೀ ಕರ್ನಾಟಕದ ಪ್ರಗತಿಪರ, ಎಡ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರಿಗೆ ಅದೊಂದು ಅಭೂತಪೂರ್ವ ಸಂತಸದ ದಿನ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರೂ, ಕೇರಳದ ಮುಖ್ಯ ಮಂತ್ರಿಗಳೂ ಆಗಿರುವ ಇ.ಕೆ.ನಾಯನಾರ್ ಬೆಂಗಳೂರಿನಲ್ಲಿ ಎ.ಕೆ.ಗೋಪಾಲನ್ ಸಾಮಾಜಿಕ ಶೈಕ್ಷಣಿಕ ಸಂಶೋಧನಾ ದತ್ತಿಯು ಯೋಜಿತ ಇ.ಎಂ.ಎಸ್. ಭವನಕ್ಕೆ ಅಡಿಗಲ್ಲು ಹಾಕಿದರು. ನಂತರ ನಡೆದ ಸಮಾರಂಭದ ಪ್ರಸ್ತಾವನೆಯಲ್ಲಿ ದತ್ತಿಯು ಸದಸ್ಯರೊಬ್ಬರಾದ ಜಿ.ಎನ್.ನಾಗರಾಜ್ ರವರು ಹೇಳಿದಂತೆ "ಹಲವು ದಶಕಗಳ ಕನಸನ್ನು ನನಸು ಮಾಡುವ ಕೆಲಸ ಆರಂಭ" ವಾದ ದಿನ ಅದಾಗಿತ್ತು.

ಕೇರಳ ಮಾನವ ಅಭಿವೃದ್ಧಿಯ ಸೂಚ್ಯಂಕದಲ್ಲಿ ಜಗತ್ತಿನ ಮುಂದುವರಿದ ದೇಶಗಳಿಗೂ ಸರಿಸಾಟಿಯಾಗಿ ನಿಲ್ಲುವಂತೆ ಮಾಡುವಲ್ಲಿ ಈ ಇಬ್ಬರು ಮಹಾನ್ ವ್ಯಕ್ತಿಗಳ - ಇ.ಎಂ.ಎಸ್. ಮತ್ತು ಎ.ಕೆ.ಜಿಯವರ- ಕೊಡುಗೆ ಅಪಾರ. ಕೇರಳಕ್ಕಷ್ಟೇ ಅಲ್ಲ, ಇಡೀ ದೇಶಕ್ಕೆ ಆದರ್ಶಪ್ರಾಯವಾದದ್ದು. ಕರ್ನಾಟಕದ ಅಭಿವೃದ್ಧಿಯ ದಾರಿಯ ಹುಡುಕಾಟದ ಚಟುವಟಿಕೆಗಳ ಆಗರವಾಗುವುದು ಈ ಇಬ್ಬರು ಮಹನೀಯರ ಹೆಸರು ಹೊತ್ತ ಈ ಸಂಶೋಧನಾ ಕೇಂದ್ರದ ಕನಸು ಎಂದು ಪ್ರಸ್ತಾವನಾ ಭಾಷಣ ಮಾಡುತ್ತಾ ಜಿ.ಎನ್.ನಾಗರಾಜ್‌ರವರು ಹೇಳಿದರೆ, ಸಿಪಿಐ(ಎಂ) ಶಾಸಕ ಹಾಗೂ ಈ ಟ್ರಸ್ಟಿನ ಇನ್ನೊಬ್ಬ ಸದಸ್ಯ ಹಾಗೂ ಈ ಸಂಶೋಧನಾ ಕೇಂದ್ರಕ್ಕೆ ಒಂದು ನಿವೇಶನ ಪಡೆಯುವಲ್ಲಿ ಅಪಾರ ಶ್ರಮವಹಿಸಿದ ಜಿ.ವಿ.ಶ್ರೀರಾಮರೆಡ್ಡಿಯವರು ಈ ಸಡಗರದ ಸಮಾರಂಭದಲ್ಲಿ ನೆರೆದಿದ್ದ ನೂರಾರು ಅಭಿಮಾನಿಗಳನ್ನು ಸ್ವಾಗತಿಸುತ್ತಾ ಇದು ಕೇವಲ ಇನ್ನೊಂದು ಕಟ್ಟಡ ಅಲ್ಲ, ಕರ್ನಾಟಕದಲ್ಲಿನ ಎಡ ಚಳುವಳಿಯ ಭಾಗ, ಅದರ ಮಾರ್ಗದರ್ಶಕ ಕೇಂದ್ರವಾಗಲಿದೆ ಎಂದರು.

ಅಡಿಗಲ್ಲು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದತ್ತಿಯ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಕರ್ನಾಟಕದ ಎಡ ಆಂದೋಲನದ ಹಿರಿಯ ನೇತಾರ ಎಸ್.ಸೂರ್ಯನಾರಾಯಣ ರಾವ್ ರವರು ಕರ್ನಾಟಕದ ಪ್ರಗತಿಪರ ಆಂದೋಲನದ ಚಟುವಟಿಕೆಗಳಿಗೆ ಅನುಕೂಲವಾಗಲೆಂದು ಈ ಸಂಶೋಧನಾ ಕೇಂದ್ರ ಸಿದ್ಧಗೊಳ್ಳುತ್ತದೆ ಎಂದರು. ಅಡಿಗಲ್ಲು ಹಾಕುವುದಷ್ಟೇ ಮುಖ್ಯವಲ್ಲ, ಒಂದೂವರೆ ವರ್ಷದೊಳಗೆ ಈ ಕೇಂದ್ರ ನಿರ್ಮಾಣಗೊಳ್ಳುವಂತಾಗಬೇಕು, ಇದಕ್ಕೆ ರಾಜ್ಯದ ಎಲ್ಲಾ ಪ್ರಗತಿಪರರ ನೆರವು ಅಗತ್ಯ ಎಂದರು.

ಇ.ಎಂ.ಎಸ್. ನೆನಪಿನಲ್ಲಿ ನಿರ್ಮಿಸಲಿರುವ ಈ ಭವನದ ಅಡಿಗಲ್ಲನ್ನು ಹಾಕುವಾಗ ಮಿಶ್ರಭಾವನೆಗಳಿಂದ ನಿಮ್ಮ ಮುಂದೆ ನಿಂತಿದ್ದೇನೆ ಎಂದರು ಎ.ಕೆ.ಜಿ.-ಇಎಂಎಸ್ ರವರ ಸಹಯೋಗಿ ಇ.ಕೆ.ನಾಯನಾರ್. ಒಂದು ಕಡೆ ಕರ್ನಾಟಕದಲ್ಲಿ ಇಎಂಎಸ್ ಸ್ಮಾರಕವೊಂದು ಬರುತ್ತಿದೆಯೆಂಬ ಸಂತಸ - ಇನ್ನೊಂದೆಡೆ ಇ.ಎಂ.ಎಸ್. ರವರು ಈಗ ನಮ್ಮೊಂದಿಗಿಲ್ಲ ಎಂಬ ದುಃಖ, ಅವರು ನಮ್ಮನ್ನಗಲಿ ಆರು ತಿಂಗಳು ದಾಟಿ ಹೋದರೂ ನಾವು ಮೀರಿನಿಲ್ಲಲಾರದ ದುಃಖ. ಭಾರತದ ಸಾಮಾಜಿಕ ಬದಲಾವಣೆಯ ಆಂದೋಲನಕ್ಕೆ ಇ.ಎಂಎಸ್. ರವರ ಅಭೂತಪೂರ್ವ ಕೊಡುಗೆಗಳನ್ನು ನೆನಪಿಸಿಕೊಳ್ಳುವಾಗ ಮತ್ತೆ-ಮತ್ತೆ ಅವರ ದನಿ ಗದ್ಗದಗೊಳ್ಳುತ್ತಿತ್ತು.


ಕೇರಳದ ಸಾಮಾಜಿಕ ರಚನೆ, ಸಾಮಾಜಿಕ ಜೀವನ ಅಪಾರ ಬದಲಾವಣೆ ಕಂಡಿದೆ ಎಂದು ಎಲ್ಲರೂ ಒಪ್ಪುವಂಥದು. ಈ ಬದಲಾವಣೆ ತಂದದ್ದು ಎ.ಕೆ.ಜಿ., ಇ.ಎಂ.ಎಸ್., ಕೃಷ್ಣಪಿಳ್ಳೆ ಮುಂತಾದವರು ನೇತೃತ್ವ ನೀಡಿದ ರಾಜಕೀಯ ಚಳುವಳಿ ಹಾಗೂ ಇ.ಎಂ.ಎಸ್. ನೇತೃತ್ವದ ಸರಕಾರ ಕೈಗೊಂಡ ಕ್ರಾಂತಿಕಾರಿ ಕ್ರಮಗಳು ಎಂದ ನಾಯನಾರ್‌ರವರು ಇ.ಎಂ.ಎಸ್. ಯಾವುದೇ ವಿಷಯದ ಬಗ್ಗೆ ಒಂದು ನಿಲುವು ತಗೊಂಡರೆಂದರೆ ಇಡೀ ಕೇರಳ ಆ ನಿಲುವಿನ ಪರ ಅಥವಾ ವಿರುದ್ಧ ಇಬ್ಭಾಗಗೊಳ್ಳುತ್ತಿತ್ತು, ಅದು ವರ್ಗ ವಿಭಜನೆಯಾಗಿರುತ್ತಿತ್ತು ಎಂಬ ಒಬ್ಬ ಪ್ರಸಿದ್ಧ ವಿಮರ್ಶಕರ ಮಾತನ್ನು ನೆನಪಿಸುತ್ತಾ ಅವರ ವೈಜ್ಞಾನಿಕ ವಿಶ್ಲೇಷಣೆಗಳು ಎಡ ಮತ್ತು ಪ್ರಗತಿಪರ ಆಂದೋಲನಗಳನ್ನು ಮುಂದಕ್ಕೊಯ್ಯುತ್ತ ಸಮಾಜವನ್ನು ಎಲ್ಲಾ ಶೋಷಕ ಮತ್ತು ದಮನಕಾರೀ ಶಕ್ತಿಗಳಿಂದ ಮುಕ್ತಗೊಳಿಸುವ ಯುಗದತ್ತ ಮುನ್ನಡೆಸಿವೆ ಎಂದರು.

20ನೇ ಶತಮಾನದ ಆರಂಭದಲ್ಲಿನ ಸಾಮಾಜಿಕ, ರಾಜಕೀಯ ಆಂದೋಲನದಲ್ಲಿ ರೂಪುಗೊಂಡ ಇಎಂಎಸ್ ಜನರ ಸೇವೆಯಲ್ಲಿ ತೊಡಗಲು ಕಾಲೇಜು ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟರು, ಆದರೆ ತನ್ನ ಇಡೀ ಜೀವನವನ್ನೇ ಶಿಕ್ಷಣದ ಪ್ರಕ್ರಿಯೆಯನ್ನಾಗಿಸಿಕೊಂಡರು, ಲಕ್ಷಾಂತರ ಭಾರತೀಯ ಕಮ್ಯುನಿಸ್ಟರಿಗೆ ಶಿಕ್ಷಕರಾದರು, ಮಾರ್ಗದರ್ಶಿ ಆದರು ಎಂದರು ಕಾಂ. ನಾಯನಾರ್. ಇಎಂಎಸ್‌ರವರಿಗೆ ಸ್ಮಾರಕ ಕಟ್ಟುವಾಗ ನಾವು ಅವರು ಕರಾಳ ಶಕ್ತಿಗಳ ವಿರುದ್ಧ ಹೋರಾಟ ನಡೆಸುವಲ್ಲಿ ತೋರಿದ ಅದಮ್ಯ ಚೈತನ್ಯವನ್ನು ಮುಂದುವರೆಸುವ ಪ್ರತಿಜ್ಞೆ ಕೈಗೊಳ್ಳಬೇಕು. ಒಂದು ಸಾಮೂಹಿಕ ಆಂದೋಲನ ಮಾತ್ರವೇ ಸರಕಾರ ತನ್ನ ವಿನಾಶಕಾರೀ ನೀತಿಗಳನ್ನು ಬದಲಿಸುವಂತೆ ಮಾಡಬಲ್ಲದು. ಸಾಮೂಹಿಕ ಅಭಿಪ್ರಾಯವನ್ನು ಅಣಿನೆರೆಸಿ, ಒಂದು ಸಾಮೂಹಿಕ ಕಾರ್ಯಾಚರಣೆಯನ್ನು ನಡೆಸುವ ಮೂಲಕವೇ ದೇಶವನ್ನು ಸರಿದಾರಿಯಲ್ಲಿ ಮುಂದೊಯ್ಯಲು ಸಾಧ್ಯ, ಇಎಂಎಸ್‌ರ ಜೀವನ ಇದರಲ್ಲಿ ನಮಗೆ ಸದಾ ಸ್ಫೂರ್ತಿಯ ಚಿಲುಮೆ ಎಂದರು ಇ.ಕೆ.ನಾಯನಾರ್.

ಪ್ರಗತಿಪರ ಚಳುವಳಿಗಳ ಅಧ್ಯಯನ, ಕಾರ್ಯಕರ್ತರಿಗೆ ಶಿಕ್ಷಣ, ತರಬೇತಿ ಹಾಗೂ ಸಂಶೋಧನೆಗೆ ಮುಡಿಪಾಗಿರುವ ಒಂದು ಸುಸಜ್ಜಿತ ಕೇಂದ್ರವನ್ನು ನಿರ್ಮಿಸಲು 60 ಲಕ್ಷ ರೂ. ಗಳ ಯೋಜನೆ ಹಾಕಿಕೊಂಡಿದ್ದು ಪ್ರಗತಿಪರ ಜನ ಸಮೂಹಗಳ ಸಹಕಾರ, ನೆರವುಗಳಿಂದ ಖಂಡಿತಾ ಈ ಹಣವನ್ನು ಸಂಗ್ರಹಿಸಿ ಈ ಕನಸನ್ನು ಈಡೇರಿಸಿಕೊಳ್ಳುವ ಬಗ್ಗೆ ಸೂರಿಯವರು ವ್ಯಕ್ತಪಡಿಸಿದ ಅಪಾರ ವಿಶ್ವಾಸವನ್ನು ಸಮರ್ಥಿಸುವಂತೆ ಆ ಸಮಾರಂಭದಲ್ಲೇ 86 ಸಾವಿರ ರೂ.ಗಳಿಗೂ ಹೆಚ್ಚು ಹಣ ಸಂಗ್ರಹವಾಯಿತು. ಮುಂದಿನವಾರದಿಂದ ಈ ಚಾರಿತ್ರಿಕ ಕೆಲಸದಲ್ಲಿ ಧನಸಹಾಯ ನೀಡಿದವರ ಹೆಸರುಗಳನ್ನು ಪ್ರಕಟಿಸಲಾಗುವುದು)

ಹಿರಿಯ ಸಿಪಿಐ ಮುಖಂಡ ಎಂ.ಎಸ್.ಕೃಷ್ಣನ್‌ರವರೂ ಸೇರಿದಂತೆ ಸಮಾರಂಭದಲ್ಲಿ ಪಾಲ್ಗೊಂಡವರಿಗೆ ವಂದನೆ ಸಲ್ಲಿಸುತ್ತಾ ದತ್ತಿಯ ಇನ್ನೊಬ್ಬ ಸದಸ್ಯರಾದ ಕಾರ್ಮಿಕ ಮುಖಂಡ ವಿ.ಜೆ.ಕೆ.ನಾಯರ್‌ರವರು ಈ ಕೇಂದ್ರದ ಕನಸು 1977 ರಲ್ಲಿ ಆರಂಭವಾದ ಬಗೆಯನ್ನು ನೆನಪಿಸಿಕೊಂಡರು. ಮಾರ್ಚ್ 22, 1977 ನಮಗೆ ಮಿಶ್ರಭಾವನೆಗಳ ದಿನವಾಗಿತ್ತು. ದೇಶದ ಮೊದಲ ಕಾಂಗ್ರೆಸ್ಸೇತರ ಸರಕಾರ(ಜನತಾ ಪಕ್ಷದ ಸರಕಾರ) ದಿಲ್ಲಿಯಲ್ಲಿ ಆಡಳಿತ ವಹಿಸಿಕೊಂಡಿತು, ಆದರೆ ಎ.ಕೆ.ಜಿ. ನಿಧನದ ಸುದ್ದಿಯೂ ಬಂತು. ಈ ವರ್ಷ ಮಾರ್ಚ್ 19 ನಮಗೆಲ್ಲಾ ಎರಡು ರೀತಿಗಳಲ್ಲಿ ದುಃಖದ ದಿನ. ಅದು ಇ.ಎಂ.ಎಸ್. ನಿಧನವಾದ ದಿನ, ಕೇಂದ್ರದಲ್ಲಿ ದೇಶವಿಭಜಕ ಕೋಮುವಾದಿಗಳ ನೇತೃತ್ವದ ಸರಕಾರ ಅಧಿಕಾರವನ್ನು ಅದೇ ದಿನ ವಹಿಸಿಕೊಂಡಿತು. ಈಗ ಈ ಸಂಶೋಧನಾ - ಅಧ್ಯಯನ ಕೇಂದ್ರದ ಅಡಿಗಲ್ಲು ಹಾಕುವ ಸಂತಸದ ದಿನ ಉತ್ತರದ ಮೂರು ರಾಜ್ಯಗಳ ಜನತೆ ಕೋಮುವಾದಿಗಳಿಗೆ ತಕ್ಕ ಉತ್ತರ ನೀಡಿ ಎರಡು ರಾಜ್ಯಗಳಲ್ಲಿ ಅವರನ್ನು ಅಧಿಕಾರದಿಂದಿಳಿಸಿ ಇಡೀ ದೇಶದ ಪ್ರಗತಿಪರರು ಸಂತಸ ಪಡುವ ದಿನ. ಇವೆಲ್ಲಾ ಕಾಕತಾಳೀಯವಾಗಿದ್ದರೂ ಎಡ ಆಂದೋಲನದ ಇತಿಹಾಸದಲ್ಲಿ ನೆನಪಿನಲ್ಲಿ ರುವ ದಿನಗಳು ಎಂದ ವಿ.ಜೆ.ಕೆ. ನಾಯರ್ ಈ ಕೇಂದ್ರ ಬೇಗನೆ ಕೇರಳದ ಮಾದರಿಯಲ್ಲಿ ಜನತೆಯ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಕಾರ್ಮಿಕ ವರ್ಗ ಕರ್ನಾಟಕದಲ್ಲೂ ಆಡಳಿತವನ್ನು ಕೈಗೆ ತೆಗೆದುಕೊಳ್ಳುವಂತಾಗಲಿ ಎಂದರು.

ಸಮಾರಂಭದ ಒಟ್ಟು ಭಾವನೆಯನ್ನು ಬಿಂಬಿಸಿದ ಪ್ರಖ್ಯಾತ 'ಗೆಲುವು ನಮ್ಮದು' ಹಾಡಿನೊಂದಿಗೆ ಸಭೆ ಮುಕ್ತಾಯಗೊಂಡಾಗ ಅಲ್ಲಿ ನೆರೆದಿದ್ದ ನೂರಾರು ಜನಗಳ ಮನದಲ್ಲಿ ಮೂಡಿ ಬಂದದ್ದು ಇನ್ನೆರಡು ವರ್ಷಗಳೊಳಗೆ ತಾವು ಈಗ ನಿಂತ ಜಾಗದಲ್ಲಿ ಕರ್ನಾಟಕದ ಶ್ರಮಜೀವಿಗಳ ಹೆಮ್ಮೆಯ ಸಂಕೇತವಾಗಿ ತಲೆ ಎತ್ತಿನಿಲ್ಲಲಿರುವ ಇ.ಎಂ.ಎಸ್. ಭವನದ ಚಿತ್ರ.







## "ಕಟ್ಟುವೆವು ನಾವು........................"

*ಸಮಾರಂಭ ನಿಗದಿಯಾಗಿದ್ದ 11 ಗಂಟೆ ಒಳಗೆ ಬಹುತೇಕ ಜನ ಸೇರಿದ್ದು ವಿಶೇಷ. ಆದರಲ್ಲೂ ಈ ಬಾರಿ ದಂಪತಿಗಳು, ಮಕ್ಕಳೊಂದಿಗೆ ಹಾಜರಾದದ್ದು ಸಮಾರಂಭಕ್ಕೆ ಒಂದು ವಿಶೇಷ ಕಳೆ ತಂದಿತ್ತು.*

*ಸಮಾರಂಭವೂ ತುಂಬಾ ಸರಳ. ಕಾಂ. ಇ.ಕೆ.ನಾಯನಾರ್‌ರವರು ಅಡಿಗಲ್ಲು ಹಾಕಿ ಮಾತನಾಡಿದರು. ಸ್ವಾಗತ, ವಂದನಾರ್ಪಣೆ, ನಿಧಿ ನೀಡಿಕೆ....... ಸಮಾರಂಭ ಮುಗಿಯಿತು ಎಂದು ಪ್ರಕಟಿಸಿದ ಬಳಿಕವೂ ಜನ ಚದುರಲಿಲ್ಲ. ಸಭೆಯ ಒಟ್ಟು ಪರಿಣಾಮ ಗಾಢವಾಗಿತ್ತು.*

*ನಿಧಿ ನೀಡಬಹುದೆಂದು ಕಾಂ. ಸೂರಿಯವರು ಪ್ರಕಟಿಸುತ್ತಿದ್ದಂತೆ 2000, 5000, 1000, 25000 ಇತ್ಯಾದಿ.... ನೀಡುತ್ತಾ ಹೋದರು. ಸಂಗ್ರಹಿಸಲಾದ ಮೊತ್ತ 86,000 ದಾಟಿತು. ಬಹಳಷ್ಟು ಜನ ಮೊದಲೇ ತಿಳಿಸಿದ್ದರೆ ಚೆನ್ನಾಗಿತ್ತು ಎಂದು ನೊಂದುಕೊಂಡರು. ಕೆಲವರಂತೂ "ಇಷ್ಟೇ ಅಲ್ಲ ಇದು ನಮ್ಮ ಮೊದಲ ಕಂತು" ಎಂದರು. ಇ.ಎಂ.ಎಸ್. ಭವನ ಕಟ್ಟಿಯೇ ತೀರುವ ಛಲ ಎಲ್ಲರಲ್ಲಿಯೂ.*



"ಇ.ಎಂ.ಎಸ್. ಭವನಕ್ಕೆ ನನ್ನ ಕಾಣಿಕೆ"

*ಈ ನಡುವೆ ಟ್ರಸ್ಟ್‌ನ ಸದಸ್ಯರಾಗಿದ್ದ ಕಾಂ. ಪಿ.ಆರ್.ರವರ ಅಗಲಿಕೆಯ ದುಃಖದ ನೆನಪು ಎಲ್ಲರ ಎದೆಯಲ್ಲೂ ಮಡುಗಟ್ಟಿತ್ತು. ಸಂಗಾತಿ ವಿಮಲಾ, ಸುರೇಂದ್ರರ ಮಗಳು ಸುಷ್ಮಾ ಕಟ್ಟಡದ ನಿಧಿಗೆಂದು ರೂ. 5000 ವನ್ನು ನೀಡಲು ವೇದಿಕೆಗೆ ಬಂದಾಗ ಹಿಡಿದಿಟ್ಟ 'ಮಾಸ್ತ' ನೆನಪು ತಡೆಯಲಾಗ ಲಿಲ್ಲ. ತನ್ನ ಪ್ರೀತಿಯ 'ಮಾಸ್ತ' ಅಜ್ಜನ ನೆನಪಿಗೆ ಈ ನಿಧಿ ಎನ್ನುತ್ತಿದ್ದಂತೆಯೇ ದುಃಖ ಉಮ್ಮಳಿಸಿತು. ಎಲ್ಲರ ಕಣ್ಣುಗಳೂ ಹನಿಗೂಡಿದವು. ಮಾಸ್ತು ಮಗಳು ಉಷಾ, ಅವರ ಪತಿ ಮೊದಲ ಕಂತು ಎಂದು 5000 ನೀಡಿದರು. "ಈ ಭವನದ ನಿರ್ಮಾಣಕ್ಕೆ ಮಾಸ್ತು ಅವರಿಂದ ನಿಧಿ ಇಲ್ಲವೆಂದು ಭಾವಿಸಬೇಡಿ. ಮನೆ ವೆಚ್ಚಕ್ಕೆ ಅವರು ನೀಡುತ್ತಿದ್ದ ಹಣದಿಂದ ಉಳಿಸಿದ್ದ 50,000 ಗಳನ್ನು ಒಟ್ಟುಗೂಡಿಸಿ ಕೊಡುತ್ತಿದ್ದೇವೆ" ಎಂಬ ಶ್ರೀಮತಿ ಪಿ.ಆರ್. ಅವರ ಕೊಡುಗೆಯನ್ನು ಕಾಂ. ಸೂರಿಯವರು ಪ್ರಸ್ತಾಪಿಸಿ, ಕಮ್ಯುನಿಸ್ಟ್ ಪರಂಪರೆಯನ್ನು ನೆನಪಿಸಿದಾಗ ಎಲ್ಲರಿಂದ ಹೆಮ್ಮೆಯ ಕರತಾಡನ.*

ಮಾಸ್ತು ಅಜ್ಜನ ನೆನಪಿನಲ್ಲಿ...........



*ಈ ಅಡಿಗಲ್ಲು ಸಮಾರಂಭದಲ್ಲಿಯೇ ಇನ್ನೊಂದು ಸಮಾರಂಭ. ಕಾಂ. ಮಿಲ್ಲಿಯಾರ್, ಕಾಂ. ವಿಶಾಲಮತಿಯವರು ಪಕ್ಷದ ಸಂಬಂಧದಿಂದಾಗಿ ಒಂದಾದವರು. ಅವರಿಗೆ ಮಗ ಹುಟ್ಟಿ ನಾಲ್ಕು ತಿಂಗಳಾದರೂ ಹೆಸರಿಡಲಿಲ್ಲ. ಕಾಂ. ಇ.ಕೆ.ನಾಯನಾರ್ ಮಾತು ಮುಗಿದ ಮೇಲೆ 'ಬಿಟಿನ್' ಎಂದು ಹೆಸರಿಸಿ ಮುತ್ತನ್ನಿಕ್ಕಿದರು. ಎಷ್ಟೊಂದು ಜನ, ಇಲ್ಲಿ ಎಲ್ಲರೂ ನಮ್ಮವರೇ.*

*- ಎಸ್.ವೈ.ಗುರುಶಾಂತ್*

# ಪಶ್ಚಿಮ ಬಂಗಾಳ ವಿಧಾನಸಭಾ ಉಪ ಚುನಾವಣೆಗಳಲ್ಲಿ ಎಡರಂಗದ ಭಾರೀ ಜಯ

ದೇಶದೊಳಗೆ — ವಿಶ್ವ

ಪಶ್ಚಿಮ ಬಂಗಾಳದ ವಿಧಾನಸಭಾ ಸ್ಥಾನಗಳಿಗೆ ನಡೆದ ಮೂರು ಉಪಚುನಾವಣೆಗಳಲ್ಲಿ ಎಡರಂಗ ಭಾರೀ ವಿಜಯ ಸಾಧಿಸಿದೆ. ಬೀರ್‌ಭೂಮ್ ಜಿಲ್ಲೆಯ ಮಯೂರೇಶವರನ್ ಮತ್ತು ಮಿಡ್ನಾಪುರ್ ಜಿಲ್ಲೆಯ ನಂದನ್‌ಪುರ್ ಸ್ಥಾನಗಳನ್ನು ಎಡರಂಗ ಉಳಿಸಿಕೊಂಡಿದೆ, ದಕ್ಷಿಣ 24 ಪರಗಣ ಜಿಲ್ಲೆಯ ಬರುಯಿಪುರ್ ಸ್ಥಾನವನ್ನು ಎಡರಂಗ ತೃಣಮೂಲ ಕಾಂಗ್ರೆಸ್‌ನಿಂದ ಕಸಿದುಕೊಂಡಿದೆ. ಈ ಮೂರು ಸ್ಥಾನಗಳಲ್ಲಿ ಕಾಂಗ್ರೆಸ್ ನಾಮಮಾತ್ರಕ್ಕೆ ಸ್ಪರ್ಧಿಸಿದ್ದು ಎಲ್ಲಾ ಎಡ-ವಿರೋಧಿ ಮತಗಳ ಕ್ರೋಢೀಕರಣದಿಂದ ಹಾಗೂ ಜನಗಳಲ್ಲಿನ ಭ್ರಮನಿರಸನದಿಂದಾಗಿ ತೃಣಮೂಲ ಕಾಂಗ್ರೆಸ್-ಬಿಜೆಪಿ ಕೂಟ ಗೆಲವು ಸಾಧಿಸಬಹುದೆಂಬ ಎಡವಿರೋಧಿಗಳ ನಿರೀಕ್ಷೆ ಸಂಪೂರ್ಣ ಸುಳ್ಳಾಗಿದೆ.

ಬರುಯೀಪುರದಲ್ಲಿ ಸಿಪಿಐ(ಎಂ)ನ ಸುಜಾನ್ ಚಕ್ರವರ್ತಿ 23292 ಮತಗಳ ಭಾರೀ ಅಂತರದಿಂದ ಬಿಜೆಪಿ ಬೆಂಬಲಿತ ತೃಣಮೂಲ ಕಾಂಗ್ರೆಸ್ಸಿನ ಅಭ್ಯರ್ಥಿಯನ್ನು ಸೋಲಿಸಿದರು. ಇಲ್ಲಿಂದ ಕಳೆದ ಬಾರಿ ತೃಣಮೂಲ ಕಾಂಗ್ರೆಸ್ಸಿನ ಅಭ್ಯರ್ಥಿ ಗೆದ್ದಿದ್ದರು.

ಮಯೂರೇಶ್ವರ್‌ನಲ್ಲಿ ಸಿಪಿಐ(ಎಂ) ಬಿಷ್ಣುಲೆತ್ ತೃಣಮೂಲ ಕಾಂಗ್ರೆಸ್ ಬೆಂಬಲಿತ ಬಿಜೆಪಿ ಅಭ್ಯರ್ಥಿಯನ್ನು 15641 ಮತಗಳ ಅಂತರದಿಂದ ಸೋಲಿಸಿದರು. ಕಳೆದ ಬಾರಿ ಸಿಪಿಐ(ಎಂ)ನ ಧಿರೇನ್ ಲೆತ್ 13503 ಮತಗಳ ಅಂತರದಿಂದ ಇಲ್ಲಿ ಗೆದ್ದಿದ್ದರು. ಅವರೀಗ ಬೀರ್‌ಭೂಮ್ ಜಿಲ್ಲಾ ಪರಿಷತ್‌ನ ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ.

ನಂದನಪುರದಲ್ಲಿ ಎಡರಂಗ ಸರಕಾರದಲ್ಲಿ ಸತತವಾಗಿ ಮಂತ್ರಿಯಾಗಿದ್ದ ಛಾಯಾ ಬೇರಾರವರ ನಿಧನದಿಂದಾಗಿ ನಡೆದ ಉಪ ಚುನಾವಣೆಯಲ್ಲಿ ಸಿಪಿಐ(ಎಂ)ನ ಒಮರ್ ಅಲಿ 3148 ಮತಗಳಿಂದ ಗೆದ್ದರು.

ಚುನಾವಣೆಗಳಲ್ಲಿ ಕೋಮುವಾದ ಹಾಗೂ ಪ್ರತಿಗಾಮೀ ಶಕ್ತಿಗಳನ್ನು ಸೋಲಿಸಿದ್ದಕ್ಕಾಗಿ ಮುಖ್ಯಮಂತ್ರಿ ಜ್ಯೋತಿಬಸು, ಎಡರಂಗದ ಅಧ್ಯಕ್ಷ ಶೈಲೇನ್ ದಾಸ್‌ಗುಪ್ತಾ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಮತದಾರರನ್ನು ಅಭಿನಂದಿಸಿದ್ದಾರೆ.

## ಹೌರಾ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಎಡರಂಗದ ವಿಜಯ

ಪಶ್ಚಿಮ ಬಂಗಾಳದ ಪ್ರಮುಖ ನಗರಗಳಲ್ಲಿ ಒಂದಾದ ಹೌರಾದ ಮಹಾ ನಗರ ಪಾಲಿಕೆಗೆ ನಡೆದ ಚುನಾವಣೆಗಳಲ್ಲಿ ಎಡರಂಗ ನಾಲ್ಕನೇ ಬಾರಿಗೆ ಭಾರೀ ಜಯ ಗಳಿಸಿದೆ. ಈ ಬಾರಿ ಖಂಡಿತ ಪರಾಭವ ಕಾಣುತ್ತದೆ ಎಂದು ಎಡ-ವಿರೋಧಿಗಳ ನಿರೀಕ್ಷೆಗಳನ್ನು ಹುಸಿಗೊಳಿಸಿ ಎಡರಂಗದ ಕಳೆದ ಬಾರಿಗಿಂತ 3 ಹೆಚ್ಚು ಸ್ಥಾನಗಳನ್ನು ಗಳಿಸಿದೆ.

50 ಸ್ಥಾನಗಳಲ್ಲಿ ಚುನಾವಣೆ ನಡೆದಿದ್ದು ಎಡರಂಗ 35 ಸ್ಥಾನಗಳನ್ನು ಪಡೆದರೆ, ಕಾಂಗ್ರೆಸ್ 12, ತೃಣಮೂಲ ಕಾಂಗ್ರೆಸ್ 2 ಹಾಗೂ ಬಿಜೆಪಿ ಒಂದು ಸ್ಥಾನ ಪಡೆದಿವೆ. ಬೆರ್ಹಾಂಪುರ್ ನಗರಸಭೆಯಲ್ಲಿ ಕಾಂಗ್ರೆಸ್ ತನ್ನ ಹಿಡಿತವನ್ನು ಉಳಿಸಿಕೊಂಡಿದೆ. ಕೃಷ್ಣನಗರ ನಗರಸಭೆ ಕಾಂಗ್ರೆಸ್‌ನ ಕೈತಪ್ಪಿ ಹೋಗಿದ್ದು ಅಲ್ಲಿ ಯಾವ ಪಕ್ಷ/ರಂಗವೂ ಬಹುಮತ ಪಡೆದಿಲ್ಲ.

ಹೌರಾದ ಚುನಾವಣಾ ಫಲಿತಾಂಶಗಳ ಬಗ್ಗೆ ಭಾರೀ-ಭಾರೀ 'ಭವಿಷ್ಯ ವಾಣಿ'ಗಳು ಬಂದಿದ್ದವು. ಅಧಿಕಾರಸ್ತ ಪಕ್ಷವನ್ನು ಜನ ಸೋಲಿಸುತ್ತಾರೆಂದು ಬೇರೆಡೆ ಸಾಬೀತಾದಂತೆ ಕಂಡ ಸಿದ್ಧಾಂತ ಇಲ್ಲೂ ಅನ್ವಯವಾಗುತ್ತದೆ ಎದು ಸಾರಲಾಯಿತು. ಆದರೆ ಆ ಎಲ್ಲಾ ಭವಿಷ್ಯವಾಣಿಗಳು ಹುಸಿಯಾದವು. ಮೇಯರ್ ಸ್ವದೇಶ್ ಚಕ್ರವರ್ತಿ, ಉಪಮೇಯರ್ ದಿಲೀಪ್ ಸೇನ್ ಹಾಗೂ ನಗರಸಭಾಧ್ಯಕ್ಷ ಸುಧಾ.. ಭಟ್ಟಾಚಾರ್ಯ ಅತೀ ಹೆಚ್ಚು ಅಂತರದಿಂದ ಗೆದ್ದಿದ್ದಾರೆ.

ಬೆರ್ಹಾಂಪುರ ನಗರಸಭೆಯಲ್ಲಿ ಕಾಂಗ್ರೆಸ್ ಎಲ್ಲಾ 23 ಸ್ಥಾನಗಳಲ್ಲಿ ಗೆದ್ದಿದೆ. ಕಳೆದ ಬಾರಿ 2 ಸ್ಥಾನಗಳಿಸಿದ್ದ ಬಿಜೆಪಿ ಎರಡನ್ನೂ ಕಳಕೊಂಡಿದೆ. ಎಡರಂಗ 21 ಸ್ಥಾನಗಳಲ್ಲಿ ಅತ್ಯಂತ ಸಮೀಪದ ಪ್ರತಿಸ್ಪರ್ಧಿಯಾಗಿತ್ತು.

ಕೃಷ್ಣನಗರದ ನಗರಸಭೆಯ ಸ್ಥಾನಗಳನ್ನು ಮರುವಿಂಗಡಣೆಯಾಗಿದ್ದು ಸ್ಥಾನಗಳ ಸಂಖ್ಯೆ 29 ರಿಂದ 24 ಕ್ಕಿಳಿಯಿತು. ಹಿಂದೆ 29 ಸ್ಥಾನಗಳಲ್ಲಿ 26 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡಿತ್ತು. ಎರಡರಲ್ಲಿ ಎಡರಂಗ ಹಾಗೂ ಒಂದರಲ್ಲಿ ಸಮಾಜವಾದಿ ಪಕ್ಷ ಗೆದ್ದಿದ್ದವು. ಈ ಬಾರಿ ಚುನಾವಣೆ ನಡೆದ 23 ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ 11, ಎಡರಂಗಕ್ಕೆ 6, ಸಮಾಜವಾದಿ ಪಕ್ಷಕ್ಕೆ 2, ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿಗೆ ತಲಾ ಒಂದು ಸ್ಥಾನ ದೊರೆತಿವೆ. 1981 ರಿಂದ ಕಾಂಗ್ರೆಸ್ ಈ ನಗರಸಭೆಯ ಮೇಲೆ ಹತೋಟಿ ಪಡೆದಿದ್ದು. ಈ ಬಾರಿ ಅದು ಕಳಕೊಂಡಿದೆ.

ವಿವಿಧ ನಗರಸಭೆಗಳ 12 ವಾರ್ಡು ಗಳಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಎಡರಂಗ 9 ವಾರ್ಡುಗಳಲ್ಲಿ, ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿ ತಲಾ ಒಂದೊಂದು ಸ್ಥಾನದಲ್ಲಿ ಜಯಗಳಿಸಿವೆ. (ಐಎನ್‌ಎನ್)

# ನಾಲ್ಕು ರಾಜ್ಯಗಳಲ್ಲಿ ಹೊಸ ಸರಕಾರಗಳು ಅಧಿಕಾರಕ್ಕೆ

ಮಿನಿ ಮಹಾಚುನಾವಣೆ ಪ್ರಕ್ರಿಯೆ ಮುಗಿದು ಚುನಾವಣೆ ನಡೆದ ನಾಲ್ಕು ರಾಜ್ಯಗಳಲ್ಲಿ ಹೊಸ ಸರಕಾರಗಳು ಅಸ್ತಿತ್ವಕ್ಕೆ ಬಂದಿವೆ.

ಬಿಜೆಪಿಯನ್ನು ಹೀನಾಮಾನವಾಗಿ ಸೋಲಿಸಿದ ಕಾಂಗ್ರೆಸ್ ರಾಜಸ್ಥಾನದಲ್ಲಿ ಸರಕಾರ ರಚಿಸಿದೆ. 47 ವರ್ಷದ ಅಶೋಕ ಗೆಹ್ಲಟ್ ಹೊಸ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯದ ಅತಿ ಕಿರಿಯ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಗೆಹ್ಲಾಟ್ ಪಾತ್ರರಾಗಿದ್ದಾರೆ.

ಮಧ್ಯ ಪ್ರದೇಶದಲ್ಲಿ ಎಲ್ಲಾ ನಿರೀಕ್ಷೆಗಳು ತಲೆಕೆಳಗಾಗಿ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡಿದೆ. ರಾಜಸ್ಥಾನ ದೆಹಲಿಯಲ್ಲಿ ಸೋತರೂ ಮಧ್ಯಪ್ರದೇಶದಲ್ಲಿ ಗೆದ್ದು ಮಾನ ಉಳಿಸಿಕೊಳ್ಳಬಹುದೆಂಬ ಬಿಜೆಪಿ ಲೆಕ್ಕಾಚಾರ ಉಲ್ಟಾಪುಲ್ಟಾ ಆಗಿ ದಿಗ್ವಿಜಯಸಿಂಗ್ ನೇತೃತ್ವದಲ್ಲಿ ಕಾಂಗ್ರೆಸ್ ದಿಗ್ವಿಜಯ ಸಾಧಿಸಿತು. ದಿಗ್ವಿಜಯ ಸಿಂಗ್ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರಿದ್ದಾರೆ.

ರಾಷ್ಟ್ರ ರಾಜಧಾನಿ ದೆಹಲಿ. ಇಲ್ಲಿ ವಿಧಾನಸಭೆ ರಚನೆಯಾದ ಮೇಲೆ 1993ರಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಬಿಜೆಪಿ ಕೈ ಮೇಲಾಗಿ ಸರಕಾರ ರಚಿಸಿತ್ತು. ಹಲವು ಕಾರಣಗಳಿಗಾಗಿ ಒಂದೇ ಪಕ್ಷದ ಅಧಿಕಾರವಿದ್ದರೂ ನಾಲ್ಕು ಮುಖ್ಯ ಮಂತ್ರಿಗಳನ್ನು ಕಂಡ ದೆಹಲಿ ಜನತೆ ಅದರ ದುರಾಡಳಿತದಿಂದ ಬೇಸತ್ತು ಬಿಜೆಪಿಯನ್ನು ಯದ್ವಾತದ್ವಾ ತಿರಸ್ಕರಿಸಿದೆ. ಕಾಂಗ್ರೆಸ್‌ಗೆ ಸ್ಪಷ್ಟಬಹುಮತ ನೀಡಿದೆ.

ಚುನಾವಣೆ ಪ್ರಚಾರ ವೇಳೆಯೇ ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸಲಾಗಿದ್ದ ಹಿರಿಯ ಕಾಂಗ್ರೆಸ್ ನಾಯಕಿ ಶೀಲಾ ದೀಕ್ಷಿತ್ ದೆಹಲಿಯ ಆಡಳಿತ ಸೂತ್ರ ಹಿಡಿದಿದ್ದಾರೆ.

ಮಿಜೋರಾಂನಲ್ಲಿ ಸತತ 10 ವರ್ಷಗಳಿಂದ ಆಡಳಿತದಲ್ಲಿದ್ದ ಕಾಂಗ್ರೆಸ್‌ನ್ನು ಸೋಲಿಸಿರುವ ಎಂ.ಎಸ್.ಎಫ್., ಎಂ.ಎಸ್.ಪಿ ಮೈತ್ರಿ ಕೂಟದ ಮುಖಂಡರಾಗಿ ಜೋರಂತಂಗಾ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

**ಅಕಾಲಿ ದಳದಲ್ಲಿ ಬಂಡಾಯ:**

ನಾಲ್ಕು ರಾಜ್ಯಗಳ ವಿಧಾನಸಭೆ ಚುನಾವಣೆಗಳ ಜತೆ ಹಲವು ರಾಜ್ಯಗಳಲ್ಲಿ ಕೆಲವು ಕ್ಷೇತ್ರಗಳ ಉಪಚುನಾವಣೆಯೂ ನಡೆದಿತ್ತು. ಪಂಜಾಬಿನ ಅದಮಪುರ ಕ್ಷೇತ್ರ ಅವುಗಳಲ್ಲಿ ಒಂದು.

ಬಿಜೆಪಿ ಮಿತ್ರಪಕ್ಷಗಳಲ್ಲಿ ಒಂದಾದ ಅಕಾಲಿದಳ ರಾಜ್ಯದ ಆಳುವ ಪಕ್ಷ. ಆದರೆ ಅದು ಬೇರೆಲ್ಲ ಕಡೆ ಬಿಜೆಪಿ ಮಣ್ಣು ಮುಕ್ಕಿದಂತೆ ತನ್ನ ನೆಲೆಯಲ್ಲೇ ಸೋಲನ್ನು ಅನುಭವಿಸಿತು.

ಕಾಂಗ್ರೆಸ್ ಅಭ್ಯರ್ಥಿ ಅಕಾಲಿದಳದ ಹುರಿಯಾಳನ್ನು ಸೋಲಿಸಿ ಸುಮಾರು ಮೂರು ದಶಕಗಳ ನಂತರ ಈ ಕ್ಷೇತ್ರವನ್ನು ಕಾಂಗ್ರೆಸ್‌ಗೆ ಮರಳಿ ತಂದುಕೊಟ್ಟರು. ಉಗ್ರಗಾಮಿಪರ ಶಿರೋಮಣಿ ಅಕಾಲಿದಳ (ಅಮೃತಸರ) ಮತ್ತು ಬಹುಜನ ಸಮಾಜಪಕ್ಷ ಈ ಕ್ಷೇತ್ರದಲ್ಲಿ ಠೇವಣಿ ಕಳಕೊಂಡವು.

ಒಟ್ಟಿನಲ್ಲಿ ಬಿಜೆಪಿ ನೇತೃತ್ವದ ಕೂಟ ಪಂಜಾಬಿನಲ್ಲಿಯೂ ಜನತೆಯ ವಿಶ್ವಾಸ ಕಳೆದುಕೊಂಡಿದೆ ಎಂಬುದು ಇದರಿಂದ ಸಾಬೀತಾಗಿದೆ.

ಅಕಾಲಿದಳ ಈ ಸೋಲಿನ ಆಘಾತದಿಂದ ಹೊರಬರುವ ಮುನ್ನವೇ ಪಕ್ಷದ ಒಬ್ಬ ಪ್ರಮುಖ ನಾಯಕ ಬಂಡಾಯವೆದ್ದು ಗಾಯದ ಮೇಲೆ ಬರೆ ಎಳೆದ ಅನುಭವ ನೀಡಿದ್ದಾರೆ.

ಸಂಸತ್ ಸದಸ್ಯರೂ ಆಗಿರುವ ಅಕಾಲಿದಳದ ಯುವ ವಿಭಾಗದ ಅಧ್ಯಕ್ಷ ಅಮ್ರಿಕ್ ಸಿಂಗ್ ಅಲಿವಾಲ್ ತಮ್ಮ ಹುದ್ದೆಗೆ ರಾಜಿನಾಮೆ ನೀಡಿದ್ದಾರೆ. ಪ್ರಧಾನ ಕಾರ್ಯದರ್ಶಿ ಸುಖದೇವ ಸಿಂಗ್ ಧಿಂಡ್ಸಾ ಅವರ ಸರ್ವಾಧಿಕಾರಿ ಧೋರಣೆಯಿಂದ ಬೇಸತ್ತು ತಾವು ಈ ಹೆಜ್ಜೆಯಿಟ್ಟಿದ್ದಾಗಿ ಅಲಿವಾಲ್ ಹೇಳಿದ್ದಾರೆ.

ಬಿಹಾರದಲ್ಲಿ ನಡೆದ ಉಪಚುನಾವಣೆಯಲ್ಲಿ ಶಿವೊಹರ್ ವಿಧಾನ ಸಭೆ ಕ್ಷೇತ್ರದಲ್ಲಿ ಬಿಹಾರದ ಮಾಜಿ ಮಂತ್ರಿ ಹಾಗೂ ಸಮತಾ ಪಕ್ಷದ ಬಿಹಾರ ರಾಜ್ಯ ಘಟಕದ ಅಧ್ಯಕ್ಷ ರಘುನಾಥ ಸೋಲುಂಡಿದ್ದಾರೆ.

ಆಳುವ ರಾಷ್ಟ್ರೀಯ ಜನತಾ ದಳದ ಅಭ್ಯರ್ಥಿ ಇವರನ್ನು ಪರಾಭವಗೊಳಿಸಿದರು.

**ಸುಷ್ಮಾ ಸ್ವರಾಜ್‌ಗೆ ಗೆಲುವಲ್ಲದ ವಿಜಯ:**

ದೆಹಲಿಯಲ್ಲಿ ಬಿಜೆಪಿಗೆ ಜಯ ತಂದು ಕೊಡುವ ಸಮರ್ಥ ನಾಯಕಿ ಎಂಬ ಅಬ್ಬರದ ಪ್ರಚಾರದೊಂದಿಗೆ ಮುಖ್ಯಮಂತ್ರಿಗಾದಿಗೆ ಏರಿಸಲಾಗಿದ್ದ ಸುಷ್ಮಾ ಸ್ವರಾಜ್ ಚುನಾವಣೆಯಲ್ಲಿ ಗೆದ್ದಿದ್ದಾರೇನೋ ಹೌದು.

ಆದರೆ ಗೆಲುವಲ್ಲದ ಗೆಲುವು ಅವರದು ಎನ್ನಬೇಕಾಗಿದೆ. ಯಾಕೆಂದರೆ ಅವರು ಜಯ ಗಳಿಸಿರುವುದು ಕೇವಲ 2900 ರಷ್ಟು ಮತಗಳ ಅಂತರದಿಂದ.

ಹಾಂ! ಇನ್ನು ಒಂದು ವಿಷಯ. ದೆಹಲಿ ವಿಧಾನಸಭೆಯಲ್ಲಿ ಬಿಜೆಪಿ ಪ್ರತಿನಿಧಿಸುವ ಏಕೈಕ ಮಹಿಳೆ ಆಗಲಿದ್ದಾರೆ ಸುಷ್ಮಾ ಸ್ವರಾಜ್. ಒಟ್ಟು 8 ಮಹಿಳೆಯರು ವಿಧಾನಸಭೆಗೆ ಆಯ್ಕೆಯಾಗಿದ್ದು ಉಳಿದವರೆಲ್ಲ ಕಾಗ್ರೆಸ್ ಪಕ್ಷದವರು.

**ಮಧ್ಯಪ್ರದೇಶದಲ್ಲಿ ದಾಖಲೆ:**

ಮಧ್ಯಪ್ರದೇಶದ ಅಸೆಂಬ್ಲಿ ಮಹಿಳಾ ಸದಸ್ಯರ ವಿಚಾರದಲ್ಲಿ ಒಂದು ಹೊಸ ದಾಖಲೆ ಸ್ಥಾಪಿಸಿದೆ. 24 ಶಾಸಕಿಯರು ಇಲ್ಲಿ ಆಯ್ಕೆಯಾಗಿದ್ದಾರೆ. ಆ ಪೈಕಿ 17 ಮಂದಿ ಕಾಗ್ರೆಸ್ ಪಕ್ಷದವರು ಆರು ಬಿಜೆಪಿಯವರು ಮತ್ತು ಒಬ್ಬರು ಬಿಎಸ್‌ಪಿ ಯವರು. ಕಾಗ್ರೆಸ್ 27 ಮಹಿಳೆಯರನ್ನು ಬಿಜೆಪಿ 29 ಮಹಿಳೆಯರನ್ನು ಕಣಕ್ಕಿಳಿಸಿದ್ದವು.

ರಾಜಸ್ಥಾನದಲ್ಲಿ ಬಿಜೆಪಿ ಮಣ್ಣು ಮುಕ್ಕಿರುವುದರ ಜತೆ ಅದರ ಮಿತ್ರಪಕ್ಷವಾದ ರಾಷ್ಟ್ರೀಯ ಲೋಕದಳ ಕೂಡ ನೆಲಕಚ್ಚಿದೆ. ಸ್ಪರ್ಧಿಸಿದ್ದ ಆರು ಕ್ಷೇತ್ರಗಳ ಪೈಕಿ ಒಂದರಲ್ಲೂ ರಾಷ್ಟ್ರೀಯ ಲೋಕದಳ ಗೆದ್ದಿಲ್ಲ.

ರಾಜ್ಯಸ್ಥಾನ ವಿಧಾನ ಸಭೆಯಲ್ಲಿ ಎಡಪಕ್ಷಗಳ ಪೈಕಿ ಗೆದ್ದಿರುವ ಒಂದೇ ಪಕ್ಷ ಸಿಪಿಐ(ಎಂ). ಅದರ ಅಭ್ಯರ್ಥಿ ಕಾಮ್ರೇಡ್ ಅಮ್ರ ರಾಮಾ ಸಿಕಾರ್ ಜಿಲ್ಲೆಯ ಧೊಡ ಕ್ಷೇತ್ರದಿಂದ ಗೆದ್ದಿದ್ದಾರೆ.

ಹಿಂದಿನ ವಿಧಾನ ಸಭೆಯಲ್ಲಿ ಕಾಂ. ರಾಮ್ ಇದೇ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

**ಸಂಘ ಪರಿವಾರಕ್ಕೆ ದೊಡ್ಡ ಹೊಡೆತ:**

ರಾಜಸ್ಥಾನದಲ್ಲಿ ಅಧಿಕಾರ ಕಳೆದುಕೊಂಡಿರುವುದರ ಜತೆಗೆ ಸಂಘ ಪರಿವಾರಕ್ಕೆ ಭಾರೀ ಹೊಡೆತ ನೀಡಿದ ಫಲಿತಾಂಶಗಳೂ ಇವೆ. ಉಪಮುಖ್ಯಮಂತ್ರಿ ಯಾಗಿದ್ದ ಹರಿಶಂಕರ್ ಭಾಭ್ರಾ ಮತ್ತು ಲೋಕೋಪಯೋಗಿ ಸಚಿವ ಲಲಿತ ಕಿಶೋರ್ ಚತುರ್ಲೇಕರ್ ಅವರ ಸೋಲು ಬಿಜೆಪಿಗೆ ಭಾರಿ ಮುಖಭಂಗವಾಗಿದೆ.

## ಕೈ ತಪ್ಪಿದ ಗೋವಾ

ಅತ್ತ ಉತ್ತರದಲ್ಲಿ ಚುನಾವಣೆ ನಡೆದ ನಾಲ್ಕು ರಾಜ್ಯಗಳಲ್ಲಿ ತೀವ್ರ ಹಿನ್ನಡೆ ಅನುಭವಿಸಿದ ಬಿಜೆಪಿಗೆ ಇತ್ತ ದಕ್ಷಿಣದಲ್ಲಿ ಇನ್ನೊಂದು ಆಘಾತ ಕಾದಿತ್ತು.

ಬಿಜೆಪಿಯ ಬೆಂಬಲದಿಂದ ಅಧಿಕಾರ ನಡೆಸುತ್ತಿದ್ದ ಗೋವಾ ಸರಕಾರ ಪತನಗೊಂಡಿತು.

ನಾಲ್ಕು ತಿಂಗಳ ಹಿಂದೆ ಕಾಗ್ರೆಸ್ಸಿನಿಂದ ಹೊರಬಂದ ಕೆಲವರು ಗೋವಾ ರಾಜೀವ್ ಕಾಂಗ್ರೆಸ್ (ಜಿಆರ್‌ಸಿ) ರಚಿಸಿಕೊಂಡು ಬಿಜೆಪಿ ಬೆಂಬಲದಿಂದ ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾಗಿತ್ತು. ಗೋಮಾಂತರ ಪಕ್ಷ ಕೂಡ ಸರಕಾರದಲ್ಲಿ ಭಾಗವಹಿಸಿತ್ತು. ಆದರೆ ಬಿಜೆಪಿ ಹೊರಗಿನಿಂದ ಬೆಂಬಲ ನೀಡಿತ್ತು.

ಇದೀಗ ಜಿಆರ್‌ಸಿಯ ಮೂವರು ಪ್ರಮುಖರು ಪಕ್ಷ ಬಿಟ್ಟು ಮರಳಿ ಕಾಂಗ್ರೆಸ್ ಸೇರಿದ್ದರಿಂದ ಸಮ್ಮಿಶ್ರ ಸರಕಾರ ಪತನಗೊಂಡಿತು. ಸದನದಲ್ಲಿ ಬಹುಮತ ಸಾಬೀತು ಪಡಿಸಬೇಕಾದಂಥ ಸನ್ನಿವೇಶದಲ್ಲಿ ಸದನವನ್ನು ಎದುರಿಸದೆಯೇ ವಿಲ್ಪಡ್ ಡಿಸೋಜ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದು ಕಾಂಗ್ರೆಸಿನ ಲುಜಿನೊ ಹೊಸ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅಷ್ಟೇ ಅಲ್ಲದೆ ಡಿಸೆಂಬರ್ 21 ರವರೆಗೆ ಅವಕಾಶ ಕೊಟ್ಟಿದ್ದರೂ ನಾಲ್ಕೇ ದಿನಗಳಲ್ಲಿ ವಿಶೇಷ ಅಧಿವೇಶನ ಕಳೆದು ಬಹುಮತವನ್ನು ಸಾಬೀತು ಪಡಿಸಿದ್ದಾರೆ.




### ಬಳ್ಳಾರಿ ಜಿಲ್ಲಾ ರೈತ ಸಮಾವೇಶ

# 'ವಿಶಾಲ ರೈತ ಆದೋಳನ ಬೆಳೆಯ ಬೇಕು' ಸೂರಿ ಕರೆ

ಬಳ್ಳಾರಿ: ಅಕ್ಟೋಬರ್ 30 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಬಳ್ಳಾರಿ ಜಿಲ್ಲಾ 5ನೇ ಸಮ್ಮೇಳನದ ಪೂರ್ವಭಾವಿ ಯಾಗಿ ಅತಿವೃಷ್ಟಿಹಾನಿ, ಸಮಗ್ರ ಭೂಸುಧಾರಣೆ ಕೂಲಿಕಾರರಿಗೆ ಸಮಗ್ರ ಕಾನೂನಿಗೆ ಒತ್ತಾಯಿಸಿ ಸಮಾವೇಶ ನಡೆಯಿತು.

ಈ ಸಮಾವೇಶಕ್ಕೆ ಬಳ್ಳಾರಿ ಜಿಲ್ಲೆಯ ಅನೇಕ ಗ್ರಾಮಗಳಿಂದ 3000 ರೈತರು ಕೃಷಿ ಕೂಲಿಕಾರರು ಭಾಗವಹಿಸಿದ್ದರು. ನಗರದ ಗಾಂಧೀಭವನದಲ್ಲಿ ಸಂಘಟಿಸಲಾಗಿದ್ದ ಈ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಬಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ರಾಜ್ಯ ಸಮಿತಿಯ ಕಾರ್ಯದರ್ಶಿಗಳಾದ ಸೂರ್ಯನಾರಾಯಣ ರಾವ್ ರವರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಎನ್.ಕೆ. ಉಪಾಧ್ಯಾಯ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಸಿ.ಎಸ್. ಬಾಳೆಯವರು ಉಪಸ್ಥಿತರಿದ್ದರು. ಈ ಸಮಾವೇಶದ ಅಧ್ಯಕ್ಷತೆಯನ್ನು ಸ್ವಾಗತ ಸಮಿತಿಯ ಅಧ್ಯಕ್ಷರಾದ ವಿಠಲ್‌ರವರು ವಹಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರದ ಸೂರಿಯವರಿಗೆ ಹಾಗೂ ಎನ್.ಕೆ. ಉಪಾಧ್ಯಾಯರವರಿಗೆ ಕೆಂಪು ಶಾಲು ಹೊದಿಸಿ ಸನ್ಮಾನಿಸಲಾಯ್ತು. ಸಮಾವೇಶವನ್ನು ಉದ್ಘಾಟಿಸಿದ ಎಸ್. ಸೂರ್ಯನಾರಾಯಣ ರಾವ್‌ರವರು ರೈತರ ಆಂದೋಳನದ ಮೇಲಿರುವ ಗುರುತರ ಜವಾಬ್ದಾರಿಗಳನ್ನು ಹಾಗೂ ಹೊಸ ಆರ್ಥಿಕ ನೀತಿಯು ಗ್ರಾಮ ಭಾರತವನ್ನು ಹೇಗೆ ಸಂಕಷ್ಟಕ್ಕೆ ಗುರಿಮಾಡಿದೆ ಎಂಬುದನ್ನು ಎಳೆ ಎಳೆಯಾಗಿ ವಿವರಿಸಿದರು.

ನಂತರ ಮಾತನಾಡಿದ ಇನ್ನೊಬ್ಬ ಅತಿಥಿ ಎನ್.ಕೆ.ಉಪಾಧ್ಯಾಯರವರು ಸ್ವಾತಂತ್ರ್ಯ ಹೋರಾಟದಲ್ಲಿ ನಡೆದ ರೈತರ ಆಂದೋಳನವನ್ನು ಪರಿಚಯಿಸಿ ಬೆಲೆಏರಿಕೆ ಹಾಗೂ ಜಾತಿವಾದದ ವಿರುದ್ಧ ರೈತರು ಸಿಡಿದೇಳಬೇಕು ಮತ್ತು ನಿಜವಾದ ಸ್ವಾತಂತ್ರ್ಯವನ್ನು ಪಡೆದು ಕೊಳ್ಳಲು ಸಂಘಟಿತ ಹೋರಾಟವನ್ನು ಕಟ್ಟಿಬೆಳೆಸಬೇಕೆಂದು ತಿಳಿಸಿದರು.

ಸಿ.ಎಸ್.ಬಾಳೆಯವರು ಗ್ರಾಮ ಮಟ್ಟದಿಂದ ಸಂಘಟನೆ ಗಟ್ಟಿಗೊಳಿಸಲು ಒತ್ತು ನೀಡಿ ಬೆಲೆಗಳ ಹಾವು ಏಣಿ ಆಟದಲ್ಲಿ ರೈತರು ಹೇಗೆ ಸಂಕಷ್ಟ ಅನುಭವಿಸುತ್ತಿದ್ದಾರೆ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಧೋರಣೆಯನ್ನು ಅನುಷ್ಠಾನಗೊಳಿಸಲು ಎಂಥ ಬಲಿಷ್ಟ ಸಂಘಟನೆ ಬೇಕಾಗುತ್ತದೆ ಎಂಬ ಬಗ್ಗೆ ವಿವರಿಸಿದರು.

ಈ ಸಮಾವೇಶಕ್ಕೆ ಶುಭಕೋರಿ ಸಿಐಟಿಯುನ ಮುಂದಾಳು ಎಸ್. ಪ್ರಸನ್ನ ಕುಮಾರ್ ಹಾಗೂ ತುಂಗಭದ್ರ ಗ್ರಾಮೀಣ ಬ್ಯಾಂಕ್ ನೌಕರರ ಸಂಘಧ ಮುಖಂಡರಾದ ಪತ್ತಾರ್‌ರವರು ಮಾತನಾಡಿದರು. ಈ ಸಮಾವೇಶದ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಇ.ಆರ್.ಯಲ್ಲಪ್ಪನವರು ವಹಿಸಿದ್ದರು.

ಈ ಸಮಾವೇಶದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿರುವ ಭೂಮಿ ಸಂಬಂಧಿಸಿದ ಸಮಸ್ಯೆಗಳನ್ನು ಕೃಷಿ ಕೂಲಿಕಾರರಿಗೆ, ಭೂಹೀನರಿಗೆ ಭೂಮಿ ಹಂಚಿಕೆ ಮತ್ತು ಸಮಗ್ರ ಭೂಸುಧಾರಣೆ ಕುರಿತಾದ ನಿರ್ಣಯವನ್ನು ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಯು. ಬಸವರಾಜರವರು ಮಂಡಿಸಿದರು. ಇದನ್ನು ಸಮರ್ಥಿಸಿ ವಿವಿಧ ರೀತಿಯ ಹೋರಾಟಗಳನ್ನು ಮುನ್ನಡೆಸು

ಪುಟ 7 ಕ್ಕೆ

ಶರತ್ ಚಂದ್ರ

# ಕೌಲಲಾಂಪುರ್‌ನಲ್ಲಿ ಅಪೆಕ್ ಸಮ್ಮೇಳನ- ಆರ್ಥಿಕಕ್ಕಿಂತ ರಾಜಕೀಯ ವಿಚಾರಗಳತ್ತ ಗಮನ

ಇತ್ತೀಚೆಗೆ ಮಲೇಶ್ಯಾದ ರಾಜಧಾನಿ ಕೌಲಾಲಂಪೂರ್‌ನಲ್ಲಿ ನಡೆದ 21 ದೇಶಗಳ ಅಪೆಕ್(ಏಶಿಯಾ ಫೆಸಿಫಿಕ್ ಆರ್ಥಿಕ ಸರಕಾರ) ಕೂಟದ ಸಮ್ಮೇಳನ ಆರ್ಥಿಕ ವಿಚಾರಗಳಿಗಿಂತ ರಾಜಕೀಯ ವಿಚಾರಗಳತ್ತ ಹೆಚ್ಚು ಗಮನ ಕೊಟ್ಟಿತು ಎನ್ನಬಹುದು. ಏಶ್ಯಾ ಫೆಸಿಫಿಕ್‌ನ ಪ್ರಮುಖ ಭಾಗವಾದ ದಕ್ಷಿಣ ಪೂರ್ವ ಏಶ್ಯಾದಲ್ಲಿನ ತೀವ್ರ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಬಾಯಿ ಮಾತು ಬಿಟ್ಟರೆ ಸಮ್ಮೇಳನ ಏನನ್ನು ಮಾಡಲಿಲ್ಲ- ಅಮೆರಿಕ ಡಾಲರಿನ ಪರಿಹಾರ ನಿಧಿಯ ಅಸ್ಪಷ್ಟ ಸಲಹೆ ಬಿಟ್ಟರೆ. ಈ ದೇಶಗಳ ನಡುವೆ ಅಂತರ್ರಾಷ್ಟ್ರೀಯ ವ್ಯಾಪಾರಗಳಿಗಿರುವ ನಿರ್ಬಂಧಗಳ ಬಗ್ಗೆ ಚರ್ಚೆ ನಡೆಯಲೇ ಇಲ್ಲ.

ಅದರ ಬದಲು ಇರಾಕ್ ಬಿಕ್ಕಟ್ಟಿನ ಪ್ರಯುಕ್ತ ಅಧ್ಯಕ್ಷ ಕ್ಲಿಂಟನ್ ಬರದೆ ಉಪಾಧ್ಯಕ್ಷ ಅಲ್ ಗೋರೆ ಬಂದಿದ್ದು, ಮಲೇಶ್ಯಾದ ಆಂತರಿಕ ರಾಜಕೀಯ ವಿದ್ಯಮಾನಗಳ ಬಗ್ಗೆ ಅನಗತ್ಯವಾಗಿ ಟೀಕೆಗಳನ್ನು ಮಾಡಿದ್ದು, ಅದಕ್ಕೆ ಮಲೇಶ್ಯಾ ಪ್ರಧಾನಿ ಡಾ|| ಮಹತೀರ್ ಮಹಮ್ಮದ್ ಖಾರವಾಗಿ ಉತ್ತರಿಸಿದ್ದು ಸಮ್ಮೇಳನದ ಇತರ ಚರ್ಚೆಗಳಿಗಿಂತ ಹೆಚ್ಚು ಸುದ್ದಿ ಮಾಡಿತು. ಡಾ|| ಮಹಮ್ಮದ್‌ರನ್ನು 'ಅಧಿಕಾರಶಾಹಿ' ಎಂದು ಕರೆದಿದ್ದು ಈಗ ಪದಚ್ಯುತವಾಗಿರುವ ಅನ್ವರ್ ಅಹಮ್ಮದ್‌ರನ್ನು 'ಪ್ರಜಾಪ್ರಭುತ್ವ'ದ ಹೀರೋ ಎಂಬಂತೆ ಮಾತನಾಡಿದ್ದು ಅನುಚಿತ ವರ್ತನೆ ಎಂದು ಅಮೆರಿಕದ ನಿಕಟ ಸಹಚರರಿಗೆ ಅನಿಸಿತು. ಅಮೆರಿಕದ ವಿದೇಶಿ ಸಚಿವೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರಧಾನಿ ಮಹಮ್ಮದ್‌ರ ರಾಜಕೀಯ ವಿರೋಧಿ ಅನ್ವರ್ ಅಹಮ್ಮದ್‌ರ ಪತ್ನಿಯನ್ನು ಭೇಟಿ ಮಾಡುವುದಾಗಿ ಹೇಳಿದ್ದು ಇನ್ನಷ್ಟು ಕೋಲಾಹಲ ಉಂಟುಮಾಡಿತು ಈ ಬಾರಿಯ ಸಮ್ಮೇಳನ. ಅಪೆಕ್ ಈ ಪ್ರದೇಶದ ದೇಶಗಳ ಸಮಾನ ಹಿತಾಸಕ್ತಿ ಎತ್ತಿ ಹಿಡಿಯುವ ಕೂಟವಲ್ಲ. ಅಮೆರಿಕದ ಆಧಿಪತ್ಯದಲ್ಲಿ ನಡೆಯುವ ಸಂಘಟನೆ. ಈ ಕೂಟದಲ್ಲಿರುವ ಇತರ ದೇಶಗಳ ಮಾರುಕಟ್ಟೆ ಅಮೆರಿಕ ಕಂಪನಿಗಳಿಗೆ ತೆರೆಯಬೇಕು. ಆ ದೇಶಗಳ ಆರ್ಥಿಕ ಅಡಿಮೇಲಾದರೂ ನಾವು ತಲೆಕೆಡಿಸಿಕೊಳ್ಳುವುದಿಲ್ಲ ಎಂಬುದು ಸ್ಪಷ್ಟವಾಗಿತ್ತು.

## ಚೀನಾ-ಜಪಾನ್ ಭೇಟಿ - ಮಹಾಯುದ್ಧದ ಅಪರಾಧಗಳಿಗೆಜಪಾನ್ ಕ್ಷಮೆ

ಚೀನಾದ ಅಧ್ಯಕ್ಷ ಜಿಯಾಂಗ್ ಜೆಮಿನ್‌ರ ಜಪಾನಿನ ಆರುದಿನಗಳ ಭೇಟಿ ಜಂಟಿ ಹೇಳಿಕೆಯೊಂದಿಗೆ ಕೊನೆಗೊಂಡಿದೆ. 1978 ರಲ್ಲಿ ಚೀನಾ ಮತ್ತು ಜಪಾನ್ ಒಪ್ಪಿತ ಶಾಂತಿ ಮತ್ತು ಸಹಕಾರದ ಒಪ್ಪಂದದ ಒಂದೇ ವಾರ್ಷಿಕೋತ್ಸವದಲ್ಲಿ ಚೀನೀ ಅಧ್ಯಕ್ಷ ಭೇಟಿ ನೀಡುತ್ತಿದ್ದರು. ಎರಡೂದೇಶಗಳ ಸಂಬಂಧ, ಏಶ್ಯಾದಲ್ಲಿ ಪಾತ್ರ, ಮುಂದಿನ ಎರಡು ವರ್ಷಗಳಲ್ಲಿ ಚೀನಾಕ್ಕೆ 390 ಶತ ಕೋಟಿ ಯೆನ್ ಜಪಾನಿ ಸಹಾಯಧನ, ಮುಂದಿನ ಐದು ವರ್ಷಗಳಲ್ಲಿ 15 ಸಾವಿರ ಯುವಜನರು ಸಾಂಸ್ಕೃತಿಕ ವಿನಿಮಯಕ್ಕಾಗಿ ಪರಸ್ಪರ ಭೇಟಿ, ಪರಿಸರ - ಮಾದರಿ ನಗರಗಳ ನಿರ್ಮಾಣ - ಇದನ್ನು ಜಂಟಿ ಹೇಳಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.

ಆದರೆ ಈ ಒಪ್ಪಂದಕ್ಕೆ ಸಹಿ ಹಾಕಲಾಗಲಿಲ್ಲ. ಬರಿಯ ಅದನ್ನು ಬಿಡುಗಡೆ ಮಾಡಲಾಯಿತು. ಇದಕ್ಕಿಂತ ಮೊದಲು ಎರಡನೇ ಮಹಾಯುದ್ಧದಲ್ಲಿ ಚೀನಾದಲ್ಲಿ ಜಪಾನಿನ ಸೈನಿಕರು ನಡೆಸಿದ ಅತ್ಯಾಚಾರಗಳು ಹಾಗೂ ಇತರ ಯುದ್ಧ ಅಪರಾಧಗಳಿಗಾಗಿ ಜಪಾನ್ ಕ್ಷಮೆ ಕೇಳಬೇಕು, ಇದು ಲಿಖಿತ ಒಪ್ಪಂದದ ಭಾಗವಾಗಿರ ಬೇಕು ಎಂಬ ಚೀನಿ ಒತ್ತಾಯಕ್ಕೆ ಜಪಾನ್ ಒಪ್ಪಲಿಲ್ಲ. ಈ ಕ್ಷಮೆಯ ಭಾಗ ಇಲ್ಲದೆ, ಲಿಖಿತ ಒಪ್ಪಂದಕ್ಕೆ ಸಹಿ ಹಾಕುವುದಿಲ್ಲ ಎಂದು ಚೀನಿ ಅಧ್ಯಕ್ಷರ ನಿರಾಕರಣೆ ಭೇಟಿಯಲ್ಲಿ ಇನ್ನೂ ದೊಡ್ಡ ಸುದ್ದಿ ಮಾಡಿದೆ. ಇತ್ತೀಚೆಗೆ ದಕ್ಷಿಣ ಕೊರಿಯದ ಅಧ್ಯಕ್ಷರು ಜಪಾನಿ ಭೇಟಿ ಸಂದರ್ಭದಲ್ಲಿ ಕೊರಿಯಾದಲ್ಲಿ ಯುದ್ಧ ಅಪರಾಧಗಳಿಗಾಗಿ ಜಪಾನ್ ಲಿಖಿತ ಒಪ್ಪಂದದ ಭಾಗವಾಗಿ ಕ್ಷಮೆ ಕೇಳಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಕೊನೆಗೆ ಒಪ್ಪಂದದ ಮೊದಲು ಬಾಯ್ದೆರೆಯಾಗಿ ಈ ಕ್ಷಮೆ ಕೇಳಲಾಯಿತು. ಕೊರಿಯಾಕ್ಕೆ ಕೊಟ್ಟಿದ್ದನ್ನು ಚೀಣಾಕ್ಕೆ ಕೊಡಲು ನಿರಾಕರಿಸಿದ ಜಪಾನಿ ಸರ್ಕಾರದ ನಿರ್ಧಾರದ ಹಿಂದೆ ಅಮೆರಿಕದ ಒತ್ತಡ, ಜಪಾನಿನ ಬಲಪಂಥೀಯ ವಿಭಾಗಗಳ ಒತ್ತಡ ಇದೆ ಎನ್ನಲಾಗಿದೆ.

ಜಪಾನ್ ಚೀನಾ ಸೇರಿದಂತೆ ಹೆಚ್ಚಿನ ಎಲ್ಲಾ ದಕ್ಷಿಣ ಪೂರ್ವ ಏಶ್ಯಾದ ದೇಶಗಳ ಜತೆ ಎರಡನೆ ಮಹಾಯುದ್ಧದ ಯುದ್ಧ ಅಪರಾಧಗಳ ಬಗ್ಗೆ ಕ್ಷಮೆ, ಪರಿಹಾರ ನೀಡಿಕೆ ಬಗ್ಗೆ ತೀವ್ರ ವಿವಾದ, ವಿರಸ ಎದುರಿಸುತ್ತಿದೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

## ಯುರೋಪಿಯನ್ ರೈಲು ವ್ಯವಸ್ಥೆ ಖಾಸಗೀಕರಣ ಸಲಹೆ ವಿರೋಧಿಸಿ ಆರು ದೇಶಗಳ ರೈಲ್ವೆ ಕಾರ್ಮಿಕರ ಮುಷ್ಕರ

ಯುರೋಪಿಯನ್ ಕೂಟದ ಸಾರಿಗೆ ಸಚಿವಾಲಯ ಯುರೋಪಿಯನ್ ರೈಲು ವ್ಯವಸ್ಥೆಯ ಕಾಲು ಭಾಗವನ್ನು ಮುಂದಿನ ಕೆಲವು ವರ್ಷಗಳಲ್ಲಿ ಖಾಸಗೀಕರಿಸುವ ಸಲಹೆಗೆ ವಿರೋಧವಾಗಿ ಆರು ದೇಶಗಳ ರೈಲು ಕಾರ್ಮಿಕರು ಮುಷ್ಕರ ಹೂಡಿದರು. ಪ್ರಸ್ತುತ ಯುರೋಪಿಯನ್ ಕೂಟದ ಸಾರಿಗೆ ಮಂತ್ರಿ ಬ್ರಿಟನ್ ಮಾಜಿ ಲೇಬರ್ ಪಾರ್ಟಿ ನಾಯಕ ಕಿನ್ನೊಕ್ ಈ ಸಲಹೆ ಹಿಂದೆ ಥ್ಯಾಚರ್ ಆಂಶಿಕವಾಗಿ ಜಾರಿ ಮಾಡಲು ಪ್ರಯತ್ನಿಸಿದ ರೈಲು ಖಾಸಗೀಕರಣದ ನೀತಿ ಮೇಲೆ ಆಧಾರಿತವಾಗಿದೆ. ಆದರೆ ಆ ನೀತಿಯ ಫಲವಾಗಿ ರೈಲು ಸೇವೆ ಬ್ರಿಟನ್‌ನಲ್ಲಿ ಅಧೋಗತಿಗಿಳಿಯಿತು. ರೈಲು ಸಾರಿಗೆ ಬೆಲೆಗಳು ಏರಿದವು ಎಂಬುದನ್ನು ರೈಲು ಕಾರ್ಮಿಕರು ತೋರಿಸಿದ್ದಾರೆ. ಅಲ್ಲದೆ ಖಾಸಗೀಕರಣದ ರೈಲು ಕಾರ್ಮಿಕರ ದೊಡ್ಡ ವಿಭಾಗ ಉದ್ಯೋಗ ಕಳೆದುಕೊಳ್ಳುವಂತೆ ಮಾಡುತ್ತದೆ ಎಂದು ಅವರ ಆಪಾದನೆ.

ಯುರೋಪಿನಾದ್ಯಂತ ಯಾವುದೇ ವಿಷಯದ ಮೇಲೆ ಮುಷ್ಕರ ಬಹುಶಃ ಇದು ಮೊದಲು.

ಮೆಕ್ಸಿಕೋದ ಚಿಯಾಪಾಸ್‌ನಲ್ಲಿನ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಚಿಯಾಪಾಸ್‌ನ ಝಪಾಟಿಸ್ಟಾ ಪ್ರಭಾವದಿಂದ ಪ್ರದೇಶವೊಂದರಲ್ಲಿ ಚೆಗುವಾರ ಸ್ಫೂರ್ತಿ ಬಿಂಬಿಸುವ ಗೋಡೆಬರಹ



## ಕೆಂಬೋಡಿಯಾ ರಾಜಕೀಯ ಬಿಕ್ಕಟ್ಟು ಪರಿಹಾರ

ಕೆಂಬೋಡಿಯಾದ ರಾಜಕೀಯ ಬಿಕ್ಕಟ್ಟು ಪರಿಹಾರವಾಗಿದೆ - ರಾಜ ನೊರೊದಮ್ ಸಿಹನೌಕ್ ಮಧ್ಯಸ್ಥಿಕೆಯಿಂದ. ಇದೇ ಜುಲೈನಲ್ಲಿ ನಡೆದ ಚುನಾವಣೆಯಲ್ಲಿ ಹನ್‌ಸೆನ್‌ರ ಕೆಂಬೋಡಿಯನ್ ಪೀಪಲ್ಸ್ ಪಾರ್ಟಿಗೆ (ಸಿಸಿಪಿ) ಬಹುಮತ ಬಂದಿದ್ದರೂ, ರಾಜಕುಮಾರ ರಣರಿದ್‌ರ ಫನ್‌ಸಿನ್‌ಪೆಕ್ (Funcinpec) ಪಕ್ಷ ಚುನಾವಣೆ ಫಲಿತಾಂಶವನ್ನು ಒಪ್ಪಿಕೊಂಡಿರಲಿಲ್ಲ. ವಿಶ್ವಸಂಸ್ಥೆ ಮತ್ತು ಇತರ ಅಂತರ್ರಾಷ್ಟ್ರೀಯ ವೀಕ್ಷಕರು ಚುನಾವಣೆ ಶಾಂತಿಯುತ ಮತ್ತು ನ್ಯಾಯಯುತವಾಗಿತ್ತು ಎಂದು ಹೇಳಿದ್ದರೂ, ರಾಜಕುಮಾರ ರಣರಿಧ್ ಇದನ್ನು ಒಪ್ಪಿಕೊಳ್ಳದೆ ಬಿಕ್ಕಟ್ಟು ಸೃಷ್ಟಿಸಿದ್ದರು. ಕೆಂಬೋಡಿಯಾ ಸಂವಿಧಾನದ ಪ್ರಕಾರ ಮೂರನೇ ಎರಡು ಬಹುಮತ ಇಲ್ಲದೆ ಸರ್ಕಾರ ರಚಿಸುವಂತಿಲ್ಲ. ಈ ನಿಯಮದ ದುರ್ಬಳಕೆ ಮಾಡಿ ರಾಜಕುಮಾರ ರಣರಿಧ್ ಮತ್ತು ಇನ್ನೊಬ್ಬ ವಿರೋಧ ಪಕ್ಷದ ನಾಯಕ ಸ್ಯಾಮ್ ರೈನ್ಸಿ ಬಿಕ್ಕಟ್ಟಿಗೆ ಕಾರಣರಾಗಿದ್ದರು. ಈ ಬಿಕ್ಕಟ್ಟನ್ನು 'ಅಂತರ್ರಾಷ್ಟ್ರೀಯ'ಗೊಳಿಸಲು ಪ್ರಯತ್ನಿಸಿದರು. ಆದರೆ ಅಂತರ್ರಾಷ್ಟ್ರೀಯ ಆಸಿಯನ್ ದೇಶಗಳ ಒತ್ತಡ ಮತ್ತು ರಾಜನ ಮಧ್ಯಸ್ಥಿಕೆಯಿಂದ ಬಿಕ್ಕಟ್ಟು ಪರಿಹಾರವಾಗಿದೆ.

ಪ್ರಮುಖ ಪಕ್ಷಗಳಾದ ಸಿಸಿಪಿ ಮತ್ತು ಫನ್‌ಸಿನ್‌ಪೆಕ್ ಜಂಟಿ ಸರ್ಕಾರ ರಚಿಸಿವೆ. ಹನ್‌ಸೆನ್ ಪ್ರಧಾನ ಮಂತ್ರಿಯಾಗಿರುತ್ತಾರೆ. ರಾಜಕುಮಾರ ರಣರಿಧ್ ರಾಷ್ಟ್ರೀಯ ಅಸೆಂಬ್ಲಿಯ ಅಧ್ಯಕ್ಷರಾಗಿರುತ್ತಾರೆ. ಹೊಸ ಮೇಲ್ಮನೆಯನ್ನು ರಚಿಸಲಾಗುತ್ತದೆ. ಅದರ ಅಧ್ಯಕ್ಷರು ಸಿಸಿಪಿಯ ಚಿಯಾಸಿಮ್ ಆಗಿರುತ್ತಾರೆ. ಮಂತ್ರಿಮಂಡಲದ ಖಾತೆ ಹಂಚಿಕೆ ಸಹ ನಿರ್ಧರಿಸಲಾಗಿದೆ. ಆರ್ಥಿಕ ಮತ್ತು ವಿದೇಶಾಂಗ ಸಿಸಿಪಿಗೆ ಸಿಗುತ್ತದೆ. ಗೃಹ ಮತ್ತು ರಕ್ಷಣಾ ಖಾತೆಗೆ ಎರಡೂ ಪಕ್ಷಗಳ ಮಂತ್ರಿಗಳಿರುತ್ತಾರೆ. ನ್ಯಾಯಾಂಗ ಮತ್ತು ಸೂಚನಾ ಮತ್ತು ಪ್ರಸಾರ ಮಂತ್ರಿ ಫನ್‌ಸಿನ್‌ಪೆಕ್‌ನವರಿರುತ್ತಾರೆ.

## ನಾಟೋ ಅಣ್ವಸ್ತ್ರ ಮೊದಲ ಬಳಕೆ ಸನ್ಯಾಸದ ಬಗ್ಗೆ ಜರ್ಮನ್ ಸಲಹೆಗೆ ಅಮೆರಿಕದ ನಕಾರ

ಜರ್ಮನಿಯ ಹೊಸ ಸೋಶಲಿಸ್ಟ್-ಗ್ರೀನ್ ಪಕ್ಷಗಳ ಸರ್ಕಾರ ನಾಟೋ ಮಿಲಿಟರಿ ಕೂಟ ಅಣ್ವಸ್ತ್ರ ಮೊದಲ ಬಳಕೆ ತಾನು ಮಾಡುವುದಿಲ್ಲ ಎಂದು ಘೋಷಿಸಬೇಕು ಎಂದು ಸಲಹೆ ಮಾಡಿದೆ. ಈ ಸಲಹೆ ಬಗ್ಗೆ ಚರ್ಚೆಯನ್ನು ನಾಟೋ ಸಮಿತಿಯಲ್ಲಿ ಎತ್ತುವುದಾಗಿ ಹೇಳಿದೆ. ತಕ್ಷಣ ನಾಟೋದಲ್ಲಿ ಅಮೆರಿಕದ ಪ್ರತಿನಿಧಿ ಅದನ್ನು ತಳ್ಳಿಹಾಕಿ ಅಮೆರಿಕದ ಗೋಸುಂಬೆತನ ಪ್ರದರ್ಶಿಸಿದ್ದಾರೆ. ಶೀತಲ ಸಮರ ಮುಗಿದ ನಂತರದ ಸನ್ನಿವೇಶವು ಅಣ್ವಸ್ತ್ರದ ಮೊದಲ ಬಳಕೆ ಸನ್ಯಾಸ ಸಾಧ್ಯವಾಗಿಸಿದೆ ಎಂದು ಹೊಸ ಜರ್ಮನ್ ಸರ್ಕಾರದ ವಾದ. ಬ್ರಿಟನ್, ಫ್ರಾನ್ಸ್ ಅಮೆರಿಕದ ನಿಲುವನ್ನು ಬೆಂಬಲಿಸಿದೆ. ಆದರೆ ಜರ್ಮನ್ ಈ ವಿಷಯವನ್ನು ನಾಟೋ ಸಮಿತಿಯಲ್ಲಿ ಎತ್ತಲು ನಿರ್ಧರಿಸಿದರೆ ಅದಕ್ಕೆ ಸಾಕಷ್ಟು ಬೆಂಬಲ ಸಿಗಬಹುದು ಎಂಬುದು ಅಮೆರಿಕಕ್ಕೆ ತಲೆನೋವಾಗಿದೆ. ಕನಿಷ್ಟ ಡೆನ್ಮಾರ್ಕ್, ಗ್ರೀಸ್ ಮತ್ತು ಕೆನಡಾಗಳ ಬೆಂಬಲ ಜರ್ಮನಿಗೆ ದೊರಕುತ್ತದೆ ಎನ್ನಲಾಗಿದೆ.

ಜರ್ಮನಿಯ ಸಲಹೆಗೆ ಅಮೆರಿಕನ್ ನಿರಾಕರಣೆ ಸಿಟಿಬಿಟಿ, ಎನ್‌ಪಿಟಿ ಬಗ್ಗೆ ಅದರ ಗೋಮುಖವ್ಯಾಘ್ರ ನೀತಿಯನ್ನು ಇನ್ನೊಮ್ಮೆ ಬಯಲಿಗೆಳೆದಿದೆ.

## ಬ್ಯೂನಸ್ ಏರಿಸ್‌ನಲ್ಲಿ ಮಂದ ಪ್ರಗತಿ

ಎರಡು ವಾರಗಳಷ್ಟು ಕಾಲ 170 ದೇಶದ ಪ್ರತಿನಿಧಿಗಳು ದಿನಗಟ್ಟಲೆ ಚರ್ಚೆ ಮಾಡಿದ ನಂತರವೂ, ಭಾರಿ ಪ್ರಗತಿಯೇನೂ ಕಂಡು ಬಂದಿಲ್ಲ. ಕಳೆದ ವರ್ಷ ಜಪಾನಿನ ಕ್ಯೋಟೋನಲ್ಲಿ ನಡೆದ ಸಮಾವೇಶದ ಮುಂದಿನ ಹಂತವಾಗಿ ದಕ್ಷಿಣ ಅಮೆರಿಕದ ಬ್ಯೂನಸ್ ಏರಿಸ್‌ನಲ್ಲಿ ಈ ಸಮಾವೇಶ ಸೇರಿತ್ತು. ಕ್ರಿ.ಶ. 2000 ವರ್ಷದ ಹೊತ್ತಿಗೆ 'ಜಾಗತಿಕ ತಾಪಮಾನ ಹೆಚ್ಚಳ'ಕ್ಕೆ ಕಾರಣವಾದ ಆರು ಪ್ರಮುಖ ಗ್ಯಾಸ್‌ಗಳ ಪ್ರಮಾಣ ಕಡಿಮೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಸಮಾವೇಶ ನಿರ್ಧರಿಸಿದರೂ, ಒಟ್ಟಾರೆ ಪ್ರಗತಿ ತೀರಾ ಮಂದಗತಿ ಯಿಂದಾಗಿ ಈಗಾಗಲೇ ಆಗಿರುವ ಒಪ್ಪಂದಗಳ ಜಾರಿ ಬಗ್ಗೆ ಭರವಸೆ ಸಹ ಕಾಣಲಿಲ್ಲ. ಕೆಲವು ಬಾರಿ ಪುನಃ ಹಿಂದಿನ ಚರ್ವಿತಚರ್ವಣ ಚರ್ಚೆಯಾಯಿತು ಅಷ್ಟೆ. ಯಥಾಪ್ರಕಾರ ಅಮೆರಿಕದ ನಾಯಕತ್ವದ ಎಲ್ಲಾ ಅಭಿವೃದ್ಧ ದೇಶಗಳು ತಮ್ಮ ಬಾಧ್ಯತೆಗಳಿಂದ ಜಾರಿಕೊಳ್ಳಲು ಪ್ರಯತ್ನಿಸಿದವು.

ಅರ್ಜೆಂಟಿನಾ ಮತ್ತು ಮೂರು ಇತರ ಆಫ್ರಿಕಾ, ದಕ್ಷಿಣ ಅಮೆರಿಕದ ಅಭಿವೃದ್ಧಿಶೀಲ ದೇಶಗಳು ಸ್ವಯಂಸ್ಫೂರ್ತವಾಗಿ(?!) ತಾವು ಈ ಗ್ಯಾಸ್‌ಗಳ ಕಡಿತ ಮಾಡುವುದಾಗಿ ಕಡಿಮೆ ಮಾಡಿ, ಈವರೆಗಿದ್ದ ಮೂರನೇ ಜಗತ್ತಿನ G-77ದೇಶಗಳ ಐಕ್ಯತೆ ಮುರಿದವು. ಈವರೆಗೆ G-77 ದೇಶಗಳು 'ಜಾಗತಿಕ ತಾಪಮಾನ ಏರಿಕೆ'ಗೆ ಕಾರಣವಾದ ಗ್ಯಾಸ್‌ಗಳ ಬಿಡುಗಡೆಯಲ್ಲಿ ಸಿಂಹಪಾಲಿಗೆ ಕಾರಣರಾದ ಅಭಿವೃದ್ಧಿ ದೇಶಗಳು ತಮ್ಮ ಕಡಿತ ಜಾರಿ ಮಾಡುವ ವರೆಗೆ, ತಾವು ಯಾವುದೇ ಕಡಿತಕ್ಕೆ ಒಪ್ಪಿ ಕೊಳ್ಳುವುದಿಲ್ಲ ಎಂಬುದು ನೀತಿಯಾಗಿತ್ತು.

ಗ್ಯಾಸ್ ಉಗುಳುವಿಕೆ ಕಡಿಮೆ ಮಾಡುವಲ್ಲಿ ಮಾರುಕಟ್ಟೆ ಆಧಾರಿತ ಕ್ರಮಗಳ ಬಗ್ಗೆ ಪುನಃ ತೀವ್ರ ಚರ್ಚೆ ನಡೆಯಿತು. ಕ್ಯೋಟೋದಲ್ಲಿ ಒಪ್ಪಿತವಾದ ನೀತಿ ಇದು. ಆದರೂ ಪುನಃ ವಿವಾದಕ್ಕೊಳಗಾಯಿತು. ಮೂರನೇ ಜಗತ್ತಿನ ದೇಶಗಳಲ್ಲಿ ಗ್ಯಾಸ್ ಉಗುಳುವಿಕೆ ಕಡಿಮೆ ಮಾಡುವ ಮೂಲಕ, ತಮ್ಮ ದೇಶದಲ್ಲಿ ಗ್ಯಾಸ್ ಉಗುಳುವಿಕೆ ಕಡಿತದ ಗುರಿ ಕಡಿಮೆ ಮಾಡಿಕೊಳ್ಳುವ ನೀತಿಗೆ ತೀವ್ರ ವಿರೋಧ ಬಂತು. ಅಲ್ಲದೆ 'ಗ್ಯಾಸ್ ಉಗುಳುವಿಕೆ ಕಡಿತ' ವನ್ನು ಮಾರುವ-ಕೊಳ್ಳುವ ಪದ್ಧತಿ ಬಗೆಗೂ ತೀವ್ರ ವಿರೋಧ ಬಂತು. ಇಂತಹ ಮಾರುಕಟ್ಟೆ ನೀತಿಗಳು ಗ್ಯಾಸ್ ಉಗುಳುವಿಕೆ ಕಡಿತದ ಒಟ್ಟಾರೆ ಕಾರ್ಯಕ್ರಮಕ್ಕೆ ಧಕ್ಕೆ ತರುತ್ತವೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಗ್ಯಾಸ್ ಉಗುಳುವಿಕೆ ಕಡಿತದ ಗುರಿ ಬಗ್ಗೆ ಇಷ್ಟು ಚರ್ಚೆಯಾಗಿ ಅದನ್ನು ಜಾರಿ ಮಾಡುವುದನ್ನು ಮೇಲ್ವಿಚಾರಣೆ ಮಾಡುವುದು ಹೇಗೆ? ಅದನ್ನು ಉಲ್ಲಂಘಿಸಿದವರಿಗೆ ಏನು ಶಿಕ್ಷೆ? ಹೇಗೆ ಶಿಕ್ಷೆ ಇತ್ಯಾದಿ ಸಮಸ್ಯೆಗಳು ಹಾಗೇ ಉಳಿದಿವೆ.

## ಬಳ್ಳಾರಿ ಜಿಲ್ಲಾ ರೈತ ಸಮಾವೇಶ

ಪುಟ 6 ರಿಂದ

ವಂತೆ ಜಿಲ್ಲಾ ಸಮಿತಿಯ ಸಹ ಕಾರ್ಯದರ್ಶಿ ಪಿ.ಆರ್ ವೆಂಕಟೇಶ್ ಸಮಾವೇಶದ ಪ್ರತಿನಿಧಿಗಳನ್ನು ವಿನಂತಿಸಿದರು ಹಾಗೂ ಅತಿವೃಷ್ಟಿ ಬೆಳೆಹಾನಿಗೆ ಸಂಬಂಧಿಸಿದ ಮಂಡಿಸಿದ ನಿರ್ಣಯವನ್ನು ಕಾಂ|| ವಿ.ಎಸ್. ಶಿವಶಂಕರ್ ರವರು ಅನೋಮೋದಿಸಿದರು. ಸಮಾವೇಶವು ರಸ್ತೆಗಳ ಸುಧಾರಣೆಗಾಗಿ ಸಿಪಿಐ(ಎಂ) ಪಕ್ಷದ ನಡೆಸಿದ ಮುಖಂಡತ್ವದಲ್ಲಿ ನಡೆಯುತ್ತಿರುವ ಹೋರಾಟವನ್ನು ಬೆಂಬಲಿಸುವ ನಿರ್ಣಯವನ್ನು ಅನುಮೋದಿಸಲಾಯ್ತು.

ನಂತರ ನಗರದ ಪ್ರಮುಖ ಬೀದಿಗಳಲ್ಲಿ ರೈತ ಕೂಲಿಗಾರರು ಕೆಂಬಾವುಟಗಳನ್ನು ಹಿಡಿದು ಮೆರವಣಿಗೆಯನ್ನು ನಡೆಸಿ ರೈತರ ಅತಿವೃಷ್ಟಿ ಹಾನಿಗೆ ಹೆಚ್ಚು ಪರಿಹಾರ ಒದಗಿಸಬೇಕೆಂದು ಒತ್ತಾಯಿಸುವ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು.

## ಬೀಡಿ ಕಾರ್ಮಿಕರ ಪ್ರತಿಭಟನಾ ಪ್ರದರ್ಶನ

**ಉಡುಪಿ:-** ಬೀಡಿ ಕಾರ್ಮಿಕರಿಗೆ ವಾರದಲ್ಲಿ 6 ದಿನಗಳ ಕೆಲಸ ಉತ್ತಮ ಎಲೆಗಳನ್ನು ಒದಗಿಸುವಂತೆ ನ್ಯಾಯಬದ್ಧವಾದ ಎಲೆ ಎವರೇಜು ನಿರ್ಧರಿಸುವಂತೆ ಮತ್ತು ಎಲ್ಲಾ ಕಾರ್ಮಿಕರಿಗೂ ಲೋಗ್ ಪುಸ್ತಕ ಕೊಡುವಂತೆ ಒತ್ತಾಯಿಸಿ ಸಿಐಟಿಯು ಸಂಘಟನೆಗೆ ಸೇರಿದ ನೂರಾರು ಬೀಡಿ ಕಾರ್ಮಿಕರು ನವೆಂಬರ್ 20 ರಂದು ಉಡುಪಿಯ ಭಾರತ್ ಬೀಡಿ ಕಂಪೆನಿ ಮತ್ತು ಸೌತ್ ಕೆನರಾ ಹೋಮ್ ಇಂಡಸ್ಟ್ರೀಸ್ ಮುಂದೆ ಪ್ರತಿಭಟನಾ ಧರಣೆ ಮುಷ್ಕರ ನಡೆಸಿದರು.

ಬೀಡಿ ಎಂಡ್ ಟೊಬೆಕೊ ಲೇಬರ್ ಯೂನಿಯನ್ (ಸಿ.ಐ.ಟಿ.ಯು) ಪ್ರಧಾನ ಕಾರ್ಯದರ್ಶಿ ಎನ್. ಸಾಧು ಅಮೀನ್ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ ಸೌತ್ ಕೆನರಾ ಹೋಮ್ ಇಂಡಸ್ಟ್ರೀಸ್‌ನಲ್ಲಿ ಕಳೆದ 3-4 ವರ್ಷಗಳಿಂದ ವಾರದಲ್ಲಿ ಮೂರು ದಿನ ಮಾತ್ರ ಕೆಲಸ ಕೊಡುತ್ತಿದ್ದಾರೆ, ಕೆಟ್ಟ ಎಲೆಗಳನ್ನು ಕೊಟ್ಟು ಅದರಲ್ಲಿ ಮಾಲಿಕರ ಎವರೇಜು ಹಾಗೂ ಕಂಟ್ರಾಕ್ಟು ದಾರರ ಎವರೇಜು ಲೆಕ್ಕದಲ್ಲಿ ಪ್ರತೀವಾರ 20 ರೂಪಾಯಿಯಷ್ಟು ದಂಡ ವಸೂಲು ಮಾಡುತ್ತಾರೆ ಎಂದರು. ಕಾರ್ಮಿಕರು ದುಡಿದು ಸರಿಯಾದ ವೇತನ ಪಡೆಯುವ ಬದಲು ವೇತನದ ಒಂದು ಪಾಲು ದಂಡವಾಗಿ ಕೊಡಬೇಕಾಗಿದೆ. ಈ ರೀತಿ ಕಾರ್ಮಿಕರನ್ನು ದೋಚುವ ವ್ಯವಸ್ಥೆ ನಿಲ್ಲಬೇಕು ಎಂದು ಹೇಳಿದರು. ಕಾರ್ಮಿಕರನ್ನು ಉದ್ದೇಶಿಸಿ ಮಲ್ಪೆ ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ದೋಗು ಸುವರ್ಣ ಮತ್ತು ಗುರುವ ಪೂಜಾರಿ ಮಾತಾಡಿದರು.

**ಬಂಟ್ವಾಳ :** ಬೀಡಿ ಕೈಗಾರಿಕೆಯಲ್ಲಿ ದುಡಿಯುತ್ತಿ ರುವ ಕಾರ್ಮಿಕರಿಗೆ ವಾರದಲ್ಲಿ 3-4 ದಿನಗಳ ಕೆಲಸಗಳನ್ನು ನೀಡಿ ಉಪವಾಸಕ್ಕೆ ನೂಕುತ್ತಿರುವ ಹಾಗೂ ಕಾನೂನು ಬಾಹಿರವಾಗಿ ಲಾಗ್ ಪುಸ್ತಕ ನೀಡದೆ ದುಡಿಸುತ್ತಿರುವ ಮಾಲಿಕರ ಕಾರ್ಮಿಕರ- ವಿರೋಧ ನೀತಿಯನ್ನು ಪ್ರತಿಭಟಿಸಿ ನವೆಂಬರ್ 20 ರಂದು ಬಂಟ್ವಾಳ, ಪಾಣೆ ಮಂಗಳೂರು. ವಿಟ್ಲಗಳಲ್ಲಿ ಸಾವಿರಾರು ಮಹಿಳಾ ಕಾರ್ಮಿಕರು ಪ್ರತಿಭಟನಾ ಪ್ರದರ್ಶನ ನಡೆಸಿ ಬೀಡಿ ಡಿಪೋಗಳಲ್ಲಿ ಧರಣೆ ನಡೆಸಿದರು.

ವಾರದಲ್ಲಿ ಆರು ದಿನಗಳಲ್ಲೂ ಕೆಲಸ ಕೊಡಬೇಕೆಂದೂ, ಕೆಲಸ ಇಲ್ಲದ ದಿನಗಳಿಗೆ ಪರಿಹಾರ ಒದಗಿಸಬೇಕೆಂದೂ, ಲಾಗ್ ಪುಸ್ತಕ ಇಲ್ಲದ ನೋಟ್ ಪುಸ್ತಕ ನೀಡಿ ಕಾರ್ಮಿಕರನ್ನು ದುಡಿಸುವುದು ನಿಲ್ಲಿಸಬೇಕೆಂದು, ಎಲೆ ಕತ್ತರಿಸಿ ಎವರೇಜ್ ನಿಗದಿ ಪಡಿಸಬೇಕೆಂಬುದರ ಬಗ್ಗೆ ಮಾಲಕರೊಂದಿಗೆ ಮಾತುಕತೆ ನಡೆಸಲಾಯಿತು.

ಬಂಟ್ವಾಳ, ಪಾಣೆಮಂಗಳೂರು, ವಿಟ್ಲಗಳಲ್ಲಿ ಚಳುವಳಿಗಾರರನ್ನು ಉದ್ದೇಶಿಸಿ ಮಾತನಾಡಿದ ಬೀಡಿ ಕೆಲಸಗಾರರ ಸಂಘ (ಸಿಐಟಿಯು)ದ ಬಂಟ್ವಾಳ ತಾಲೂಕಿನ ಅಧ್ಯಕ್ಷ ಬಿ. ವಾಸು ಗಟ್ಟಿಯವರು ಬೀಡಿ ಮಾಲಕರು ಮತ್ತು ಕಂಟ್ರಾಕ್ಟರರ ಕಾರ್ಮಿಕ ವಿರೋಧಿ ನೀತಿಯನ್ನು ಬಯಲಿಗೆಳೆದು ಕೇಂದ್ರ ಸರ್ಕಾರದ ನೀತಿಯಿಂದ ಕೈಗಾರಿಕೆಯು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ತಿಳಿಸಿದರು.

ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಡಿಸೆಂಬರ್ 11 ರಂದು ನಡೆಸಲು ಉದ್ದೇಶಿಸಿರುವ ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು

## ಕಾವಿಪಡೆಗಳ ಢೋಂಗಿ ರಾಷ್ಟ್ರಭಕ್ತಿಗೆ ಸಾಕ್ಷಿ

# ನೋಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್‌ರ ಬದಲು ಜೋಶಿಯವರ ಭಾಷಣ!

ತಾವು ಮಾತ್ರವೇ ರಾಷ್ಟ್ರಭಕ್ತರು ಎನ್ನುವುದು ಸಂಘ ಪರಿವಾರದ ಪ್ರಚಾರದ ಒಂದು ಮುಖ್ಯ ಅಂಶ. ಇದನ್ನು ಹಲವರು ನಂಬಿದ್ದಾರೆ ಕೂಡಾ. ಆದರೆ ಹಲವು ಬಾರಿ ಈ ಪ್ರಚಾರದ ಪೊಳ್ಳುತನ ಬಯಲಾಗಿದೆ. ಇತ್ತೀಚೆಗೆ ಮತ್ತೊಮ್ಮೆ ಇದು ಬಯಲಾಗಿದೆ. ಜತೆಗೆ ಈ 'ಪರಿವಾರ'ದ ನಿಜವಾದ ವರ್ಗ ಸ್ವಭಾವ ಮತ್ತೊಮ್ಮೆ ಬಯಲಿಗೆ ಬಂದಿದೆ.


ಇತ್ತೀಚೆಗೆ ಭಾರತೀಯರಾದ ಪ್ರೊ. ಅಮರ್ತ್ಯಸೇನ್‌ರವರಿಗೆ ಅರ್ಥಶಾಸ್ತ್ರದ ನೋಬೆಲ್ ಪ್ರಶಸ್ತಿ ಸಿಕ್ಕಾಗ ದೇಶಬಾಂಧವರಿಗೆಲ್ಲಾ ಬಹಳ ಸಂತೋಷವಾಯಿತು. ಆದರೆ ಈ ಕಾವಿಪಡೆಗಳವರಿಗೆ ಆಗಲಿಲ್ಲ. ಅವರ ವಿರುದ್ಧ ಅಪಪ್ರಚಾರವನ್ನೇ ಆರಂಭಿಸಿದರು. ಇದಕ್ಕೆ ಒಂದು ಕಾರಣ ಆರ್ಥಿಕ ವಿಷಯಗಳನ್ನು ಕುರಿತಂತೆ ಪ್ರೊ. ಸೇನ್‌ರವರ ಹಲವು ವಿಚಾರಗಳು ಬಲಪಂಥೀಯ ಜನ-ವಿರೋಧಿ ನಿಲುವಿನ ಸಂಘ ಪರಿವಾರಕ್ಕೆ ಹಿಡಿಸುತ್ತಿಲ್ಲ. ಎರಡನೆಯದಾಗಿ, ಜಾತ್ಯಾತೀತತೆ ಬಗ್ಗೆ, ಭಾರತದ ಬಹುಮುಖಿ ಸಂಸ್ಕೃತಿಯ ಬಗ್ಗೆ ಅವರ ನಿಲುವುಗಳು ಕಾವಿಪಡೆಗಳ ನಿಲುವಿಗೆ ತದ್ವಿರುದ್ಧವಾದವುಗಳು. ಬಾಬ್ರಿ ಮಸೀದಿ ಧ್ವಂಸದ ಹೀನಕೃತ್ಯಗಳನ್ನು ಅವರು ತಕ್ಷಣವೇ ಬಲವಾಗಿ ಖಂಡಿಸಿದ್ದರು.

ಈ ಕಾವಿಪಡೆಗಳ ಮಂದಿ ಎಷ್ಟು ಸಂಕುಚಿತ ಬುದ್ಧಿಯುವರು ಎಂದು ಇತ್ತೀಚೆಗೆ ಮತ್ತೆ ಸ್ಪಷ್ಟಗೊಳಿಸಿದ್ದಾರೆ. ಸಿಮ್ಲಾದ ಭಾರತೀಯ ಉನ್ನತ ಅಧ್ಯಯನ ಸಂಸ್ಥೆಯ ವಾರ್ಷಿಕ ಕಾರ್ಯಕ್ರಮದಲ್ಲಿನ ಒಂದು ಮುಖ್ಯ ಅಂಶವೆಂದರೆ ರಾಧಾಕೃಷ್ಣನ್ ಸ್ಮಾರಕ ಭಾಷಣ. ವಿಶ್ವದ ಪ್ರತಿಷ್ಠಿತ ಬುದ್ಧಿಜೀವಿಗಳನ್ನು ಈ ಭಾಷಣ ಮಾಡಲು ಆಹ್ವಾನಿಸಲಾಗುತ್ತದೆ. 1999 ರ ಭಾಷಣಕ್ಕೆ ಪ್ರೊ. ಅಮರ್ತ್ಯಸೇನ್‌ರವರನ್ನು ಆಹ್ವಾನಿಸಲಾಗಿದ್ದು, ಪ್ರೊ. ಸೇನ್ ಅದಕ್ಕೆ ಒಪ್ಪಿಗೆ ಕೂಡಾ ಸೂಚಿಸಿದ್ದರು. ಆದರೆ ಈಗ ಆ ಆಹ್ವಾನವನ್ನು ರದ್ದುಪಡಿಸಲಾಗಿದೆ.

ಬಿಜೆಪಿ ನೇತೃತ್ವದ ಸರಕಾರ ಬಂದ ಕೂಡಲೇ ಕಾವಿಪಡೆಗಳ ಬಚ್ಚಿಟ್ಟ ಅಜೆಂಡಾವನ್ನು ಜಾರಿಗೆ ತರುವ ಪ್ರಯತ್ನದ ಭಾಗವಾಗಿ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ ಮತ್ತಿತರ ಸಂಶೋಧನಾ, ಅಧ್ಯಯನ ಸಂಸ್ಥೆಗಳ ಆಡಳಿತ ಮಂಡಳಿಗಳನ್ನು ಬೇಕಾಬಿಟ್ಟಿಯಾಗಿ ಬದಲಿಸಿ ಅದರಲ್ಲಿ ತಮ್ಮ ಹಿಂಬಾಲಕರನ್ನು ತೂರಿಸುತ್ತಿರುವುದು ನಮ್ಮ ಓದುಗರಿಗೆ ತಿಳಿದಿದೆ. ಇಂತಹ ಸಂಸ್ಥೆಗಳ ಪಟ್ಟಿಯಲ್ಲಿ ಸಿಮ್ಲಾದ ಈ ಸಂಸ್ಥೆಯೂ ಸೇರಿದೆ. ಇತ್ತೀಚೆಗೆ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಈ ಸಂಸ್ಥೆಯ ಆಡಳಿತ ಮಂಡಳಿಯನ್ನು ಪುನರ್ರಚಿಸಿ ಪ್ರೊ. ಜಿ.ಸಿ.ಪಾಂಡೆ ಎಂಬ ಅಲಹಾಬಾದಿನ ಇತಿಹಾಸಕಾರರನ್ನು ಅದರ ಅಧ್ಯಕ್ಷರಾಗಿ ನೇಮಿಸಲಾಯಿತು - ಈತ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿ ಮುರಳಿ ಮನೋಹರ ಜೋಶಿಯವರ ಆಪ್ತಮಿತ್ರ ಎನ್ನುವುದೇ ಅವರಿಗಿರುವ ಮುಖ್ಯ ಅರ್ಹತೆ ಎಂದು ಹೇಳಲಾಗುತ್ತಿದೆ. ಈ ಹೊಸ ಆಡಳಿತ ಮಂಡಳಿ ಮಾಡಿದ ಮೊದಲ ಕೆಲಸವೆಂದರೆ ಪ್ರೊ. ಅಮರ್ತ್ಯಸೇನ್‌ರವರಿಗೆ ನೀಡಿದ ಆಹ್ವಾನವನ್ನು ರದ್ದು ಪಡಿಸಿದ್ದು. ಅಷ್ಟೇ ಅಲ್ಲ, ಅವರ ಜಾಗದಲ್ಲಿ ಸ್ವತಃ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿ ಮುರಳಿ ಮನೋಹರ ಜೋಶಿಯವರನ್ನೇ ರಾಧಾಕೃಷ್ಣನ್ ಸ್ಮಾರಕ ಭಾಷಣ ಮಾಡಲು ಆಹ್ವಾನಿಸಿದ್ದು. ಸಂಸ್ಥೆಯ ಫೆಲೋಶಿಪ್ ಪಡೆದವರು, ಇತರ ಸಿಬ್ಬಂದಿ ಇದರಿಂದ ಅವಾಕ್ಕಾದರು. ಕೆಲವರು ಪ್ರತಿಭಟನೆಯನ್ನೂ ಸಲ್ಲಿಸಿದರು.

ಇಷ್ಟೇ ಅಲ್ಲ, 1999-2000 ವರ್ಷದ ಫೆಲೋಶಿಪ್‌ಗಳನ್ನು ನೀಡುವಲ್ಲಿಯೂ ಆಡಳಿತ ಮಂಡಳಿ ಮೂಗು ತೂರಿಸಿದೆ. ಈ ಸಂಸ್ಥೆಯ ಪರಂಪರೆಯಲ್ಲಿ ಈ ರೀತಿ ಆಡಳಿತ ಮಂಡಳಿ ಇಂತಹ ವಿಷಯಗಳಲ್ಲಿ ಮಧ್ಯಪ್ರವೇಶಿಸುತ್ತಿರಲಿಲ್ಲ. ಬಿಜೆಪಿ ಹಿಂಬಾಲಕರನ್ನು ತೂರಿಸುವುದೇ ಇದರ ಮುಖ್ಯ ಉದ್ದೇಶ ಎಂಬುದು ಸ್ಪಷ್ಟ. ಇದು ಇಡೀ ಸಂಸ್ಥೆಯಲ್ಲಿ ಅಸಂತೃಪ್ತಿಯ, ಬೇಸರದ ವಾತಾವರಣವನ್ನು ಉಂಟು ಮಾಡಿದೆ.

## ಸಿಪಿಐ(ಎಂ) ಬಂಗಾಳಿ ದೈನಿಕ 'ಗಣಶಕ್ತಿ' ಯ ಇಂಟರ್‌ನೆಟ್ ಆವೃತ್ತಿ ಆರಂಭ



'ಗಣಶಕ್ತಿ ಆನ್‌ಲೈನ್'- ಬಂಗಾಳಿ ದೈನಿಕ 'ಗಣಶಕ್ತಿ'ಯ ಇಂಟರ್‌ನೆಟ್ ಆವೃತ್ತಿಯನ್ನು ನವೆಂಬರ್ 16 ರಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸುರವರು ಉದ್ಘಾಟಿಸಿದರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಈ ವೆಬ್‌ಸೈಟಿನಲ್ಲಿ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಮುಖಂಡರ ಚಿತ್ರ ಗ್ಯಾಲರಿಯನ್ನು ಉದ್ಘಾಟಿಸಿದರು.

'ಗಣಶಕ್ತಿ' ಸಿಪಿಐ(ಎಂ)ನ ಪಶ್ಚಿಮ ಬಂಗಾಳದ ರಾಜ್ಯ ಸಮಿತಿಯ ದೈನಿಕ, ಇದರ ಇಂಟರ್‌ನೆಟ್ ಆವೃತ್ತಿ ಇನ್ನು ಮುಂದೆ ಪ್ರತಿ ಸೋಮವಾರ ಪ್ರಕಟವಾಗುತ್ತದೆ. ಇಂಗ್ಲೀಷ್‌ನಲ್ಲಿರುವ ಈ ಆವೃತ್ತಿಯಲ್ಲಿ ಸುದ್ದಿಗಳು, ಆರ್ಥಿಕ ತಜ್ಞರ ವಿಶ್ಲೇಷಣೆ, ಎಡರಂಗ ಸರಕಾರದ ಅನುಭವ, ಉದ್ಯಮ-ವಾಣಿಜ್ಯ, ವಿಜ್ಞಾನ-ತಂತ್ರಜ್ಞಾನ, ಕಮ್ಯುನಿಸ್ಟ್ ಆಂದೋಲನದ ದಸ್ತಾವೇಜುಗಳು, ಪ್ರಸಕ್ತ ಆಗುಹೋಗುಗಳು, ವಿಶೇಷ ಫೀಚರ್‌ಗಳು ಇತ್ಯಾದಿಗಳು ಇರುತ್ತವೆ ಎಂದು ಹೇಳಲಾಗಿದೆ.

ಮೊದಲ ಸಂಚಿಕೆಯಲ್ಲಿ ಬೆಲೆಯೇರಿಕೆಗೆ ರಾಷ್ಟ್ರವ್ಯಾಪಿ ಪ್ರತಿಭಟನೆಗಳು, ನಾಲ್ಕು ರಾಜ್ಯಗಳಲ್ಲಿ ಚುನಾವಣೆಗಳಲ್ಲಿ ಬಿಜೆಪಿಯ ಹತಾಶೆ, ಪಶ್ಚಿಮ ಬಂಗಾಳದಲ್ಲಿ ವಿಕೇಂದ್ರೀಕರಣದ ಅನುಭವದ ಬಗ್ಗೆ ಒಂದು ವಿಶೇಷ ಲೇಖನ, ಪೋಖ್ರಾನ್ ಸ್ಫೋಟವನ್ನು ವಿರೋಧಿಸಿದ ವಿಜ್ಞಾನಿಗೆ ಶಿಕ್ಷೆ ವಿಧಿಸುವ ಕ್ರಮಕ್ಕೆ ಪ್ರತಿಭಟನೆ, ಬಕ್ರೇಶ್ವರ್ ಯೋಜನೆಯ ಕನಸು ನನಸಾಗಿಸುವ ಸಂದರ್ಭ ಇತ್ಯಾದಿಗಳು ಇವೆ.

'ಗಣಶಕ್ತಿ' ಬಂಗಾಳಿ ಪತ್ರಿಕೆ ಆರಂಭವಾದದ್ದು 1967 ರಲ್ಲಿ. ಇದಕ್ಕೆ ಮೊದಲು ಕಮ್ಯುನಿಸ್ಟ್ ಪಕ್ಷದ ಬಂಗಾಳೀ ದೈನಿಕವಾಗಿದ್ದ 'ಸ್ವಾಧೀನತಾ'ವನ್ನು ಮೇ 1945ರಿಂದ ನಾಲ್ಕು ವರ್ಷ, ನಂತರ 1962-63 ರಲ್ಲಿ ಚೀಣಾ ಯುದ್ಧದ ಸಂದರ್ಭದಲ್ಲಿ ನಿಷೇಧಿಸಲಾಗಿತ್ತು.

ಕಮ್ಯುನಿಸ್ಟ್ ಪಕ್ಷದೊಳಗಿನ ತೀವ್ರ ಸೈದ್ಧಾಂತಿಕ ಸಮರದಿಂದಾಗಿ ಈ ಪತ್ರಿಕೆಯನ್ನು ಮತ್ತೆ ಪ್ರಾರಂಭಿಸಲಾಗಲಿಲ್ಲ. ಪಕ್ಷದ ವಿಭಜನೆಯ ನಂತರ 1967 ರಲ್ಲಿ ಪಾಕ್ಷಿಕ ಪತ್ರಿಕೆಯಾಗಿ ಆರಂಭವಾದ ಅದು 1969 ಡಿಸೆಂಬರ್‌ನಲ್ಲಿ ಸಂಜೆ ದೈನಿಕವಾಯಿತು. 1972 ರಿಂದ 77 ರ ನಡುವೆ ಪಶ್ಚಿಮ ಬಂಗಾಳ ಕಂಡ ಅರೆ-ಫ್ಯಾಸಿಸ್ಟ್ ಧಾಳಿಯನ್ನೆದುರಿಸಿ ಪುಟಗೊಂಡ ಇದು ಮೇ 1, 1986ರಿಂದ ಮುಂಜಾನೆಯ ದೈನಿಕವಾಗಿ ಈಗ 10 ಲಕ್ಷ ಪ್ರಸಾರ ಹೊಂದಿದೆ. ನವೆಂಬರ್ 16 ರಿಂದ ಇಂಗ್ಲೀಷ್ ಭಾಷೆಯ ಇಂಟರ್‌ನೆಟ್ ಆವೃತ್ತಿಯೊಂದಿಗೆ ಅದೀಗ ಹೊಸ ಘಟ್ಟ ತಲುಪಿದೆ.

## "ನಾಲ್ಕು ತಿಂಗಳಾದರು ಬಿಜೆಪಿ ಸರಕಾರ ವಚನವನ್ನು ಈಡೇರಿಸಿಲ್ಲ" ಪ್ರಧಾನಿಗಳಿಗೆ ಅಂಚೆ ನೌಕರರ ಮನವಿ

ನವೆಂಬರ್ 18 ರಂದು ಅಂಚೆ ನೌಕರರ ರಾಷ್ಟ್ರೀಯ ಒಕ್ಕೂಟ ಹಾಗೂ ರಾಷ್ಟ್ರೀಯ ಅಂಚೆ ಸಂಘಟನೆಗಳ ಒಕ್ಕೂಟ ಜಂಟಿಯಾಗಿ ಪ್ರಧಾನಮಂತ್ರಿಗಳಿಗೆ ಒಂದು ಮನವಿ ಪತ್ರ ಸಲ್ಲಿಸಿ ಪ್ರಧಾನಿಗಳ ಮಧ್ಯ ಪ್ರವೇಶದಿಂದ ಅಂಚೆ ನೌಕರರು ತಮ್ಮ ದೇಶ ವ್ಯಾಪಿ ಎಂಟು ದಿನಗಳ ಮುಷ್ಕರ ವನ್ನು ಹಿಂತೆಗೆದುಕೊಂಡಿದ್ದರೂ ಸರಕಾರ ತನ್ನ ವಚನವನ್ನು ಪಾಲಿಸಿಲ್ಲ ಎಂದು ನೆನಪಿಸಿವೆ. ಸಂಸತ್ತಿನಲ್ಲಿ ನಿಮ್ಮ ಮಧ್ಯ ಪ್ರವೇಶ ಹಾಗೂ ಪ್ರಕಟಣೆಯ ಮೇರೆಗೆ ಪ್ರಸಾರ ಇಲಾಖೆಯ ಮಂತ್ರಿಗಳೊಂದಿಗೆ ಚರ್ಚೆ ನಡೆದಾಗ ಅವರು ಆಗಸ್ಟ್ 31 ರೊಳಗೆ ಸಮಸ್ಯೆಗಳನ್ನು ಇತ್ಯರ್ಥ ಮಾಡು ವುದಾಗಿ ಹೇಳಿದರು. ಆದರೆ ಈಗ ನಾಲ್ಕು ತಿಂಗಳಾದರೂ ಈ ಯಾವೊಂದು ಪ್ರಶ್ನೆಯ ಬಗ್ಗೆಯೂ ಇತ್ಯರ್ಥವಾಗಿಲ್ಲ, ಇದರಿಂದ ನೌಕರರಲ್ಲಿ ಗಂಭೀರ ಅತೃಪ್ತಿ, ಸಿಟ್ಟು ಉಂಟಾಗಿದೆ' ಎಂದು ಈ ಮನವಿ ಪತ್ರ ನೆನಪಿಸಿದೆ.

ಸರಕಾರ ನೀಡಿದ ವಚನದ ಆಧಾರದ ಮೇಲೆ ಮುಷ್ಕರವನ್ನು ಹಿಂತೆಗೆದುಕೊಂಡಿರುವ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಿ ಸರಕಾರ ತನ್ನ ವಚನ ಪಾಲಿಸುವಂತಾಗಬೇಕು, ಇಲ್ಲವಾದರೆ, ಅಂಚೆ ನೌಕರರು ಕೈಗಾರಿಗಾ ಕಾರ್ಯಾಚರಣೆಗೆ ಇಳಿಯದೆ ಬೇರೆ ದಾರಿಯಿಲ್ಲವಾಗುತ್ತದೆ ಎಂದು 6 ಲಕ್ಷ ಅಂಚೆ ನೌಕರರ ಪರವಾಗಿ ಸಲ್ಲಿಸಿದ ಈ ಮನವಿ ಪತ್ರ ಎಚ್ಚರಿಸಿದೆ. ಪ್ರಧಾನಿಗಳು ಈ ಇಲಾಖೆಯ ಶಾಂತಿ ಕಾಪಾಡುವಂತಾಗಲು ಸರಕಾರ ತನ್ನ ವಚನ ಪಾಲಿಸುವಂತೆ ಮಾಡುತ್ತಾರೆ ಎಂದು ಈ ಮನವಿ ಪತ್ರ ಆಶಿಸಿದೆ.


## ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಾಜವಾದ ರಕ್ಷಿಸಲು ವಕೀಲರ ರಾಜ್ಯ ಸಮ್ಮೇಳನದ ಕರೆ

ಭಾರತದ ಸಂವಿಧಾನದ ಮೂಲಭೂತ ಆಶಯಗಳಾದ ಸಂಸದೀಯ ಹಾಗೂ ಒಕ್ಕೂಟ ಪದ್ಧತಿಯ ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಾಜವಾದ ರಕ್ಷಿಸಲು ಬೆಂಗಳೂರಿನ ಯೂತ್ ಸೆಂಟರ್‌ನ ಸಭಾಂಗಣದಲ್ಲಿ ತಾ. 14.11.98 ರಂದು ನಡೆದ ರಾಜ್ಯ ವಕೀಲರ ನಾಲ್ಕನೇ ಸಮ್ಮೇಳನ ಒಕ್ಕೊರಲಿನ ಕರೆ ನೀಡಿತು. ಇತ್ತೀಚೆಗೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಶಾಲಾ ಶಿಕ್ಷಣದಲ್ಲಿ ಸಂಸ್ಕೃತ ಕಡ್ಡಾಯ ಗೊಳಿಸುವ ಮತ್ತು ವೇದ ಉಪನಿಷತ್ತುಗಳ ಕಲಿಕೆಯನ್ನು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಪ್ರಸ್ತಾಪಿಸಿರುವುದನ್ನು, ಅಧ್ಯಕ್ಷೀಯ ಮಾದರಿ ಪ್ರಭುತ್ವ ಸ್ಥಾಪಿಸಲು ಸಂವಿಧಾನವನ್ನು ಪುನರ್ ವಿಮರ್ಶಿಸಬೇಕೆಂದು ವಾದಿಸುತ್ತಿರು ವುದನ್ನು, ಸಮ್ಮೇಳನ ಕಟುವಾಗಿ ವಿರೋಧಿ ಸಿದೆ. ಈ ಪ್ರಸ್ತಾವನೆಗಳನ್ನು ಕೈಬಿಡುವಂತೆ ಕೇಂದ್ರದ ಸರಕಾರವನ್ನು ಒತ್ತಾಯಿಸಿ ಠರಾವು ಗಳನ್ನು ಅಂಗೀಕರಿಸಲಾಗಿದೆ: ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟಲು ಕೇಂದ್ರ ಮತ್ತು ರಾಜ್ಯ ಸರಕಾರ ತುರ್ತು ಕ್ರಮ ಕೈಗೊಳ್ಳಲು ಸಮ್ಮೇಳನ ಒತ್ತಾಯಿಸಿದೆ. ಸುಪ್ರೀಂಕೋರ್ಟ್, ಹೈಕೋರ್ಟ್ ನ್ಯಾಯಾಧೀಶರ ನೇಮಕಾತಿ, ವರ್ಗಾವಣೆ, ಕೆಲಸಕಾರ್ಯಗಳ ಸಮೀಕ್ಷೆ, ಇತ್ಯಾದಿಗಳ ಕುರಿತು ಪಾರದರ್ಶಿತೆ ಅಗತ್ಯ ಎಂದು ಸಮ್ಮೇಳನ ವಾದಿಸಿ, ಈಗಾಗಲೇ ಎಲ್ಲಾ ರಾಜಕೀಯ ಪಕ್ಷಗಳು, ವಕೀಲ ಸಂಘಗಳು, ಜನಸಾಮಾನ್ಯರು ಒಪ್ಪಿಕೊಂಡಂತೆ, ನ್ಯಾಶನಲ್ ಜುಡಿಶಿಯಲ್ ಕಮಿಷನ್ (ರಾಷ್ಟ್ರೀಯ ನ್ಯಾಯಾಂಗ ಆಯೋಗ) ಸ್ಥಾಪಿಸಲು ಸಮ್ಮೇಳನ ಕರೆ ಕೊಟ್ಟಿದೆ. ಲಕ್ಷಾಂತರ ಕಕ್ಷಿದಾರರಿಗೆ ಅನುಕೂಲವಾಗುವಂತೆ, ಸುಪ್ರೀಂಕೋರ್ಟ್‌ನ ವಿಭಾಗೀಯ ಪೀಠಗಳನ್ನು ದಕ್ಷಿಣ ಭಾರತದಲ್ಲಿ - ಬೆಂಗಳೂರಿನಲ್ಲಿ ಮತ್ತು ಈಶಾನ್ಯ ಭಾರತದಲ್ಲಿ ಸ್ಥಾಪಿಸಲು ಮತ್ತು ಕರ್ನಾಟಕದ ಉತ್ತರ ಭಾಗದಲ್ಲಿ ಹೈಕೋರ್ಟ್ ವಿಭಾಗೀಯ ಪೀಠವನ್ನು ಸ್ಥಾಪಿಸಲು ಸಮ್ಮೇಳನ ಒತ್ತಾಯಿಸಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ, 700 ಪ್ರತಿನಿಧಿಗಳು ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದರು.

ಸಮ್ಮೇಳನವನ್ನು ಉದ್ಘಾಟಿಸುತ್ತಾ ಕರ್ನಾಟಕದ ಮುಖ್ಯ ನ್ಯಾಯಮೂರ್ತಿ ಆರ್.ಪಿ.ಸೇಥಿ, ಅಖಿಲ ಭಾರತ ವಕೀಲರ ಸಂಘವು ಕಳೆದ ಹದಿನಾರು ವರ್ಷಗಳಿಂದ ತುಳಿತಕ್ಕೊಳಗಾದ ಬಡವರಿಗೆ, ಸಾಮಾಜಿಕ ನ್ಯಾಯ ದೊರಕಿಸಲು ಶ್ರಮಿಸುತ್ತಾ ಬಂದಿರುವುದನ್ನು ಶ್ಲಾಘಿಸಿದರು. ನ್ಯಾಯಾಂಗದ ಸ್ವಾತಂತ್ರ್ಯ-ಸ್ವಾಯತ್ತತೆಯನ್ನು ಪ್ರತಿಪಾದಿಸುತ್ತಾ, ಅದನ್ನು ಬಲಪಡಿಸಲು ನ್ಯಾಯಾಂಗಕ್ಕೆ ಬೇಕಾದ ಸಂಪನ್ಮೂಲಗಳನ್ನು ವಿನಿಯೋಗಿಸುವ ಸ್ವಾತಂತ್ರ್ಯವೂ ಇರಬೇಕೆಂದರು. ವಕೀಲರು ಈ ದಿಸೆಯಲ್ಲಿ ಜನಜಾಗೃತಿಗೊಳಿಸಬೇಕೆಂದರು. ಕರ್ನಾಟಕದ ಇನ್ನೊಬ್ಬ ನ್ಯಾಯಾಧೀಶರಾದ ವಿ.ಜೆ.ಸದಾಶಿವಯ್ಯನವರು ಭಾರತದಲ್ಲಿ ಜನರು ಸಾವಿರಾರು ವರ್ಷಗಳಿಂದ ಧಾರ್ಮಿಕ ನಂಬಿಕೆಗಳಿಗೆ ಒಳಗಾಗಿರುವು ದರಿಂದ, ಸಂವಿಧಾನದಲ್ಲಿ ಪ್ರತಿಒಬ್ಬ ನಾಗರೀಕನಿಗೆ ಧಾರ್ಮಿಕ ಸ್ವಾತಂತ್ರ್ಯ ಕೊಟ್ಟಿರುವುದರಿಂದ, ಸಂವಿಧಾನದಲ್ಲಿ ಪ್ರಸ್ತಾಪಿಸಲಾದ 'ಜಾತ್ಯಾತೀತತೆ' ಕೇವಲ ಭ್ರಮೆ ಎಂದು ಟೀಕಿಸಿದರು. ಆದರೆ ಸದಾಶಿವಯ್ಯನವರ ವಾದವನ್ನು ಸಮ್ಮೇಳನದ ಪ್ರತಿನಿಧಿಗಳು, ವಕೀಲರ ಸಂಘದ ಅ.ಭಾ.ಪ್ರಧಾನ ಕಾರ್ಯದರ್ಶಿ ಹರದೇವ ಸಿಂಗ್, ಸಮ್ಮೇಳನದಲ್ಲಿ ಅಂಗೀಕರಿಸಿದ ಠರಾವುಗಳ ಮೂಲಕ ತಿರಸ್ಕರಿಸಿದರು. ಧರ್ಮವನ್ನು ರಾಜಕೀಯದಲ್ಲಿ ಬೆರೆಸದಿರುವುದೇ ಧರ್ಮನಿರಪೇಕ್ಷತೆ, ಜಾತ್ಯಾತೀತತೆ ಎಂದು ವ್ಯಾಖ್ಯಾನಿಸಿದರು. ಬಹು ಧರ್ಮಗಳ, ಜಾತಿ ಮತಗಳ, ಸಂಸ್ಕೃತಿಗಳ ಭಾರತದಲ್ಲಿ 'ಹಿಂದುಧರ್ಮ' ಒಂದನ್ನೇ ರಾಜ್ಯ ಪ್ರಭುತ್ವ ಎತ್ತಿ ಹಿಡಿಯುವುದು ಸಂವಿಧಾನಕ್ಕೆ ವಿರುದ್ಧ ಎಂದೂ, ಅಂತಹ ಪ್ರವೃತ್ತಿ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಗೆ ಅಪಾಯ ಎಂದೂ ಸ್ಪಷ್ಟಪಡಿಸಿದರು.

ಸಮ್ಮೇಳನದ ಅಂಗವಾಗಿ ನಡೆದ ವಿಚಾರ ಸಂಕಿರಣದಲ್ಲಿ ಪ್ರೊ. ಬಿ.ಟಿ. ಪಾರ್ಥಸಾರಥಿ 'ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಸಮಾಜ ಕಟ್ಟುವಲ್ಲಿ ವಕೀಲ ಪಾತ್ರ'ದ ಕುರಿತು ಉಪನ್ಯಾಸ ನೀಡಿದರು. ಮಾಜಿ ಅಡ್ವಕೇಟ್ ಜನರಲ್ ಆರ್.ಎನ್.ಮೂರ್ತಿ 'ಪ್ರಜಾಪ್ರಭುತ್ವ ಮತ್ತು ನ್ಯಾಯಾಂಗದಲ್ಲಿ ಪಾರದರ್ಶಕತೆ' ಕುರಿತು ಉಪನ್ಯಾಸ ನೀಡಿದರು. ಎ.ಎನ್. ಜಯರಾಮ್, ಭಾರತದ ಮಾಜಿ ಅಡಿಶನಲ್ ಸೋಲಿಸಿಟರ್ ಅಧ್ಯಕ್ಷತೆ ವಹಿಸಿದ್ದರು. ಇನ್ನೊಂದು ಅಧಿವೇಶನದಲ್ಲಿ 'ಕಂಪ್ಯೂಟರ್ ಬಳಕೆ'ಯ ಕುರಿತು ಡಾ|| ಸೀತಾರಾಮ್ ಮತ್ತು 'ಆಯಾಸ ಪರಿಹಾರ'ದ ಕುರಿತು ಡಾ. ರಮೇಶ್ ವಕೀಲರಿಗೆ ಸಂಬಂಧಿಸಿ ಪ್ರಾಯೋಗಿಕವಾಗಿ ವಿವರಿಸಿ ತಿಳಿಸಿದರು. ಕರ್ನಾಟಕದ ನ್ಯಾಯಾಧೀಶರಾದ ವಿ.ಗೋಪಾಲಗೌಡರು ಅಧ್ಯಕ್ಷತೆ ವಹಿಸಿದ್ದರು. ಸಮಾಜದಲ್ಲಿ ಅತ್ಯಂತ ತುಳಿತಕ್ಕೊಳಗಾದ ರೈತ-ಕಾರ್ಮಿಕರಿಗೆ, ಮಹಿಳೆಯರಿಗೆ, ದಲಿತರಿಗೆ ನ್ಯಾಯ ಒದಗಿಸಿಕೊಡುವಲ್ಲಿ ನಿಷ್ಠರಾದ ವಕೀಲರಿಗೆ, 'ಆಯಾಸ' ಎನ್ನುವುದೇ ಆಗಲಾರದು, ಬದಲು ಆತ್ಮತೃಪ್ತಿ ಉಂಟಾಗುವುದು ಎಂದರು ಗೌಡರು. ಸಮ್ಮೇಳನದ ಕೊನೆಯಲ್ಲಿ, 30 ಜನ ವಕೀಲರ ರಾಜ್ಯ ಸಮಿತಿ ಒಂದನ್ನು ಆಯ್ಕೆ ಮಾಡಲಾಯಿತು. ಹಿರಿಯ ನ್ಯಾಯವಾದಿ ಜಿ.ವಿ.ಶಾಂತರಾಜು ಅವರನ್ನು ಅಧ್ಯಕ್ಷರನ್ನಾಗಿ ಮತ್ತು ಎಚ್.ಎನ್. ನಾಗಭೂಷಣ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಮುಂದಿನ ದಿನಗಳಲ್ಲಿ ಪ್ರಗತಿಪರ ಹಾಗೂ ಪ್ರಜಾಪ್ರಭುತ್ವವಾದಿ ವಕೀಲರನ್ನು ಜಿಲ್ಲಾ, ತಾಲ್ಲೂಕು ಮಟ್ಟಗಳಲ್ಲಿ ಸಂಘಟಿಸಿ ಆ ಘಟಕಗಳು ಸಕ್ರಿಯವಾಗಿ ಶ್ರಮಿಸುವಂತೆ ಸಮ್ಮೇಳನ ಕರೆ ನೀಡಿತು.

### ವಾರದ ವ್ಯಂಗ್ಯಚಿತ್ರ




Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್ ಸಂಪಾದಕರು: ಜಿ.ಎನ್ ನಾಗರಾಜ್, ವ್ಯವಸ್ಥಾಪಕ ಮತ್ತು ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462, ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು-52

Printed & Published by Communist Party of India (Marxist), Karnataka State Committee. Editor: G.N. NAGARAJ